ಸಂಪುಟ: 05 ಸಂಚಿಕೆ: 103 ಪುಟಗಳು: 08 ಗುರುವಾರ 26 ಜೂನ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು.

# ನಭಕ್ಕೆ ಚಿಮ್ಮಿದ ಶುಭಾಂಶು ಶುಕ್ಲಾ

1 ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ ಹರ್ಷದ ಹೊನಲು

2 ಅಧಿಕೃತ ಉಡಾವಣೆ ಕಂಡ ಆಕ್ಸಿಯಮ್-4 ಬಾಹ್ಯಾಕಾಶ ಯೋಜನೆ

3 ಕೆನಡಿ ಬಾಹ್ಯಾಕಾಶದಿಂದ ನಭಕ್ಕೆ ಚಿಮ್ಮಿದ ಫಾಲ್ಕನ್-9 ರಾಕೆಟ್.

4 ಇತಿಹಾಸ ನಿರ್ಮಿಸಿದ ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ.






• ಉದಯವಾಹಿನಿ ಫ್ಲೋರೀಡಾ


ಮಹತ್ವಾಕಾಂಕ್ಷಿ ಆಕ್ಸಿಯಮ್-4 ಬಾಹ್ಯಾಕಾಶ ಯೋಜನೆಗೆ ಅಧಿಕೃತ ಚಾಲನೆ ದೊರೆತಿದೆ. ಭಾರತೀಯ ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ನೇತೃತ್ವದ ಗಗನಯಾತ್ರಿಗಳ ತಂಡವು, ಫ್ಲೋರಿಡಾದಲ್ಲಿರುವ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್‌ಎಕ್ಸ್‌ನ ಫಾಲ್ಕನ್-9 ರಾಕೆಟ್‌ನಲ್ಲಿ ನಭಕ್ಕೆ ಚಿಮ್ಮಿದೆ. ಶುಭಾಂಶು 1984ರ ಬಳಿಕ ಬಾಹ್ಯಾಕಾಶವನ್ನು ತಲುಪಿದ ಎರಡನೇ ಭಾರತೀಯ ಎಂಬ ಇತಿಹಾಸ ನಿರ್ಮಿಸಿದ್ದಾರೆ.

ಭಾರತೀಯ ಕಾಲಮಾನ ಪ್ರಕಾರ 12:01 ಗಂಟೆಗೆ ಉಡಾವಣೆ ಕಂಡ ಫಾಲ್ಕನ್-9 ರಾಕೆಟ್, ಯಾವುದೇ ಅಡೆತಡೆ ಇಲ್ಲದೇ ಯಶಸ್ವಿಯಾಗಿ ನಭಕ್ಕೆ ಚಿಮ್ಮಿತು. ನಾಸಾ ಈ ಕುರಿತು ಕ್ಷಣಕ್ಷಣದ ಮಾಹಿತಿ ನೀಡುತ್ತಿದ್ದು, ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ರಾಕೆಟ್‌ನಲ್ಲಿ ತಂಡವನ್ನು ಮುನ್ನಡೆಸುತ್ತಿರುವ ಚಿತ್ರಗಳನ್ನು ಬಿಡುಗಡೆ ಮಾಡಿದೆ. ತಾಂತ್ರಿಕ ತೊಂದರೆ ಮತ್ತು ಪ್ರತಿಕೂಲ ಹವಾಮಾನದ ಕಾರಣದಿಂದಾಗಿ ಎರಡು ಬಾರಿ ಮುಂದೂಡಲ್ಪಟ್ಟಿದ್ದ ಆಕ್ಸಿಯಮ್-4 ಯೋಜನೆಯನ್ನು ಉಡಾವಣೆ ಮಾಡಲಾಗುವುದು ಎಂದು ನಾಸಾ ಮತ್ತು ಸ್ಪೇಸ್‌ಎಕ್ಸ್ ಜಂಟಿಯಾಗಿ ಭರವಸೆ ನೀಡಿತ್ತು. ಅದರಂತೆ ಫ್ಲೋರಿಡಾದಲ್ಲಿ ಕೆನಡಿ ಬಾಹ್ಯಾಕಾಶ ಕೇಂದ್ರದ ಉಡಾವಣಾ ಸಂಕೀರ್ಣ 39ಎನಿಂದ, ಫಾಲ್ಕನ್-9 ರಾಕೆಟ್ ಉಡಾವಣೆ ಕಂಡಿತು. 1984 ರಲ್ಲಿ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ಸೋವಿಯತ್ ಕಾರ್ಯಾಚರಣೆಯ ಭಾಗವಾಗಿ, ಬಾಹ್ಯಾಕಾಶ ಯಾನ ಕೈಗೊಂಡಿದ್ದರು. ರಾಕೇಶ್ ಶರ್ಮಾ ಬಾಹ್ಯಾಕಾಶವನ್ನು ತಲುಪಿದ ಮೊಟ್ಟ ಮೊದಲ ಭಾರತೀಯ ಎಂಬ ಹೆಗ್ಗಳಿಕೆಯನ್ನು ಮುಡಿಗೇರಿಸಿಕೊಂಡಿದ್ದಾರೆ. ಇದೀಗ ಶುಭಾಂಶು ಶುಕ್ಲಾ, ಬಾಹ್ಯಾಕಾಶವನ್ನು ತಲುಪಿದ ಎರಡನೇ ಭಾರತೀಯ ಎಂಬ ಇತಿಹಾಸವನ್ನು ನಿರ್ಮಿಸಿದ್ದಾರೆ. ಶುಭಾಂಶು ಶುಕ್ಲಾ ಅವರಿಗೆ ಇತ್ತೀಚೆಗೆ ಭಾರತೀಯ ವಾಯುಸೇನೆ ಶುಭ ಹಾರೈಕೆ ಸಂದೇಶ ಕಳುಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

**ಇತರ ಗಗನಯಾತ್ರಿಗಳು:** ಈ ಕಾರ್ಯಾಚರಣೆಯ ಪೈಲಟ್ ಗ್ರೂಪ್ ಕ್ಯಾಪ್ಟನ್ ಶುಕ್ಲಾ ಅವರಲ್ಲದೆ, ಪೋಲೆಂಡ್‌ನ ಸ್ಲಾವೋಸ್ಜ್ ಉಜ್ನಾನ್ಸ್ಕಿ-ವಿಸ್ನಿಯೆವ್ಸ್ಕಿ, ಹಂಗೇರಿಯ ಟಿಬೋರ್ ಕಾಪು ಮತ್ತು ಅಮೆರಿಕದ ಕಮಾಂಡರ್ ಪೆಗ್ಗಿ ವಿಟ್ಸನ್ ಕೂಡ ಆಕ್ಸಿಯಮ್-4 ಬಾಹ್ಯಾಕಾಶ ಯೋಜನೆಯ ಭಾಗವಾಗಿದ್ದಾರೆ. ಆಕ್ಸಿಯಮ್ -4 ಮಿಷನ್‌ನ ನಾಲ್ವರು ಗಗನಯಾತ್ರಿಗಳು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳುತ್ತಿದ್ದಾರೆ. ಹದಿನೈದು ದಿನಗಳ ಕಾರ್ಯಾಚರಣೆಯ ಸಮಯದಲ್ಲಿ, ಈ ಗಗನಯಾತ್ರಿಗಳು 60ಕ್ಕೂ ಹೆಚ್ಚಿನ ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲಿದ್ದಾರೆ. ಅವುಗಳಲ್ಲಿ ಏಳು ಪ್ರಯೋಗಗಳನ್ನು ಭಾರತೀಯ ಸಂಶೋಧಕರು ಪ್ರಸ್ತಾಪಿಸಿದ್ದಾರೆ. ಆಕ್ಸಿಯಮ್-4 ಬಾಹ್ಯಾಕಾಶ ಕಾರ್ಯಾಚರಣೆಗೂ ಕೆಲವೇ ಗಂಟೆಗಳ ಮೊದಲು ಮಾಧ್ಯಮ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಭಾರತೀಯ ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ, ನಾನು ಕೇವಲ ಉಪಕರಣಗಳು ಮತ್ತು ಸಲಕರಣೆಗಳನ್ನು ಮಾತ್ರವಲ್ಲದೆ, ಶತಕೋಟಿ ಭಾರತೀಯ ಹೃದಯಗಳ ಭರವಸೆಗಳು ಮತ್ತು ಕನಸುಗಳನ್ನು ಸಹ ಕೊಂಡೊಯ್ಯಲಿದ್ದೇನೆ ಎಂದು ಹೇಳಿದ್ದರು.

## ಭಾರತದ ಕಾಸ್ಮಿಕ್ ಜಿಗಿತ

**ಆಕ್ಸಿಯಮ್-4 ಕಾರ್ಯಾಚರಣೆ ಯಶಸ್ವಿಯಾಗಿರುವುದರಿಂದ, ಭಾರತವು ಐತಿಹಾಸಿಕ ಕಾಸ್ಮಿಕ್ ಜಿಗಿತವನ್ನು ಸಾಧಿಸಿದೆ. ಭಾರತೀಯ ವಾಯುಪಡೆಯ ಪೈಲಟ್ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ, ಫ್ಲೋರಿಡಾದ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಲ್ಲಿರುವ ಲಾಂಚ್ ಕಾಂಪ್ಲೆಕ್ಸ್ 39ಎ ನಿಂದ ಬಾಹ್ಯಾಕಾಶಕ್ಕೆ ಹಾರಿದ ಫಾಲ್ಕನ್ 9 ರಾಕೆಟ್‌ನ್ನು ಮುನ್ನಡೆಸುತ್ತಿದ್ದಾರೆ. ಈ ಯೋಜನೆ ಭಾರತದ ಬಾಹ್ಯಾಕಾಶ ಕ್ಷೇತ್ರದ ಸಾಮರ್ಥ್ಯವನ್ನು ಜಗತ್ತಿಗೆ ಪರಿಚಯಿಸಿದೆ.**



## ನೀನಿಲ್ಲದೆ ಯಾವ ಸಾಧನೆಯೂ ಅಸಾಧ್ಯ ?

**ಶುಭಾಂಶು ಶುಕ್ಲಾ ಬಾಹ್ಯಾಕಾಶ ತಲುಪುವ ಮುನ್ನ ತಮ್ಮ ಸಂಗಾತಿಗೊಂದು ಪ್ರೀತಿಯ ಭಾವನಾತ್ಮಕ ಸಂದೇಶವನ್ನು ರವಾನಿಸಿದ್ದಾರೆ. ಗಾಜಿನ ಗೋಡೆಯ ಮೇಲೆ ಅತ್ತ ಕಡೆಯಿಂದ ಶುಭಾಂಶು ಹಸ್ತವಿದ್ದರೆ, ಇತ್ತ ಪತ್ನಿ ಕಾಮ್ನಾ ಅವರ ಕೈ ಇಟ್ಟು ಅವರ ಕೈಗಳ ಮೇಲೆ ತಮ್ಮ ಹಣೆಯನ್ನು ಇಟ್ಟಿದ್ದಾರೆ. ಈ ಫೋಟೋವನ್ನು ಶುಭಾಂಶು ಅವರು ಅವರ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಬೀಳ್ಕೊಡುವ ಬೇಸರ, ಹೆಮ್ಮೆಯ ವಿಚಾರ ಅವರಫೋಟೋದಲ್ಲಿ ಕಂಡುಬರುತ್ತದೆ.**

## ಅತ್ಯದ್ಭುತ ಸಂಗಾತಿ ನೀನಿಲ್ಲದೆ...

**ಇನ್‌ಸ್ಟಾಗ್ರಾಮ್ ಪೋಸ್ಟ್‌ನಲ್ಲಿ ಪತ್ನಿ ಕಾಮ್ನಾ ಶುಕ್ಲ ಉಲ್ಲೇಖಿಸಿ, ಕಾಮ್ನಾ ನೀನು ಅತ್ಯದ್ಭುತ ಸಂಗಾತಿ. ನೀನಿಲ್ಲದೆ ಈ ಸಾಧನೆ ಮಾಡೋದಕ್ಕೆ ಸಾಧ್ಯ ಆಗ್ತಾ ಇರಲಿಲ್ಲ. ನೀನಿಲ್ಲದೆ ಇದ್ಯಾವುದಕ್ಕೂ ಅರ್ಥವಿರುತ್ತಿರಲಿಲ್ಲ ಎಂದು ಶುಕ್ಲಾ ಹೇಳಿದ್ದಾರೆ. ಅವರ ಈ ಪೋಸ್ಟ್ ನೋಡುಗರಲ್ಲಿ ಮೈನಿಮಿರುವಂತೆ ಮಾಡಿದೆ. ಮುಂದುವರೆದು, ಹಲವು ಅಡೆತಡೆ ಮಧ್ಯೆ ಜೂನ್ 25ರ ಮುಂಜಾನೆ ಭೂಮಿಯನ್ನು ತೊರೆದು ಬಾಹ್ಯಾಕಾಶದತ್ತ ತೆರಳಲು ನಿರ್ಧರಿಸಿದ್ದೇವೆ. ಈ ಆಕ್ಸಿಯಮ್-4 ಯೋಜನೆಗಾಗಿ ಸಹಕರಿಸಿದ ಎಲ್ಲರಿಗೂ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ನನ್ನನ್ನು ಹರಸಿದ ಮತ್ತು ಪ್ರೀತಿಸಿದ ನನ್ನ ದೇಶದ ಜನರಿಗೂ ಧನ್ಯವಾದ ಎಂದು ಬರೆದುಕೊಂಡಿದ್ದಾರೆ. ನಾನು ಹಲವರ ಬೆಂಬಲದೊಂದಿಗೆ ಹೊರಟಿದ್ದೇನೆ ಒಂಟಿಯಾಗಿಲ್ಲ ನನ್ನ ಕುಟುಂಬ ಮತ್ತು ಸ್ನೇಹಿತರಿಗೆ ಹೆಚ್ಚು ಚಿರಋಣಿ. ಸದ್ಯ ನಾವ್ಯಾರು ಬಾಹ್ಯಾಕಾಶಕ್ಕೆ ಒಬ್ಬಂಟಿಯಾಗಿ ಹೋಗುವುತ್ತಿಲ್ಲ. ನಿಮ್ಮೆಲ್ಲರ ಬೆಂಬಲದ ಜೊತೆಗೆ ಹೊರಟಿದ್ದೇವೆ. ಇದಕ್ಕೆ ನಾನು ಪ್ರತಿಯೊಬ್ಬರಿಗೂ ಕೃತಜ್ಞನಾಗಿದ್ದೇನೆ ಎಂದು ಪೋಸ್ಟ್ ಹಂಚಿಕೊಂಡಿದ್ದಾರೆ.**

## ವಾಯುಪಡೆಯಲ್ಲಿ ಪರೀಕ್ಷಕ ಪೈಲಟ್ ಆಗಿ ಪಯಣ

**ಭಾರತೀಯ ವಾಯುಪಡೆಯಲ್ಲಿ ಗ್ರೂಪ್ ಕ್ಯಾಪ್ಟನ್ ಶುಕ್ಲಾ ಅವರ ವೃತ್ತಿ ಜೀವನವು, ವೈಮಾನಿಕ ಕ್ಷೇತ್ರದಲ್ಲಿ ಒಂದು ಶ್ರೇಷ್ಠ ಉದಾಹರಣೆಯಾಗಿದೆ. ಅವರು ಕೇವಲ ಒಬ್ಬ ಫೈಟರ್ ಪೈಲಟ್ ಮಾತ್ರವಲ್ಲ, ಅವರು ಒಬ್ಬ ನಿಪುಣ ಪರೀಕ್ಷಕ ಪೈಲಟ್ ಕೂಡ ಆಗಿದ್ದಾರೆ. ಈ ವಿಶಿಷ್ಟತೆಯು ಅವರನ್ನು ವಾಯುಪಡೆಯ ಅತ್ಯಂತ ಗಣ್ಯ ಶ್ರೇಣಿಯಲ್ಲಿರಿಸುತ್ತದೆ. ಪರೀಕ್ಷಕ ಪೈಲಟ್‌ಗಳು ಹೊಸ ಮತ್ತು ಮಾರ್ಪಡಿಸಿದ ವಿಮಾನಗಳ ಕಾರ್ಯಕ್ಷಮತೆ, ಸುರಕ್ಷತೆ ಮತ್ತು ಯುದ್ಧ ಸನ್ನದ್ಧತೆಯನ್ನು ಮೌಲ್ಯಮಾಪನ ಮಾಡಲು, ಅವುಗಳನ್ನು ಹಾರಾಟ ನಡೆಸುವ ಅಪರೂಪದ ತಜ್ಞರಾಗಿರುತ್ತಾರೆ. ಅವರು ಪೈಲಟ್, ಇಂಜಿನಿಯರ್ ಮತ್ತು ವಿಜ್ಞಾನಿಯ ಮಿಶ್ರಣವಾಗಿದ್ದು, ವಾಯುಬಲವಿಜ್ಞಾನ, ಏವಿಯಾನಿಕ್ಸ್ ಮತ್ತು ವಿಮಾನ ವ್ಯವಸ್ಥೆಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ಹೊಂದಿರುತ್ತಾರೆ. ಟೆಸ್ಟ್ ಪೈಲಟ್‌ಗಳ ಅನುಭವವು ವ್ಯಾಪಕ ಮತ್ತು ವೈವಿಧ್ಯಮಯವಾಗಿದ್ದು, ಸುಮಾರು 2,000 ಗಂಟೆಗಳ ಹಾರಾಟದ ಅನುಭವವನ್ನು ಅವರು ಹೊಂದಿದ್ದಾರೆ. ಅದೇ ರೀತಿ ಶುಭಾಂಶು ಶುಕ್ಲಾ ಕೂಡ ತಮ್ಮ ಅಸಾಧಾರಣ ಹೊಂದಾಣಿಕೆ ಮತ್ತು ಪರಿಣತಿಯನ್ನು ಪ್ರದರ್ಶಿಸುತ್ತಾ, ವಿವಿಧ ರೀತಿಯ ವಿಮಾನಗಳನ್ನು ಚಲಾಯಿಸಿದ್ದಾರೆ. ಅವರ ಲಾಗ್‌ಬುಕ್‌ನಲ್ಲಿ ಈ ಕೆಳಗಿನ ಪ್ರಬಲ ಯುದ್ಧ ಮತ್ತು ತರಬೇತಿ ವಿಮಾನಗಳು ಸೇರಿವೆ.**

## ಬೆಂಗಳೂರಿನ ಖಾಸಗಿ ಕಾಲೇಜುಗಳ ಮೇಲೆ ಇಡಿ ದಾಳಿ

• ಉದಯವಾಹಿನಿ ಬೆಂಗಳೂರು

ಕೆಲವು ಖಾಸಗಿ ಕಾಲೇಜುಗಳಲ್ಲಿ ನಡೆದ ಇಂಜಿನಿಯರಿಂಗ್ ಸೀಟು ಬ್ಲಾಕಿಂಗ್ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯವು ಇಡಿ ಹಲವು ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬಿಎಂಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್, ಆಕಾಶ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಮತ್ತು ನ್ಯೂ ಹೊರೈಜನ್ ಕಾಲೇಜ್ ಆಫ್ ಇಂಜಿನಿಯರಿಂಗ್‌ನಂತಹ ಕಾಲೇಜುಗಳ ಆವರಣಗಳು, ಬಿಎಂಎಸ್‌ನ ಟ್ರಸ್ಟಿಗಳು, ಅವರ ಪ್ರಮುಖ ಸಹಚರರು ಮತ್ತು ಕೆಲವು ಶಿಕ್ಷಣ ಸಲಹೆಗಾರರು, ಏಜೆಂಟ್‌ಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧಕಾರ್ಯ ನಡೆಸಿದ್ದಾರೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಕೇಂದ್ರದ ತನಿಖಾ ಸಂಸ್ಥೆಯ ಬೆಂಗಳೂರು ವಲಯ ಘಟಕವು ತನಿಖೆಯನ್ನು ನಡೆಸುತ್ತಿದೆ ಎಂದು ಅವರು ಹೇಳಿದರು.

## ಬಹಿರಂಗ ಹೇಳಿಕೆ ನೀಡುವ ಶಾಸಕರೇ ಹುಷಾರ್! ಕೈ ಹೈಕಮಾಂಡ್ ವಾರ್ನಿಂಗ್?

• ಉದಯವಾಹಿನಿ ಬೆಂಗಳೂರು

ಬಹಿರಂಗ ಹೇಳಿಕೆ ನೀಡುವ ಕಾಂಗ್ರೆಸ್ ಶಾಸಕರೇ ಹುಷಾರ್. ಕೈ ಕಟ್ಟಿ ಬಾಯಿ ಮುಚ್ಚಿ, ಇದು ರಾಜ್ಯ ಕಾಂಗ್ರೆಸ್ ನಾಯಕರಿಗೆ ಹೈಕಮಾಂಡ್ ಎಚ್ಚರಿಕೆ. ಹೈಕಮಾಂಡ್ ಆದೇಶದ ಬೆನ್ನಲ್ಲೇ ಕೆಲ ಶಾಸಕರು ಸೈಲೆಂಟ್ ಆಗಿದ್ದು, ಸಿಎಂ, ಡಿಸಿಎಂ ಅಲರ್ಟ್ ಆಗಿದ್ದಾರೆ. ಭ್ರಷ್ಟಾಚಾರ ಆರೋಪ, ಕಮಿಷನ್ ಕಿತ್ತಾಟ, ಸಚಿವರ ಅಸಹಕಾರದ ಬಗ್ಗೆ ಕಾಂಗ್ರೆಸ್ ಶಾಸಕರ ಅಸಹನೆ ಜೋರಾಗಿತ್ತು. ಇದು ಕಾಂಗ್ರೆಸ್ ಪಕ್ಷಕ್ಕೆ ನುಂಗಲಾರದ ತುತ್ತಾಗಿತ್ತು. ಹಾಗಾಗಿ ಡೆಲ್ಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೇಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಸಿಎಂ ಮೂಲಕ ವಾರ್ನಿಂಗ್ ಕಾಲ್ ರವಾನಿಸಿದ್ದಾರೆ. ಇವತ್ತು ವೇಣುಗೋಪಾಲ್ ಭೇಟಿ ವೇಳೆಯಲ್ಲೂ ಸಿಎಂಗೆ ಸಂದೇಶ ರವಾನೆಯಾಗಿದೆ ಎನ್ನಲಾಗಿದೆ. ಒಳ್ಳೆ ಬೆಳವಣಿಗೆಯಲ್ಲ, ಇದು ಪಕ್ಷದ ಇಮೇಜ್‌ಗೆ ಡ್ಯಾಮೇಜ್, ಸರ್ಕಾರಕ್ಕೂ ಕೆಟ್ಟ ಹೆಸರು. ಮೊದಲು ಬಾಯಿ ಬಂದ್ ಮಾಡಿ ಎಂದು ಕಟ್ಟಾಜ್ಞೆ ಹೊರಡಿಸಿದ್ದಾರೆ. ಈ ನಡುವೆ ಇವತ್ತು ಬಿ.ಆರ್‌ಪಾಟೀಲ್ ಕರೆದು ಸಿಎಂ ಎಚ್ಚರಿಕೆ ಕೊಡುವ ಸಾಧ್ಯತೆ ಇದ್ದು, ಜಮೀರ್ ಉಪಸ್ಥಿತಿಯಲ್ಲಿ ಸಮಸ್ಯೆ ಬಗೆಹರಿಸಲು ಪ್ಲ್ಯಾನ್ ಮಾಡಿದ್ದಾರೆ.

## ದಿಲ್ಲಿಯಿಂದ ಮಹತ್ವದ ವಿಷಯ ಹೊತ್ತು ತಂದ ವಿಜಯೇಂದ್ರ

• ಉದಯವಾಹಿನಿ ಬೆಂಗಳೂರು

ಕರ್ನಾಟಕ ಬಿಜೆಪಿಯಲ್ಲಿ ಮಹತ್ವದ ಬೆಳವಣಿಗೆಗಳು ನಡೆಯುತ್ತಿವೆ. ವಿರೋಧ ಪಕ್ಷದ ನಾಯಕ ಆರ್ ಅಶೋಕ್ ದೆಹಲಿ ತೆರಳಿದ ಬೆನ್ನಲ್ಲೇ ಅವರ ಹಿಂದೆ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಸಹ ವಿಮಾನ ಏರಿ ದಲ್ಲಿ ತಲುಪ್ಪಿದ್ದರು. ಇದೀಗ ವಿಜಯೇಂದ್ರ ದೆಹಲಿಯಿಂದ (ಜೂನ್ 25) ಸಂಜೆ ಬೆಂಗಳೂರಿಗೆ ವಾಪಸ್ ಆಗಿದ್ದು, ಮಹತ್ವದ ವಿಷಯಗಳನ್ನು ಹೊತ್ತು ತಂದಿದ್ದಾರೆ. ಇನ್ನು ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆಯೇ ಬಿಜೆಪಿ ರಾಜ್ಯ ಪದಾಧಿಕಾರಿಗಳ ಬಗ್ಗೆ ಮಹತ್ವದ ಸುಳಿವು ನೀಡಿದ್ದಾರೆ. ಅಲ್ಲದೇ ರಾಜ್ಯಾಧ್ಯಕ್ಷ ಹಾಗೂ ರಾಷ್ಟ್ರೀಯ ಅಧ್ಯಕ್ಷರ ನೇಮಕದ ಬಗ್ಗೆ ವಿಚಾರಗಳನ್ನು ಹಂಚಿಕೊಂಡಿದ್ದು, ರಾಜ್ಯ ಬಿಜೆಪಿಯಲ್ಲಿ ಕೆಲ ಬದಲಾವಣೆಗಳು ಆಗುವುದು ಪಕ್ಕಾ ಆದಂತಾಗಿದೆ. ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ಅತಿ ಶೀಘ್ರದಲ್ಲೇ ಬಿಜೆಪಿ ರಾಜ್ಯ ಪದಾಧಿಕಾರಿಗಳ ಆಯ್ಕೆ ನಡೆಯಲಿದೆ.

## ಹೈಕೋರ್ಟ್‌ನಲ್ಲಿ ಅಗ್ರಿಗೇಟರ್, ಬೈಕ್ ಮಾಲೀಕರ ವಾದ!

• ಉದಯವಾಹಿನಿ ಬೆಂಗಳೂರು

ರಾಜ್ಯ ಸರ್ಕಾರ ನಿಷೇಧ ಮಾಡಿರುವ ಬೈಕ್ ಟ್ಯಾಕ್ಸಿ ಸೇವೆ ಐಷಾರಾಮಿ ಅಲ್ಲ, ಬದಲಿಗೆ ಅದು ಅವಶ್ಯಕತೆಯಾಗಿದೆ..ಹೀಗಾಗಿ ಸರ್ಕಾರಕ್ಕೆ ಅದನ್ನು ನಿಷೇಧಿಸುವ ಅಧಿಕಾರ ಇಲ್ಲ ಎಂದು ಅಗ್ರಿಗೇಟರ್‌ಗಳು, ಬೈಕ್ ಮಾಲೀಕರು ಕರ್ನಾಟಕ ಹೈಕೋರ್ಟ್‌ನಲ್ಲಿ ತಮ್ಮ ವಾದ ಮಂಡಿಸಿದ್ದಾರೆ. ಬೈಕ್ ಟ್ಯಾಕ್ಸಿಗಳ ಮೇಲಿನ ರಾಜ್ಯ ಸರ್ಕಾರದ ಸಂಪೂರ್ಣ ನಿಷೇಧವನ್ನು ಪ್ರಶ್ನಿಸಿರುವ ಅರ್ಜಿದಾರರು ಕರ್ನಾಟಕ ಹೈಕೋರ್ಟ್‌ನಲ್ಲಿ ಸೇವೆಯು ನಗರ ಸಾರಿಗೆ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ಅಸ್ತಿತ್ವದಲ್ಲಿರುವ ಕಾನೂನು ನಿಬಂಧನೆಗಳ ಅಡಿಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕು ಎಂದು ವಾದಿಸಿದರು. ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗಳನ್ನು ಪರಿಣಾಮಕಾರಿಯಾಗಿ ನಿಷೇಧಿಸಿದ ಏಕ ನ್ಯಾಯಾಧೀಶರ ಹಿಂದಿನ ತೀರ್ಪಿನ ವಿರುದ್ಧ ರೈಡ್-ಹೇಲಿಂಗ್ ಪ್ಲಾಟ್‌ಫಾರ್ಮ್‌ಗಳಾದ ಓಲಾ, ಉಬರ್, ರ್ಯಾಪಿಡೊ ಬೈಕ್ ಟ್ಯಾಕ್ಸಿ ಮಾಲೀಕರು, ಸಂಘಗಳು ಸಲ್ಲಿಸಿದ ಮೇಲ್ಮನವಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ ಕಾಮೇಶ್ವರ ರಾವ್ ಮತ್ತು ನ್ಯಾಯಮೂರ್ತಿ ಸಿ ಎಂ ಜೋಶಿ ಅವರನ್ನೊಳಗೊಂಡ ವಿಭಾಗೀಯ ಪೀಠವು ವಿಚಾರಣೆ ನಡೆಸುತ್ತಿದೆ.

## ದೇವನಹಳ್ಳಿ ಬಳಿಯ ಮೂರು ಹಳ್ಳಿಗಳ 495 ಎಕರೆ ಭೂ ಸ್ವಾಧೀನ ಇಲ್ಲ: ಎಂ.ಬಿ.ಪಾಟೀಲ್

• ಉದಯವಾಹಿನಿ ಬೆಂಗಳೂರು



ಹೈಟೆಕ್ ಡಿಫೆನ್ಸ್ ಅಂಡ್ ಏರೋಸ್ಪೇಸ್ ಪಾರ್ಕ್ ನಿರ್ಮಾಣಕ್ಕಾಗಿ ದೇವನಹಳ್ಳಿಯ ಚನ್ನರಾಯಪಟ್ಟಣ ಹೋಬಳಿಯ ಮೂರು ಗ್ರಾಮಗಳ 495 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿಲ್ಲ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂಬಿ ಪಾಟೀಲ್ ತಿಳಿಸಿದ್ದಾರೆ. ಭೂ ಸ್ವಾಧೀನ ವಿಚಾರವಾಗಿ ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ಸ್ಪಷ್ಟನೆ ನೀಡಿದ ಸಚಿವರು, ಮುಂದೆ ಕೈಗಾರಿಕೆ ಉದ್ದೇಶಕ್ಕಾಗಿ ಈ ಹೋಬಳಿಯಿಂದ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಿಲ್ಲ, ಪ್ರತಿಭಟನಾ ನಿರತ ರೈತರು ತಮ್ಮ ಧರಣಿಯನ್ನು ಕೈಬಿಡುವಂತೆ ಮನವಿ ಮಾಡಿದ್ದಾರೆ.

ವಿಧಾನಸೌಧದ ಕಚೇರಿಯಲ್ಲಿ ದೇವನಹಳ್ಳಿ ಶಾಸಕ ಕೆ.ಎಚ್.ಮುನಿಯಪ್ಪ ಅವರೊಂದಿಗೆ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿ 1,772.2 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲು 2021ರ ಆಗಸ್ಟ್ 27ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, 2022ರ ಫೆ.15ರಂದು ಸರಕಾರ ಆದೇಶ ಹೊರಡಿಸಿದೆ ಎಂದು ಸಚಿವರು ವಿವರಿಸಿದರು .

ಈ ಭಾಗದ ರೈತರು ಕೈಗಾರಿಕಾ ಯೋಜನೆಗಳಿಗಾಗಿ ಈ ಹಿಂದೆ ಎರಡು ಬಾರಿ ಭೂಮಿ ಕಳೆದುಕೊಂಡಿರುವುದು ಗಮನಕ್ಕೆ ಬಂದಿದೆ. ಇದನ್ನು ಗಣನೆಗೆ ತೆಗೆದುಕೊಂಡು ಚನ್ನರಾಯಪಟ್ಟಣದಲ್ಲಿ 231.23 ಎಕರೆ, ಮತ್ತಿಬಾರ್ಲು ನಲ್ಲಿ 185.18 ಎಕರೆ, ಮತ್ತು ಶ್ರೋತ್ರಿಯ ತೆಲ್ಲೋಹಳ್ಳಿಯ 78.21 ಎಕರೆ ಪ್ರದೇಶವನ್ನು ಭೂಸ್ವಾಧೀನದಿಂದ ಹೊರಗಿಡಲು ಸರ್ಕಾರ ನಿರ್ಧರಿಸಿದೆ ಎಂದು ಪಾಟೀಲ್ ವಿವರಿಸಿದರು. ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವನ್ನು ಜಿಲ್ಲಾಧಿಕಾರಿ ನಿರ್ಧರಿಸುತ್ತಾರೆ ಮತ್ತು ಭೂಮಿ ಕಳೆದುಕೊಳ್ಳುವವರು ಪ್ರತಿ ಎಕರೆಗೆ 10,771 ಚದರ ಅಡಿ ಅಭಿವೃದ್ಧಿಪಡಿಸಿದ ಭೂಮಿ ಪಡೆಯಬಹುದಾಗಿದೆ. ಅದನ್ನು ಅವರು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಬಹುದು ಎಂದು ಸಚಿವರು ಸ್ಪಷ್ಟಪಡಿಸಿದರು ಸರ್ಕಾರ ರೈತರ ಬೇಡಿಕೆಗಳನ್ನು ಗೌರವಿಸಿದ್ದು, ಪ್ರತಿಭಟನೆಯನ್ನು ಈಗ ಕೊನೆಗೊಳಿಸಬೇಕು. ನಾವು ಕೈಗಾರಿಕಾ ಬೆಳವಣಿಗೆ ಮತ್ತು ಕೃಷಿ ಕಲ್ಯಾಣದ ನಡುವೆ ಸಮತೋಲನವನ್ನು ಸಾಧಿಸಬೇಕು ಎಂದು ಪಾಟೀಲ್ ಹೇಳಿದರು.

## ಇಂದಿರಾ ಕಿಟ್ ಯೋಜನೆ ಸ್ವಾಗತ ಆದರೆ 10 ಕೆಜಿ ಅಕ್ಕಿ ಪ್ರಮಾಣ ಕಡಿಮೆ ಬೇಡ

### ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯಧ್ಯಕ್ಷ ಕೃಷ್ಣಪ್ಪ ಹೇಳಿಕೆ

**ಉಮೇಶ್ ಬಾಣಾವರ**

• ಉದಯವಾಹಿನಿ ಬೆಂಗಳೂರು




ಕರ್ನಾಟಕ ರಾಜ್ಯ ಸರ್ಕಾರ ರಾಜ್ಯದ ಪಡಿತರ ಕಾರ್ಡುದಾರರಿಗೆ ಕಳೆದ ಫೆಬ್ರವರಿ ತಿಂಗಳಿನಿಂದ 10 ಕೆಜಿ ಅಕ್ಕಿ ನೀಡುತ್ತಿರುವುದು ಸ್ವಾಗತರ್ಹವಾಗಿದ್ದು ಈಗ ರಾಜ್ಯ ಸರ್ಕಾರವು 10 ಕೆಜಿ ಅಕ್ಕಿಯ ಪ್ರಮಾಣದಲ್ಲಿ 5 ಕೆಜಿ ಕಮ್ಮಿ ಮಾಡಿ ಅದರ ಬದಲಾಗಿ ದಿನಬಳಕೆ ವಸ್ತುಗಳಾಗಿ ಇಂದಿರಾ ಕಿಟ್ ಹೆಸರಿನಲ್ಲಿ ಜಾರಿಗೆ ತರಲು ಹೊರಟಿರುವುದು ಸ್ವಾಗತ ಆದರೂ ಯಾವುದೇ ಕಾರಣಕ್ಕೂ ಪಡಿತರ ಕಾಡುದಾರರಿಗೆ ಯೂನಿಟ್ ಒಂದಕ್ಕೆ ಹತ್ತು ಕೆಜಿ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡುವುದು ಸರಿಯಲ್ಲ ಇದರ ಬದಲಾಗಿ ಪಡಿತರ ಹಾಡುಗಾರರಿಗೆ ಇಂದಿರಾ ಕಿಟ್ಟನ್ನು ಹಣ ಪಡೆದು ನೀಡುವಂತೆ ಅವಕಾಶ ಕಲ್ಪಿಸಬೇಕಾಗಿ ರಾಜ್ಯ ಸರ್ಕಾರದ ಆಹಾರ ಸಚಿವರಾದ ಕೆಎಚ್ ಮುನಿಯಪ್ಪ ರವರನ್ನು ರಾಜ್ಯದ ಕೋಟ್ಯಾಂತರ ಬಡ ಪಡಿತರ ಕಾರ್ಡ್ ದಾರರ ಪರವಾಗಿ ಮನವಿ ಮಾಡುತ್ತೇವೆ ಎಂದು ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷ ಹಾಗೂ ರಾಷ್ಟ್ರೀಯ ಕಾರ್ಯಧ್ಯಕ್ಷ ಕೃಷ್ಣಪ್ಪ ತಿಳಿಸಿದ್ದಾರೆ



### ಪಡಿತರ ವಿತರಣೆಗೆ ಹೆಚ್ಚುವರಿ ಅವಕಾಶ ಕಲ್ಪಿಸಲು ಮನವಿ

ಪ್ರಸ್ತುತ ಈ ತಿಂಗಳು ದಿನಾಂಕ 25 ಕಳೆದಿದ್ದರು ರಾಜ್ಯದಲ್ಲಿ ಸರ್ಕಾರಿ ಗೋಧಾಮುಗಳಿಂದ ಪಡಿತರ ಅಂಗಡಿಗಳಿಗೆ ಆಹಾರ ಪದಾರ್ಥಗಳಾದ ಅಕ್ಕಿ ರಾಗಿ ಜೋಳರವಾನೆಯಾಗದೆ ವಿಳಂಬವಾಗಿದ್ದು ಕೂಡಲೇ ಸರ್ಕಾರದ ಆಹಾರ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಚೆಕ್ ಲಿಸ್ಟ್ ಮುಖಾಂತರ ಪಡಿತರ ವಿತರಣೆಗೆ ಅಥವಾ ಓಟಿಪಿ ಮುಖಾಂತರ ಅವಕಾಶ ಕಲ್ಪಿಸಬೇಕು ಪ್ರತಿ ತಿಂಗಳು ಕೊನೆಯ ದಿನದಂದು ಪಡಿತರ ವಿತರಣೆ ಕೊನೆಗೊಳ್ಳುವುದು ಸರ್ಕಾರದ ಆದೇಶವಾಗಿದ್ದು ಇದನ್ನು ನಾಲ್ಕು ದಿನಗಳ ಕಾಲ ಹೆಚ್ಚುವರಿ ವಿತರಣೆಗೆ ಅವಕಾಶ ಕಲ್ಪಿಸಬೇಕೆಂದು ರಾಜ್ಯ ಪಡಿತರ ವಿತರಕರ ಸಂಘದ ಅಧ್ಯಕ್ಷ ಹಾಗು ರಾಷ್ಟ್ರೀಯ ಕಾರ್ಯಾಧ್ಯಕ್ಷ ಕೃಷ್ಣಪ್ಪ ಸರ್ಕಾರಕ್ಕೆ ಮನವಿ ಮಾಡಿದ್ದಾರೆ




## ಎನ್‌ಡಬ್ಲ್ಯುಕೆಆರ್‌ಟಿಸಿ: ನೇಮಕಾತಿ ಪತ್ರ ವಿತರಣೆ

• ಉದಯವಾಹಿನಿ ಬೆಂಗಳೂರು


ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಹೊಸ ನೇಮಕಾತಿ ಮೂಲಕ ಆಯ್ಕೆಗೊಂಡ ಚಾಲಕರಿಗೆ ನೇಮಕಾತಿ ಪತ್ರ ವಿತರಣೆ ಮಾಡಲಾಯಿತು.

ವಾಣಿಜ್ಯ ಮಳಿಗೆಗಳ ಪರವಾನಗಿ ನಿರ್ವಹಣಾ ತಂತ್ರಾಂಶವನ್ನು ಇದೇ ಸಂದರ್ಭದಲ್ಲಿ ಅನಾವರಣಗೊಳಿಸಲಾಯಿತು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, 'ಎನ್‌ಡಬ್ಲ್ಯುಕೆಆರ್‌ಟಿಸಿಗೆ 1000 ಚಾಲಕರು ಮತ್ತು ಚಾಲಕ ಕಂ ನಿರ್ವಾಹಕರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದೆ. ಸಾಂಕೇತಿಕವಾಗಿ 46 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ' ಎಂದು ಮಾಹಿತಿ ನೀಡಿದರು. ಎನ್‌ಡಬ್ಲ್ಯುಕೆಆರ್‌ಟಿಸಿ ಅಧ್ಯಕ್ಷ ಭರಮಗೌಡ ಕಾಗೆ ಮಾತನಾಡಿ, 'ಸಂಸ್ಥೆಗೆ ಇನ್ನೂ ಚಾಲನಾ ಸಿಬ್ಬಂದಿಯ ಅವಶ್ಯಕತೆ ಇದೆ. ಘಟಕಗಳ ಸುಧಾರಣೆ ಮಾಡಬೇಕಾಗಿದೆ. ಅದಕ್ಕಾಗಿ ಸರ್ಕಾರದಿಂದ ವಿಶೇಷ ಅನುದಾನ ಅಗತ್ಯ' ಎಂದು ತಿಳಿಸಿದರು. ಎನ್‌ಡಬ್ಲ್ಯುಕೆಆರ್‌ಟಿಸಿ ಪ್ರಿಯಾಂಗಾ ಎಂ., ಉಪಾಧ್ಯಕ್ಷ ಪೀರ್‌ಸಾಬ್ ಕೌತಾಳ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್, ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಎಂ. ರಾಚಪ್ಪ ಭಾಗವಹಿಸಿದ್ದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,895/Gram24ct ₹9,070/Gram22ct | ಬೆಳ್ಳಿ: ₹108.10/Gram

# ದಾಸ ನಮನ

• ಉದಯವಾಹಿನಿ, ಬೆಂಗಳೂರು



ಪವಮಾನಪುರದ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗುರುವಾರ ಸಂಜೆ 7-00ಕ್ಕೆ ದಾಸ ನಮನ. ಗಾಯನ: ಕು. ಸಂಜನಾ (ವಿದುಷಿ ಶ್ರೀಮತಿ ದಿವ್ಯಾ ಗಿರಿಧರ್ ಅವರ ಶಿಷ್ಯೆ), ಕೀಬೋರ್ಡ್: ಶ್ರೀ ಅಮಿತ್ ಶರ್ಮಾ, ತಬಲಾ : ಶ್ರೀ ಸಂದೀಪ್ ದೇಸಾಯಿ. ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಬೆಂಗಳೂರು

# ಬಸವರಾಜ ಪಾದಯಾತ್ರೆಯವರಿಗೆ ಶುಭ ಕೋರಿದ ಹೊಂಬೇಗೌಡರು

• ಉದಯವಾಹಿನಿ ಬೆಂಗಳೂರು

ಕರ್ನಾಟಕ ರಾಜ್ಯ ಪ್ರದೇಶ ಜನತಾದಳ ಜಾತ್ಯತೀತ ಪಕ್ಷದ ಸೇವಾದಳ ವಿಭಾಗದ ರಾಜ್ಯಾಧ್ಯಕ್ಷರಾಗಿ ಸುಧೀರ್ಘ ಸೇವೆ ಸಲ್ಲಿಸಿಕೊಂಡುರಾಜ್ಯಾದ್ಯಂತ ಎಲ್ಲಾ ಜಿಲ್ಲೆಯ ತಾಲ್ಲೂಕುಗಳಲ್ಲಿ ಸಂಘಟಿಸಿಕೊಂಡು ಜೆಡಿಎಸ್ ಪಕ್ಷಕ್ಕೆ ಶಕ್ತಿ ತುಂಬಿಕೊಂಡು ಬರುತ್ತಿರುವ ಬಸವರಾಜ್ ಪಾದಯಾತ್ರೆ ಅವರ ಸಂಘಟನೆ ಅದ್ಭುತವಾಗಿದೆ ರಾಜ್ಯದ ಎಲ್ಲಾ ಚುನಾವಣೆಗಳು ಕಳೆದ 40 ವರ್ಷಗಳ ಸುದೀರ್ಘ ರಾಜಕಾರಣ ಜೀವನದಲ್ಲಿ ಮಾಜಿ ಪ್ರಧಾನ ಮಂತ್ರಿಗಳು ಮಣ್ಣಿನ ಮಗ ಎಚ್.ಡಿ. ದೇವೇಗೌಡರ ನಾಯಕತ್ವಕ್ಕೆ ಅನುಸರಿಸಿಕೊಂಡು ಬರುತ್ತಿರುವ ಬಸವರಾಜ್ ಪಾದಯಾತ್ರೆ ಅವರಿಗೆ ಉದಯವಾಹಿನಿ ಸಂಪಾದಕರು ರಾಜ್ಯ ಜೆಡಿ ಎಸ್ ಉಪಾಧ್ಯಕ್ಷರಾದ ಟಿ ಹೊಂಬೇಗೌಡರು ಶುಭ ಹಾರೈಸಿದ್ದಾರೆ.





ಬಸವರಾಜ್ ಪಾದಯಾತ್ರೆ ಅವರಿಗೆ ಜೆಡಿಎಸ್ ಸೇವಾದಳದ ರಾಜ್ಯದ ಎಲ್ಲಾ ಸಂಘಟನೆಯ ಜಿಲ್ಲಾಧ್ಯಕ್ಷರು ಮತ್ತು ತಾಲ್ಲೂಕ ಅಧ್ಯಕ್ಷರುಗಳ ಸಹಯೋಗದೊಂದಿಗೆ ಮಾಜಿ ಪ್ರಧಾನಿ ಮತ್ತು ಜೆಡಿಎಸ್ ಸರ್ವೋಚ್ಚ ನಾಯಕರದ ಎಚ್ ಡಿ ದೇವೇಗೌಡರು, ಕೇಂದ್ರ ಕೈಗಾರಿಕಾ ಸಚಿವರು, ರಾಜ್ಯದ ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಬಸವರಾಜ್ ಪಾದಯಾತ್ರೆ ಅವರಿಗೆ ಕೇಂದ್ರ ಸರ್ಕಾರದ ಖಾದಿ ನಿಗಮ ಮಂಡಳಿಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕೆಂದು ಒತ್ತಾಯ ಮಾಡಲಾಗುವುದು ಎಂದು ಟಿ. ಹೊಂಬೇಗೌಡರು ತಿಳಿಸಿದ್ದಾರೆ.

# ಹಿಂದುತ್ವದ ಹೆಸರಿನಲ್ಲಿ ರಾಜಕೀಯ ಮಾಡುವ ಬಿಜೆಪಿ : ಗಣಿಗ ರವಿ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಹಿಂದುತ್ವದ ಹೆಸರಿನಲ್ಲಿ ರಾಜಕೀಯ ಮಾಡುವ ಬಿಜೆಪಿ ಕಾವೇರಿ ಆರತಿಗೆ ವಿರೋಧ ವ್ಯಕ್ತಪಡಿಸುತ್ತಿದೆ ಎಂದು ಕಾಂಗ್ರೆಸ್ ಶಾಸಕ ಗಣಿಗ ರವಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉತ್ತರ ಪ್ರದೇಶದಲ್ಲಿ ಗಂಗಾ ಆರತಿ ಬೇಕು ಎಂದಿದ್ದಾರೆ. ಕರ್ನಾಟಕದಲ್ಲಿ ಕಾವೇರಿ ಆರತಿಗೆ ವಿರೋಧ ವ್ಯಕ್ತಪಡಿಸುತ್ತಾರೆ. ಅವರಿಗೆ ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುವುದಷ್ಟೇ ಮುಖ್ಯ ಎಂದು ತಿರುಗೇಟು ನೀಡಿದರು. ಕಾಂಗ್ರೆಸ್ ಪಕ್ಷದಲ್ಲಿ ಕೆಲ ಶಾಸಕರ ಅಸಮಾಧಾನದ ಕುರಿತು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರು ಚರ್ಚಿಸಿ ಬಗೆಹರಿಸುತ್ತಾರೆ. ಆರೇಳು ಬಾರಿ ಗೆದ್ದ ಹಿರಿಯ ಶಾಸಕರು ಕಾಂಗ್ರೆಸ್‌ನಲ್ಲಿದ್ದಾರೆ. ಶಾಸಕಾಂಗ ಸಭೆಯಲ್ಲಿ ಯಾವುದೇ ಸಮಸ್ಯೆಗಳಿದ್ದರೂ ಚರ್ಚೆ ಮಾಡಲು ಅವಕಾಶ ಇದೆ. ಅದನ್ನು ಬಿಟ್ಟು ಬಹಿರಂಗ ಹೇಳಿಕೆ ನೀಡುವುದು ಸರಿಯಲ್ಲ ಎಂದರು. ವಸತಿ ಯೋಜನೆಗಳಲ್ಲಿ ಬಡವರಿಂದ ಹಣ ಪಡೆಯುವ ದಾರಿದ್ರ ಜಮೀರ್ ಅಹಮ್ಮದ್ ಖಾನ್ ಅವರಿಗಿಲ್ಲ. ಸಾಕಷ್ಟು ದಾನ ಧರ್ಮ ಮಾಡಿ ಹೆಸರುವಾಸಿಯಾಗಿರುವ ಜಮೀರ್ ವಸತಿ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡುತ್ತಿದ್ದಾರೆ. 2022ರಲ್ಲಿ ಮನೆ ಮಂಜೂರಾತಿ ಪಡೆದಿದ್ದವರಿಗೆ ಈಗ ಸ್ವಾಧೀನ ಪತ್ರ ನೀಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

# ನಾಡಪ್ರಭು ಕೆಂಪೇಗೌಡ-2025 ಉತ್ತಮ ನೌಕರ ಪ್ರಶಸ್ತಿ ಸಾಯಿಶಂಕರ್ ಆಯ್ಕೆ

• ಉದಯವಾಹಿನಿ, ಬೆಂಗಳೂರು



ನಾಡಪ್ರಭು ಕೆಂಪೇಗೌಡ ದಿನಾಚರಣೆ ಪ್ರಯುಕ್ತ ಬಿಬಿಎಂಪಿ ವತಿಯಿಂದ ಉತ್ತಮ ನೌಕರ ನಾಡಪ್ರಭು ಕೆಂಪವೇಗೌಡ ಪ್ರಶಸ್ತಿ-2025ರ ಸಾಲಿನಲ್ಲಿ ಬಿಬಿಎಂಪಿ ಕಂದಾಯ ಮೌಲ್ಯಮಾಪಕರಾದ ಸಾಯಿಶಂಕರ್ ರವರಿಗೆ ಲಭಿಸಿದೆ. ಸಾಯಿಶಂಕರ್ ರವರು ಕಳೆದ ಮೂವತ್ತು ಹೆಚ್ಚು ವರ್ಷಗಳಿಂದ ಬಿಬಿಎಂಪಿ ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಬಿಬಿಎಂಪಿ ಕನ್ನಡ ನೌಕರರ ಸಂಘದ ಅಧ್ಯಕ್ಷರಾಗಿ, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಪರಿಷತ್ ನಲ್ಲಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಿಬಿಎಂಪಿ ಅಧಿಕಾರಿ, ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರ ಜೊತೆಯಲ್ಲಿ ಸಂಘಟನೆ, ಹೋರಾಟಗಳಲ್ಲಿ ಸಾಯಿಶಂಕರ್ ಸದಾ ಜೊತೆಯಲ್ಲಿ ಅಪ್ತ ಮಿತ್ರರಂತೆ ನಿಂತಿದ್ದಾರೆ. ಅಪಾರ ದೈವ ಭಕ್ತ ಸಾಯಿಶಂಕರ್ ರವರು ಬಿಬಿಎಂಪಿ ಕೇಂದ್ರ ಕಛೇರಿ ನೌಕರರ ಭವನ ಎದುರು ಇರುವ ಆಂಜನೇಯ, ಗಣೇಶ ದೇವರುಗಳಿಗೆ ನಿತ್ಯಾ ಅಭಿಷೇಕ, ಪೂಜೆ ಮಾಡಿ ನಂತರ ಬಿಬಿಎಂಪಿ ಕರ್ತವ್ಯಕ್ಕೆ ತೆರಳುತ್ತಾರೆ. 2025ನೇ ಸಾಲಿನಲ್ಲಿ ನಾಡಪ್ರಭು ಕೆಂಪೇಗೌಡ ಉತ್ತಮ ನೌಕರ ಪ್ರಶಸ್ತಿ ಲಭಿಸಿರುವುದಕ್ಕೆ ಸಂಘವು ಹೃತ್ಪೂರ್ವಕವಾಗಿ ಅಭನಂದಿಸುತ್ತಿದೆ.

# ಕೈಸುಡುತ್ತಾ ಸ್ಕ್ಯಾಮ್ ಬೆಂಕಿ ಸ್ಲಂ ಬೋರ್ಡ್‌ನಲ್ಲಿ ಕಾಸು ಕೊಟ್ಟವರಿಗೆ ಸೈಟ್

• ಉದಯವಾಹಿನಿ, ಬೆಂಗಳೂರು

ಬಡವರ ದುಡ್ಡು ತಿಂದ್ರೇ ಹುಳ ಬೀಳುತ್ತೆ, ಬಡವರ ದುಡ್ಡು ತಿಂದ್ರೆ ದೇವ್ರು ಮೆಚ್ಚುತ್ತಾನಾ? ಹೀಗೆ ನಿನ್ನೆ ವೆರೈಟಿ ವೆರೈಟಿ ಡೈಲಾಗ್ ಹೊಡೆದ್ರು ಸಚಿವ ಜಮೀರ್ ಅಹಮ್ಮದ್ ಆದ್ರೆ ಅವ್ರ ಇಲಾಖೆಯಲ್ಲೇ ದಿನಕ್ಕೊಂದು ಗೋಲ್ಮಾಲ್ ಸರ್ಕಾರವನ್ನು ಈಗ ಮುಜಗರಕ್ಕೆ ಸಿಲುಕಿದೆ. ರಾಜೀವ್ ಗಾಂಧಿ ವಸತಿ ನಿಗಮದ ಬಳಿಕ ಈಗ ಸ್ಲಂ ಬೋರ್ಡ್‌ನಲ್ಲೂ ಅಕ್ರಮದ ವಾಸನೆ ಕಂಡುಬಂದಿದೆ. ಯಲಹಂಕದಲ್ಲಿ ಸ್ಲಂ ಬೋರ್ಡ್‌ನಿಂದ ಮಂಜೂರಾಗಿರುವ ನಿವೇಶನ ಬಡವರಿಗೆ ಸಿಗ್ತಿಲ್ಲ, ಬದಲಾಗಿ ದುಡ್ಡು ಕೊಟ್ಟವರಿಗೆ ಸೈಟು ಕೊಡ್ತಿದ್ದಾರೆ ಅಂತ ಕಾಂಗ್ರೆಸ್ ಪಕ್ಷದ ಪಂಚಾಯಿತಿ ಅಧ್ಯಕ್ಷೆಯೊಬ್ಬರು ಗಂಭೀರ ಆರೋಪ ಮಾಡಿ ಸಿಎಂ, ಡಿಸಿಎಂಗೆ ಪತ್ರ ಬರೆದಿದ್ದಾರೆ. ಈ ಗೋಲ್ಮಾಲ್‌ನಲ್ಲಿ ಅಧಿಕಾರಿಗಳೂ ಶಾಮೀಲಾಗಿದ್ದಾರೆ. ಬಡವರಿಗೆ ಸೇರಬೇಕಾಗಿರುವ ಮನೆ ನಿವೇಶನ ದುಡ್ಡಿದ್ದವರ ಪಾಲಾಗಿದೆ. ಹಣ ಕೊಟ್ಟವರಿಗೆ ನಿವೇಶನ ಸೇಲ್ ಮಾಡಲಾಗುತ್ತಿದೆ ಅಂತ ಪತ್ರದಲ್ಲಿ ಆರೋಪಿಸಿದ್ದು, ಅನರ್ಹ ಫಲಾನುಭವಿಗಳ ಪಟ್ಟಿ ತಡೆಹಿಡಿಯುವಂತೆ ಮನವಿ ಮಾಡಿದ್ದಾರೆ. ಒಟ್ಟಿನಲ್ಲಿ ಸರ್ಕಾರದ ವಿರುದ್ಧ ಸಾಲು ಸಾಲು ಸ್ಕ್ಯಾಮ್‌ಗಳು, ಅವರದ್ದೇ ಪಕ್ಷದವರು ಈ ಭ್ರಷ್ಟಾಚಾರದ ವಿರುದ್ಧ ತಿರುಗಿಬಿದ್ದು ಬುದ್ಧಿ ಕಲಿಸುವ ಮಟ್ಟಕ್ಕೆ ಬಂದಿದೆ.



ಸಾಂದರ್ಭಿಕ ಚಿತ್ರ


## ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಶೈಕ್ಷಣಿಕ ಕಟ್ಟಡ ನಿರ್ಮಾಣಕ್ಕೆ ಪರಿಸರವಾದಿಗಳ ವಿರೋಧ

# 400 ಮರಗಳ ಕಟಾವಿಗೆ 600ಕ್ಕೂ ಹೆಚ್ಚಿನ ಜನರಿಂದ ಆಕ್ಷೇಪಣೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಶೈಕ್ಷಣಿಕ, ಸಂಶೋಧನಾ ಸಂಕೀರ್ಣ ನಿರ್ಮಾಣಕ್ಕೆ ಪರಿಸರವಾದಿಗಳಿಂದ ವಿರೋಧ ವ್ಯಕ್ತವಾಗಿದೆ. 400 ಮರಗಳ ಕಟಾವಿಗೆ 600ಕ್ಕೂ ಹೆಚ್ಚಿನ ಜನರಿಂದ ಆಕ್ಷೇಪಣೆ ವ್ಯಕ್ತವಾಗಿದೆ. ಬೆಂಗಳೂರು ವಿವಿಯು ಪ್ರಧಾನ ಮಂತ್ರಿ ಉಚ್ಚ ಶಿಕ್ಷಣ ಅಭಿಯಾನ ಅನುದಾನ ಬಳಕೆಗೆ ಮುಂದಾದರೆ, ಕಟ್ಟಡಗಳ ನಿರ್ಮಾಣದಿಂದ ಪರಿಸರ ಹಾನಿಯಾಗಲಿದೆ ಎಂದು ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದರಿಂದ ಸಿಕ್ಕಿರುವ ಅನುದಾನ ಬಳಕೆ ಮಾಡಿಕೊಳ್ಳುವ ಆಲೋಚನೆಯಲ್ಲಿರುವ ವಿವಿಗೆ ಹೊಸ ಸಮಸ್ಯೆ ಎದುರಾಗಿದೆ. ಪಿಎಂ ಉಷಾ ಯೋಜನೆಯಡಿ ಬೆಂಗಳೂರು ವಿವಿಗೆ 100 ಕೋಟಿ ರೂ.ಅನುದಾನ ಸಿಕ್ಕಿದೆ. ಇದೀಗ ಇದರ ಸದ್ಬಳಕೆ ಮಾಡಿಕೊಳ್ಳದಿದ್ದರೆ, ಅನುದಾನ ಕೇಂದ್ರ ಸರಕಾರಕ್ಕೆ ವಾಪಸ್ಸಾಗುವ ಆತಂಕ ಎದುರಾಗಿದೆ. ಈ ಮಧ್ಯೆ, ಪರಿಸರವಾದಿಗಳು ವಿವಿ ಅರಣ್ಯ ನಾಶ ಮಾಡುತ್ತಿದೆ ಎಂಬ ಆರೋಪ ಮಾಡುತ್ತಿರುವುದರಿಂದ ಯೋಜನೆಗೆ ಆರಂಭದಲ್ಲೇ ವಿಘ್ನ ಎದುರಾಗಿದೆ.

**ಅಕಾಡೆಮಿಕ್ ಬ್ಲಾಕ್:** ಬೆಂಗಳೂರು ವಿವಿ ಜ್ಞಾನಭಾರತಿ ಆವರಣದಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಸ್ಥಳವಿದೆ. ಹೊಸ ಕೋರ್ಸ್‌ಗಳನ್ನು ಪರಿಚಯಿಸಿರುವುದರಿಂದ ವಿದ್ಯಾರ್ಥಿಗಳಿಗೆ ಕೊಠಡಿಗಳ ಕೊರತೆ ಕೂಡ ಇದೆ. ಇದನ್ನು ನೀಗಿಸುವ ಸಲುವಾಗಿ ವಿವಿಯ ಆವರಣದಲ್ಲಿ 1.25 ಲಕ್ಷ ಚದರ ಅಡಿ ವ್ಯಾಪ್ತಿಯಲ್ಲಿ ಅಕಾಡೆಮಿಕ್ ಬ್ಲಾಕ್ ನಿರ್ಮಾಣ ಮಾಡಲು ಮುಂದಾಗಿದೆ.





- ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಶೈಕ್ಷಣಿಕ ಮತ್ತು ಸಂಶೋಧನಾ ಸಂಕೀರ್ಣ ನಿರ್ಮಾಣಕ್ಕೆ ವಿರೋಧ
- ಪಿಎಂ ಉಷಾ ಯೋಜನೆಯಡಿ ಬೆಂಗಳೂರು ವಿವಿಗೆ 100 ಕೋಟಿ ರೂ.ಅನುದಾನ

ಇದಕ್ಕಾಗಿ 30 ಕೋಟಿ ರೂ. ವೆಚ್ಚ ಮಾಡಲಿದ್ದು, 6 ಪ್ರಯೋಗಾಲಯಗಳು, 20ಕ್ಕೂ ಹೆಚ್ಚಿನ ಕೊಠಡಿಗಳು ಲಭ್ಯವಾಗಲಿವೆ. ವಿಶ್ವವಿದ್ಯಾಲಯದಲ್ಲಿ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಬೇಕೆಂಬುದು ಪಿಎಂ ಉಷಾದಲ್ಲಿನ ಷರತ್ತುಗಳಲ್ಲೊಂದಾಗಿದೆ. ಈ ಹಿನ್ನೆಲೆಯಲ್ಲಿವಿವಿಯು 18-20 ಕೋಟಿ ರೂ.ವೆಚ್ಚದಲ್ಲಿ ಸಂಶೋಧನಾ ಉಪಕರಣಗಳನ್ನು ಖರೀದಿ ಮಾಡಲು ನಿರ್ಧರಿಸಿದೆ. ಸದ್ಯ ಖರೀದಿ ಮಾಡಿದರೆ, ಇದನ್ನು ಬಳಕೆ ಮಾಡಲು ಪ್ರಯೋಗಾಲಯದ ಕೊರತೆ ಇದೆ. ಹೀಗಾಗಿ, ಸಂಶೋಧನಾ ಬ್ಲಾಕ್ ನಿರ್ಮಾಣವಾದ ಬಳಿಕ ಖರೀದಿ ಮಾಡಲು ನಿರ್ಧರಿಸಿದೆ.

**ಏನಿದು ಪಿಎಂ ಉಷಾ:** 2013 ರಲ್ಲಿಆರಂಭವಾದ ರಾಷ್ಟ್ರೀಯ ಉಚ್ಚ ಶಿಕ್ಷಣ ಅಭಿಯಾನ ನಿಧಿಯನ್ನೇ 2023ರಲ್ಲಿ ಪ್ರಧಾನ ಮಂತ್ರಿ, ಉಚ್ಚ ಶಿಕ್ಷಣ ಅಭಿಯಾನ, ಎಂದು ಮರು ನಾಮಕರಣ ಮಾಡಲಾಗಿದೆ. 6 ವಿಷಯಗಳಲ್ಲಿ ಅನುದಾನ ನೀಡಲಾಗುತ್ತದೆ. 35 ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾಲಯಗಳಿಗೆ ತಲಾ 100 ಕೋಟಿ ರೂ. ನೆರವು ನೀಡುತ್ತದೆ. ಇದನ್ನು ಪಡೆಯಲು ವಿವಿಗಳು ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಅಂಗೀಕಾರ ಪರಿಷತ್ (ನ್ಯಾಕ್) 'ಎ' ಗ್ರೇಡ್ ಪಡೆದಿರಬೇಕೆಂಬ ಪ್ರಮುಖ ಷರತ್ತು ಇತ್ತು. ಬೆಂ.ವಿವಿಯು 'ಎ ಪ್ಲಸ್ ಪ್ಲಸ್' ಶ್ರೇಣಿಗೆ ಪಡೆದುಕೊಂಡಿರುವುದರಿಂದ ಆಯ್ಕೆಯಾಗಿದೆ.

> ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೆಲವಷ್ಟು ಜಾಗವನ್ನು ವಿವಿಯ ಅಭಿವೃದ್ಧಿಗಾಗಿ ಮೀಸಲಿಟ್ಟಿದ್ದೇವೆ. ಇಂತಹ ಸ್ಥಳದಲ್ಲಿ ಕಟ್ಟಡ ನಿರ್ಮಾಣಕ್ಕೆ ಮುಂದಾಗುತ್ತಿದ್ದೇವೆಯೇ ಹೊರತು ಬಯೋಪಾರ್ಕ್‌ನಲ್ಲಿ ಅಲ್ಲ. ಇಲ್ಲಿ ನೀಲಗಿರಿ ಮತ್ತು ಅಕೇಶಿಯಾ ಮರಗಳದ್ದೇ ಹೆಚ್ಚಿನ ಪಾಲಿದೆ. ಹೀಗಾಗಿ, ತೆರವು ಮಾಡಿದರೂ ಜೀವ ವೈವಿಧ್ಯಕ್ಕೆ ತೊಂದರೆಯಾಗದು.
>
> – ಡಾ.ಎಸ್.ಎಂ.ಜಯಕರ, ಕುಲಪತಿ, ಬೆಂಗಳೂರು ವಿವಿ

> ಇಂದಿನ ತಂತ್ರಜ್ಞಾನ ವ್ಯವಸ್ಥೆಯಲ್ಲಿ ಕಟ್ಟಡವನ್ನು ವರ್ಟಿಕಲ್ ವಿನ್ಯಾಸದಲ್ಲಿ ನಿರ್ಮಾಣ ಮಾಡಿದರೆ ಸಾಕಷ್ಟು ಅರಣ್ಯ ಸಂಪತ್ತು ಸಹ ಉಳಿಯಲಿದೆ. ವಿವಿಯಲ್ಲಿರುವ ಮರಗಳಿಗೆ ಕೊಡಲಿ ಪೆಟ್ಟು ಬೀಳುವುದು ಸಹ ತಪ್ಪಲಿದೆ.
>
> – ಡಾ.ಪರಮೇಶ್ವರ ನಾಯಕ್, ಉಪನ್ಯಾಸಕರು, ಪರಿಸರ ವಿಜ್ಞಾನ ವಿಭಾಗ, ಬೆಂ.ವಿವಿ

# ಮುಖ್ಯಮಂತ್ರಿಗಳು ಶಾಸಕರ ಸಮಸ್ಯೆ ಬಗೆಹರಿಸುತ್ತಾರೆ: ಗೃಹಸಚಿವ

• ಉದಯವಾಹಿನಿ, ಬೆಂಗಳೂರು

ಶಾಸಕರ ಅಸಮಾಧಾನಗಳನ್ನು ಸಿಎಂ ಸಿದ್ದರಾಮಯ್ಯ ಬಗೆಹರಿಸುತ್ತಾರೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಸಚಿವರ ವಿರುದ್ಧ ಶಾಸಕರ ಅಸಮಾಧಾನ ಎಲ್ಲಾ ಸರ್ಕಾರಗಳಲ್ಲೂ ಸಾಮಾನ್ಯ. ಶಾಸಕರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದು ಕಷ್ಟಸಾಧ್ಯ.

ಹಾಗಾಗಿ ಸಣ್ಣಪುಟ್ಟ ಸಮಸ್ಯೆಗಳು ಇದ್ದೇ ಇರುತ್ತವೆ. ಮುಖ್ಯ ಮಂತ್ರಿಯವರು ಶಾಸಕರ ಜೊತೆ ಚರ್ಚೆ ಮಾಡಿ ಬಗೆಹರಿಸುತ್ತಾರೆ ಎಂದರು. ಈ ಮೊದಲು ಶಾಸಕಾಂಗ ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳಲು ಶಾಸಕರಿಗೆ ಅವಕಾಶ ನೀಡಲಾಗಿತ್ತು. ಸಾಕಷ್ಟು ಚರ್ಚೆಗಳೂ ಆಗಿವೆ. ಇದೆಲ್ಲಾ ಸಣ್ಣಪುಟ್ಟ ಸಮಸ್ಯೆ, ಬಗೆಹರಿಯುತ್ತದೆ.

ಹೈಕಮಾಂಡ್ ಮುಖ್ಯಮಂತ್ರಿಯವರಿಗೆ ಯಾವ ರೀತಿಯ ಸೂಚನೆ ನೀಡಿದೆಯೋ ಗೊತ್ತಿಲ್ಲ. ಒಂದು ವೇಳೆ ಸೂಚನೆ ನೀಡಿದ್ದರೆ ಅದರಂತೆ ನಡೆದುಕೊಳ್ಳುತ್ತಾರೆ ಎಂದರು. ಶಾಸಕರು ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಅದು ರಾಜ್ಯದ ಸಮಸ್ಯೆ ಅಲ್ಲ. ಕ್ಷೇತ್ರದ ಅಭಿವೃದ್ಧಿಗೆ ಪ್ರತಿಯೊಂದಕ್ಕೂ ತಲಾ 50 ಕೋಟಿ ರೂ.ಗಳ ಅನುದಾನ ನೀಡುವುದಾಗಿ ಸಿದ್ದರಾಮಯ್ಯ ಹೇಳಿದ್ದಾರೆ. ಎಲ್ಲಾ ಸಮಸ್ಯೆಗಳು ಇತ್ಯರ್ಥವಾಗುತ್ತವೆ ಎಂದು ತಿಳಿಸಿದರು. ಕಾಂಗ್ರೆಸ್ ಸರ್ಕಾರದಲ್ಲಿ ಹಣ ಇಲ್ಲ ಎಂದು ನಾನು ಹೇಳಿಲ್ಲ. ಬಾದಾಮಿಯಲ್ಲಿ 1500 ವರ್ಷಗಳ ಇತಿಹಾಸವಿರುವ ಗುಹೆಗಳಿವೆ. ವಿಶ್ವದಲ್ಲಿ ಎಲ್ಲಿಯೂ ಈ ರೀತಿ ಇಲ್ಲ. ಅದನ್ನು ರಕ್ಷಣೆ ಮಾಡಲು 1 ಸಾವಿರ ಕೋಟಿ ರೂ. ಗಳಷ್ಟು ಯೋಜನಾ ವೆಚ್ಚ ತಯಾರಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ರಾಜ್ಯ ಸರ್ಕಾರಕ್ಕೆ ಅಷ್ಟು ದೊಡ್ಡ ಪ್ರಮಾಣದ ಹಣ ಕೊಡಲು ಸಾಧ್ಯವಿಲ್ಲ. ಕೇಂದ್ರದಿಂದ ಹಣ ತೆಗೆದುಕೊಳ್ಳಲಿ ಎಂದು ಸಲಹೆ ನೀಡಿದ್ದೆ. ಅದನ್ನು ಹಣ ಇಲ್ಲ ಎಂದು ಹೇಳಿರುವುದಾಗಿ ತಿರುಚುವುದು ಸರಿಯಲ್ಲ ಎಂದರು. ಸಿಎಂ ಸಿದ್ದರಾಮಯ್ಯ 4.9 ಲಕ್ಷ ಕೋಟಿ ರೂ. ಬಜೆಟ್ ಮಂಡಿಸಿದ್ದಾರೆ. ಹಿಂದಿನ ವರ್ಷ 3.80 ಲಕ್ಷ ಕೋಟಿ ರೂ. ಇದ್ದ ಬಜೆಟ್ ಏರಿಕೆಯಾಗಿದೆ. ನೀರಾವರಿ ಸೇರಿದಂತೆ ಹಲವಾರು ಬಾಬ್ತುಗಳಿಗೆ ಸಾಕಷ್ಟು ಅನುದಾನ ನೀಡಲಾಗಿದೆ. ನಾನು ಮಾತನಾಡಿದ ವೇದಿಕೆಯಲ್ಲಿ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜರಾಯ ರೆಡ್ಡಿ ಕೂಡ ಇದ್ದರು. ಸಾವಿರ ಕೋಟಿ ಕೊಡಲಾಗುವುದಿಲ್ಲ ಎಂದು ಹೇಳಿದ್ದನ್ನೇ ಖುದ್ದು ಇಲ್ಲ ಎಂದು ಹೇಳಿದ್ದಾಗಿ ಬಿಂಬಿಸುತ್ತಿರುವುದು ಸರಿಯಲ್ಲ. ಈ ರೀತಿ ಹೇಳಲು ನನಗೆ ಪ್ರಜ್ಞೆ ಇಲ್ಲವೇ, ಸರ್ಕಾರದಲ್ಲಿದ್ದುಕೊಂಡು ಆ ರೀತಿ ಮಾತನಾಡಲು ಸಾಧ್ಯವಿದೆಯೇ?, ಆ ರೀತಿ ಮಾತನಾಡುವುದೂ ಇಲ್ಲ. ನನಗೆ ವಸ್ತುಸ್ಥಿತಿ ತುಂಬಾ ಚೆನ್ನಾಗಿ ಗೊತ್ತಿದೆ. ರಾಜ್ಯದ ಆರ್ಥಿಕ ಸ್ಥಿತಿ ಸದೃಢವಾಗಿದೆ ಎಂದರು. ಮಾಜಿ ಕೇಂದ್ರ ಸಚಿವ ಅನಂತಕುಮಾರ್ ಹೆಗ್ಡೆ ಹಲ್ಲೆ ಮಾಡಿಲ್ಲ ಎಂದು ಅಧಿಕಾರಿಗಳು ಪ್ರಥಮ ಹಂತದ ಮಾಹಿತಿಯನ್ನು ನಮಗೆ ತಿಳಿಸಿದರು. ಪೊಲೀಸರು ಅನಂತರ ಪರಿಶೀಲನೆ ನಡೆಸುತ್ತಾರೆ. ವಾಸ್ತವತೆ ಆಧಾರದ ಮೇಲೆ ಅಗತ್ಯ ಕ್ರಮ ಕೈಗೊಳ್ಳುತ್ತಾರೆ ಎಂದು ತಿಳಿಸಿದರು.



> ತುರ್ತು ಪರಿಸ್ಥಿತಿಯ ಕರಾಳ ದಿನಾಚರಣೆ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ್, ಅದು ನಡೆದು 50 ವರ್ಷಗಳಾಗಿವೆ. ಇತಿಹಾಸ ಪುಟ ಸೇರಿದೆ. ಬಿಜೆಪಿಯವರು ಜೀವಂತ ಇಡುವ ಪ್ರಯತ್ನ ಮಾಡುತ್ತಿದ್ದಾರೆ. ಇದರ ಹಿಂದೆ ರಾಜಕೀಯ ದುರುದ್ದೇಶವಿದೆ. ಹಿಂದೆ ತಿರುಗಿ ನೋಡುವ ಬದಲು ಭವಿಷ್ಯದತ್ತ ನೋಡಬೇಕಿದೆ. ಮೋದಿಯವರು ಏನು ಮಾಡುತ್ತಿದ್ದಾರೆ, ಏನು ಮಾಡುತ್ತಾರೆ ಎಂಬುದರ ಚರ್ಚೆಯಾಗಿ ಮುಂದಿನ 50 ವರ್ಷದ ನೀಲನಕ್ಷೆ ಸಿದ್ಧಗೊಳ್ಳಲಿ
>
> -ಡಾ.ಜಿ.ಪರಮೇಶ್ವರ್, ಗೃಹಸಚಿವ

## ಎಲ್ಲಾ ಇಲಾಖೆಗಳು ಆಡಳಿತದಲ್ಲಿ ಕಡ್ಡಾಯವಾಗಿ

# ಕನ್ನಡ ಬಳಸಿ: ಸರ್ಕಾರ ಆದೇಶ

• ಉದಯವಾಹಿನಿ, ಬೆಂಗಳೂರು

ಸರ್ಕಾರದ ಎಲ್ಲಾ ಇಲಾಖೆಗಳು ಆಡಳಿತದಲ್ಲಿ ಪೂರ್ಣ ಪ್ರಮಾಣದಲ್ಲಿ ಕಡ್ಡಾಯವಾಗಿ ಕನ್ನಡ ಬಳಸಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಹತ್ವದ ಆದೇಶ ಹೊರಡಿಸಿದ್ದಾರೆ. ಕನ್ನಡ ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾಗಿ ಇರಬೇಕೆಂದು ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ 1963ರಲ್ಲಿ ತಿಳಿಸಲಾಗಿದೆ. ಕನ್ನಡದಲ್ಲಿ ಬರುವ ಅರ್ಜಿ, ಪತ್ರಗಳಿಗೆ ಕಡ್ಡಾಯವಾಗಿ ಕನ್ನಡದಲ್ಲಿಯೇ ಉತ್ತರಿಸಬೇಕು. ಸರ್ಕಾರಿ ಕಚೇರಿಗಳ ನಾಮಫಲಕಗಳನ್ನು ಕನ್ನಡದಲ್ಲಿಯೇ ಪ್ರದರ್ಶಿಸಬೇಕು ಎಂದು ಆದೇಶದಲ್ಲಿ ಉಲ್ಲೇಖಿಸಿದ್ದಾರೆ. ವಿಧಾನ ಮಂಡಲದ ಕಾರ್ಯಕಲಾಪಗಳು, ಪತ್ರ ವ್ಯವಹಾರ, ಗಮನಸೆಳೆಯುವ ಸೂಚನೆ ಇತ್ಯಾದಿಗಳು ಕಡ್ಡಾಯವಾಗಿ ಕನ್ನಡದಲ್ಲಿಯೇ ಸಲ್ಲಿಸಬೇಕು. ನೇಮಕಾತಿ, ವರ್ಗಾವಣೆ ಮತ್ತು ರಜೆ ಮಂಜೂರಾತಿ ಇತರ ಎಲ್ಲಾ ಸರ್ಕಾರದ ಆದೇಶಗಳನ್ನು ಕನ್ನಡದಲ್ಲಿ ಹೊರಡಿಸಲು ಸ್ಪಷ್ಟ ಸೂಚನೆ ನೀಡಿದ್ದಾರೆ. ಕಚೇರಿಗಳಿಗೆ ಒದಗಿಸಿರುವ ಆಂಗ್ಲ ಭಾಷಾ ನಮೂನೆ, ದಾಖಲೆ ಪುಸ್ತಕ ಮುಂತಾದವುಗಳನ್ನು ಕನ್ನಡದಲ್ಲಿ ಭರ್ತಿ ಮಾಡಬೇಕು. ಆಂತರಿಕ ಪತ್ರ ವ್ಯವಹಾರ, ಕಡತದ ಟಿಪ್ಪಣಿ ಕನ್ನಡದಲ್ಲಿಯೇ ಇರಬೇಕು. ಸಭಾ ಸೂಚನೆ, ಕಾರ್ಯಸೂಚಿ, ಸಂಕ್ಷಿಪ್ತ ಟಿಪ್ಪಣಿ, ನಡಾವಳಿಗಳನ್ನು ಕನ್ನಡದಲ್ಲಿ ತಯಾರಿಸಿರಬೇಕು. ಈ ಮೂಲಕ ಸರ್ಕಾರದ ಭಾಷಾ ನೀತಿಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಬೇಕು ಎಂದು ನಿರ್ದೇಶನ ನೀಡಿದ್ದಾರೆ. ಕೇಂದ್ರ ಸರ್ಕಾರ, ಹೊರ ರಾಜ್ಯಗಳು, ನ್ಯಾಯಾಲಯಗಳ ಪತ್ರ ವ್ಯವಹಾರಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಪತ್ರ ವ್ಯವಹಾರಗಳು ಕಡ್ಡಾಯವಾಗಿ ಕನ್ನಡದಲ್ಲಿಯೇ ಇರುವಂತೆ ತಾಕೀತು ಮಾಡಿದ್ದಾರೆ. ಸರ್ಕಾರಿ ಪತ್ರ ವ್ಯವಹಾರಗಳಲ್ಲಿ ಕಡತದ ಟಿಪ್ಪಣಿಗಳು ಕನ್ನಡದಲ್ಲಿಲ್ಲದ ಬಗ್ಗೆ ಗಮನಿಸಿದ್ದ ಸಿಎಂ ಗರಂ ಆಗಿದ್ದರು.



ಕಡತದಲ್ಲಿನ ಟಿಪ್ಪಣಿ, ಪತ್ರ ವ್ಯವಹಾರಗಳು ಕನ್ನಡದಲ್ಲಿ ಬಾರದಿದ್ದ ಪಕ್ಷದಲ್ಲಿ ಅಂತಹ ಕಡತಗಳನ್ನು ಹಿಂದಿರುಗಿಸಿ ಸೂಕ್ತ ಸಮಜಾಯಿಷಿ ಪಡೆಯಲು ಸಿಎಂ ನಿರ್ದೇಶನ ಕೊಟ್ಟಿದ್ದರು ಸರ್ಕಾರ, ನಿಗಮ, ಮಂಡಳಿ, ಸ್ಥಳೀಯ ಸಂಸ್ಥೆಗಳ, ವಿಶ್ವವಿದ್ಯಾಲಯಗಳ, ಅನುದಾನಿತ ಸಂಘ-ಸಂಸ್ಥೆಗಳ ಎಲ್ಲಾ ಅಧಿಕಾರಿ, ನೌಕರರು ಕಟ್ಟುನಿಟ್ಟಾಗಿ ಕನ್ನಡ ಬಳಕೆ ಜಾರಿಗೊಳಿಸಬೇಕು ಸೂಚನೆ ನೀಡಿದ್ದರು. ಸೂಚನೆಗಳನ್ನು ಉಲ್ಲಂಘಿಸಿದವರ ವಿರುದ್ಧ ವೈಯಕ್ತಿಕವಾಗಿ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸರ್ಕಾರದಿಂದ ಎಚ್ಚರಿಕೆ ನೀಡಲಾಗಿದೆ.

# ದೆಹಲಿಯಿಂದ ಮರಳುತ್ತಿದ್ದಂತೆ ಶಾಸಕರೊಂದಿಗೆ ಸಿಎಂ ಸರಣಿ ಸಭೆ


• ಉದಯವಾಹಿನಿ, ಬೆಂಗಳೂರು

ದೆಹಲಿಯಿಂದ ಮರಳುತ್ತಿದ್ದಂತೆ ಶಾಸಕರ ಜೊತೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸರಣಿ ಸಭೆಗಳನ್ನು ನಡೆಸಲು ಮುಂದಾಗಿದ್ದಾರೆ. ಆಳಂದ ಕ್ಷೇತ್ರದ ಶಾಸಕ ಬಿ.ಆರ್.ಪಾಟೀಲ್, ಸಾಗರ ಕ್ಷೇತ್ರದ ಶಾಸಕ ವೇಣುಗೋಪಾಲ್, ಮೊಳಕಾಲುರು ಕ್ಷೇತ್ರದ ಶಾಸಕ ಎನ್.ವೈ.ಗೋಪಾಲಕೃಷ್ಣ, ಕಾಗವಾಡ ಕ್ಷೇತ್ರದ ರಾಜು ಕಾಗೆ ಅವರ ಜೊತೆ ಪ್ರತ್ಯೇಕ ಚರ್ಚೆ ನಡೆಸಲು ಸಿದ್ದರಾಮಯ್ಯ ನಿರ್ಧರಿಸಿದ್ದಾರೆ. ಇಷ್ಟೂ ಮಂದಿ ಶಾಸಕರು ಸರ್ಕಾರದ ವಿರುದ್ಧ ಬಹಿರಂಗ ಅಸಮಾಧಾನ ವ್ಯಕ್ತಪಡಿಸುವ ಮೂಲಕ ಸಚಿವರು ಹಾಗೂ ಅಧಿಕಾರಿಗಳ ನಡವಳಿಕೆಗೆ ಕಿಡಿಕಾರಿದ್ದಾರೆ.ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟುಮಾಡಿದ್ದು, ವಿರೋಧಪಕ್ಷ ಬಿಜೆಪಿ ಪ್ರತಿಭಟನೆಯ ಹಾದಿ ಹಿಡಿಯುವಂತೆ ಮಾಡಿದೆ.

ಬಿ.ಆರ್.ಪಾಟೀಲ್ ಹಾಗೂ ರಾಜು ಕಾಗೆ ತಮ್ಮ ಹೇಳಿಕೆಗಳನ್ನು ಪದೇಪದೇ ಪುನರುಚ್ಚರಿಸುತ್ತಿದ್ದು, ನಡೆಯುತ್ತಿರುವುದನ್ನೇ ಹೇಳಿದ್ದೇವೆ, ಸತ್ಯ ಮಾತನಾಡಿದ್ದೇವೆ, ಈ ಸರ್ಕಾರದಲ್ಲಿ ಶಾಸಕರಿಗೆ ಬೆಲೆ ಇಲ್ಲ ಎಂಬೆಲ್ಲಾ ಟೀಕೆಗಳನ್ನು ಮಾಡಿದ್ದಾರೆ. ಮೊಳಕಾಲುರು ಕ್ಷೇತ್ರದ ಶಾಸಕ ಎನ್.ವೈ.ಗೋಪಾಲಕೃಷ್ಣ, ಗೃಹಸಚಿವ ಡಾ.ಜಿ.ಪರಮೇಶ್ವರ್ ಕಾಂಗ್ರೆಸ್ ಸರ್ಕಾರದಲ್ಲಿ ಹಣ ಇಲ್ಲ ಎಂದು ಹೇಳಿಕೆ ನೀಡಿ ಮುಜುಗರ ಉಂಟು ಮಾಡಿದ್ದರು. ಮಾರನೇ ದಿನವೇ ಯು-ಟರ್ನ್ ಪಡೆದಿದ್ದು, ನಾವು ಆ ರೀತಿ ಹೇಳಲಿಲ್ಲ ಎಂದಿದ್ದಾರೆ. ಬೇಳೂರು ಗೋಪಾಲಕೃಷ್ಣ, ಸಚಿವ ಜಮೀರ್ ಅಹಮದ್ ಖಾನ್ ರಾಜೀನಾಮೆ ನೀಡಬೇಕು ಎಂದಿದ್ದರು. ಮಾರನೇ ದಿನ ಅವರೂ ಕೂಡ ತಮ್ಮ ಹೇಳಿಕೆಯಿಂದ ಹಿಂದೆ ಸರಿದಿದ್ದಾರೆ. ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜರಾಯರೆಡ್ಡಿ ಭ್ರಷ್ಟಾಚಾರ ಎಲ್ಲಾ ಕಾಲದಲ್ಲೂ ಇದೆ, ನಮ ಕಾಲದಲ್ಲೂ ಇದೆ ಎಂದು ಹೇಳುವ ಮೂಲಕ ಮತ್ತೊಂದು ರೀತಿಯ ಗೊಂದಲ ಹುಟ್ಟುಹಾಕಿದ್ದರು. ಈ ಎಲ್ಲಾ ವಿಚಾರಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಸಕರು, ಸಚಿವರ ಜೊತೆ ವೈಯಕ್ತಿಕವಾಗಿ ಚರ್ಚೆ ನಡೆಸಲಿದ್ದಾರೆ ಎನ್ನಲಾಗಿದೆ.ಮೊದಲಿಗೆ ಬಿ.ಆರ್.ಪಾಟೀಲರನ್ನು ಕರೆಸಿ ಮಾತುಕತೆ ನಡೆಸುವ ಸಾಧ್ಯತೆಯಿದೆ. ಎರಡು ದಿನಗಳಿಂದ ದೆಹಲಿ ಪ್ರವಾಸದಲ್ಲಿರುವ ಸಿದ್ದರಾಮಯ್ಯ ಬುಧವಾರ ವಾಪಸ್ ಮರಳಲಿದ್ದಾರೆ. ಬಿ.ಆರ್. ಪಾಟೀಲ್ ಕೂಡ ತಾವು ಸಿದ್ದರಾಮಯ್ಯನವರನ್ನು ಭೇಟಿ ಮಾಡುವುದಾಗಿ ಹೇಳಿದ್ದರು.

### ಶೀಘ್ರವೇ ಶಾಸಕಾಂಗ ಸಭೆ

**ಶಾಸಕರೊಂದಿಗಿನ ಸರಣಿ ಸಮಾಲೋಚನೆ ಸಭೆಗಳು ಆರಂಭವಾಗುವ ಸಾಧ್ಯತೆಗಳಿವೆ. ಇದಕ್ಕೆ ಪೂರಕವಾಗಿ ಹೈಕಮಾಂಡ್ ಕೂಡ ಗೊಂದಲದ ಹೇಳಿಕೆಗಳಿಗೆ ಕಡಿವಾಣ ಹಾಕುವಂತೆ ಮುಖ್ಯಮಂತ್ರಿಯವರಿಗೆ ಹೇಳಿದ್ದು, ಶೀಘ್ರವೇ ಶಾಸಕಾಂಗ ಸಭೆ ಆಯೋಜಿಸುವ ನಿರೀಕ್ಷೆಗಳಿವೆ.**



# ಕಾಮಗಾರಿ ನಡೆಸದೆ 55 ಕೋಟಿ ಹಣ ಬಿಡುಗಡೆ

• ಉದಯವಾಹಿನಿ, ಬೆಂಗಳೂರು



ಜಮೀರ್ ವಿರುದ್ಧ ರಮೇಶ್ ಆರೋಪ

ನಯಾ ಪೈಸೆಯಷ್ಟೂ ಕೆಲಸ ಮಾಡದೇ 47 ಕಾಮಗಾರಿಗಳಿಗೆ ಎರಡೆರಡು ಸಲ ಹಣ ಬಿಡುಗಡೆ ಮಾಡಿಸಿಕೊಂಡಿರುವ 55.32 ಕೋಟಿ ರೂ.ಗಳ ಬೃಹತ್ ವಂಚನೆ ಪ್ರಕರಣ ಸಚಿವ ಜಮೀರ್ ಅಹಮದ್ ಪ್ರತಿನಿಧಿಸುವ ಚಾಮರಾಜಪೇಟೆ ಕ್ಷೇತ್ರದಲ್ಲಿ ನಡೆದಿದೆ ಎಂದು ಬಿಜೆಪಿ ಮುಖಂಡ ಎನ್. ಆರ್.ರಮೇಶ್ ಗಂಭೀರ ಆರೋಪ ಮಾಡಿದ್ದಾರೆ. 2020 – 2022 ರ ಅವಧಿಯಲ್ಲಿ 47 ಕಾಮಗಾರಿಗಳಿಗೆ ಟೆಂಡರ್ ಗಳನ್ನು ಕರೆದು, ಪೂರ್ವ ನಿಗದಿತ 19 ಮಂದಿ ಗುತ್ತಿಗೆದಾರರಿಗೆ ಕಾರ್ಯಾದೇಶ ಪತ್ರಗಳನ್ನು ನೀಡಲಾಗಿತ್ತು. ಈ ರೀತಿ ಕಾರ್ಯಾದೇಶ ಪತ್ರಗಳನ್ನು ಪಡೆದ 19 ಮಂದಿ ಗುತ್ತಿಗೆದಾರರು ಒಂದು ಬಿಡಿಗಾಸಿನಷ್ಟೂ ಸಹ ಕಾಮಗಾರಿಗಳನ್ನು ಮಾಡದೆಯೇ 27,66,00,000 ಗಳಷ್ಟು ಬೃಹತ್ ಮೊತ್ತವನ್ನು ತಮ್ಮ ರಾಜಕೀಯ ಪ್ರಭಾವದಿಂದ ಬಿಡುಗಡೆ ಮಾಡಿಸಿಕೊಂಡಿದ್ದರು. ಇದೀಗ, ಎರಡೂವರೆ ವರ್ಷಗಳ ನಂತರ 2024-25ರಲ್ಲಿ ಮತ್ತೊಮ್ಮೆ ಅದೇ 47 ಕಾಮಗಾರಿಗಳಿಗೆ, ಅದೇ 19 ಮಂದಿ ವಂಚಕ ಗುತ್ತಿಗೆದಾರರಿಗೆ 27,66,00,000 ರೂಗಳನ್ನು ಎರಡನೇ ಸಲ ಬಿಡುಗಡೆ ಮಾಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಚಾಮರಾಜಪೇಟೆಯಲ್ಲಿ ಉಮೇಶ್, ರಾಧಾಕೃಷ್ಣ, ತಿಮರಸು, ಭಾಸ್ಕರ್ ರೆಡ್ಡಿ ಎಂಬ ಕಾರ್ಯಪಾಲಕ ಅಭಿಯಂತರರುಗಳು, ಸಂಗೀತ ಎಂಬ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸತೀಶ್ ಕುಮಾರ್ ಎ., ಸೈಯದ್ ಸಮರ್, ಗಿರಿಧರ, ಅರುಣ್‌ಕುಮಾರ್ ಎಂ., ಸೌಮ್ಯ, ರಘು ಜಿ., ಶ್ರೀನಿವಾಸ ರಾಜು ಎಂಬ ಸಹಾಯಕ ಅಭಿಯಂತರರುಗಳು ವಂಚಕ ಗುತ್ತಿಗೆದಾರರೊಂದಿಗೆ ಷಾಮಿಲ್ಲಾಗಿದ್ದಾರೆ ಎಂದು ಅವರು ದೂರಿದ್ದಾರೆ. ನಿರ್ವಹಿಸದೇ ಇರುವ 47 ಕಾಮಗಾರಿಗಳಿಗೆ ಎರಡೆರಡು ಸಲ ಹಣ ಬಿಡುಗಡೆ ಮಾಡುವ ಸಂಬಂಧ ನಕಲಿ ದಾಖಲೆಗಳನ್ನು ಸೃಷ್ಟಿಸಿ ಒಟ್ಟು 55,32,00,000 ರೂಪಾಯಿಗಳಷ್ಟು ಬೃಹತ್ ಮೊತ್ತದ ಸಾರ್ವಜನಿಕರ ತೆರಿಗೆ ಹಣವನ್ನು ಲೂಟಿ ಮಾಡುವಲ್ಲಿ ವಂಚಕರು ಯಶಸ್ವಿಯಾಗಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಈ ಹಗರಣದ ಪ್ರಮುಖ ಪಾತ್ರಧಾರಿ ಗುತ್ತಿಗೆದಾರ ಚಂದ್ರಪ್ಪ ಅಲಿಯಾಸ್ ಪೆಟ್ಟಿಕೋಟ್ ಚಂದ್ರಪ್ಪ ಪೋಲೀಸರ ಕೈಗೆ ಸಿಗದೆ ಪರಾರಿಯಾಗಿ, ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದ. ಇಷ್ಟಾದರೂ ಎಚ್ಚೆತ್ತುಕೊಳ್ಳದ ಸಚಿವ ಜಮೀರ್ ಅವರು ಈ ಅಕ್ರಮಗಳಿಗೆ ಸಾಥ್ ನೀಡುತ್ತಿದ್ದಾರೆ. ಈ ಎಲ್ಲಾ ಅವ್ಯವಹಾರಗಳ ಹಿಂದೆ ಅವರ ಬಲಗೈ ಭಂಟ ಅಯೂಬ್ ಖಾನ್ ಇದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಹಣ ಬಿಡುಗಡೆ ಮಾಡಿರುವ ಮತ್ತು ಸಂಪೂರ್ಣ ನಕಲಿ ದಾಖಲೆಗಳನ್ನು ಸೃಷ್ಟಿಸಿರುವ 12 ಮಂದಿ ಭ್ರಷ್ಟ ಅಧಿಕಾರಿಗಳು, 19 ಮಂದಿ ವಂಚಕ ಗುತ್ತಿಗೆದಾರರ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದರ ಜೊತೆಗೆ, ಈ ಪ್ರಕರಣವನ್ನು ಉನ್ನತ ಮಟ್ಟದ ನ್ಯಾಯಾಂಗ ತನಿಖೆಗೆ ವಹಿಸಲು ಸರ್ಕಾರಕ್ಕೆ ಪತ್ರ ಬರೆಯುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು, ಆಡಳಿತಾಧಿಕಾರಿಗಳನ್ನು ರಮೇಶ್ ಆಗ್ರಹಿಸಿದ್ದಾರೆ. ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಚಾಮರಾಜಪೇಟೆ ವಿಭಾಗದ ಎಲ್ಲಾ 12 ಮಂದಿ ಭ್ರಷ್ಟ ಅಧಿಕಾರಿಗಳು, 19 ಮಂದಿ ವಂಚಕ ಗುತ್ತಿಗೆದಾರರ ವಿರುದ್ಧ ಭ್ರಷ್ಟಾಚಾರ, ವಂಚನೆ, ನಕಲಿ ದಾಖಲೆ ತಯಾರಿಕೆ, ಅಧಿಕಾರ ದುರುಪಯೋಗ ಪ್ರಕರಣಗಳನ್ನು ದಾಖಲಿಸಿಕೊಂಡು ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಂಪೂರ್ಣ ದಾಖಲೆಗಳ ಸಹಿತ ಲೋಕಾಯುಕ್ತ ಪೊಲೀಸರಿಗೆ ರಮೇಶ್ ದೂರು ನೀಡಿದ್ದಾರೆ.

### ಅಕ್ರಮ ತನಿಖೆಗೆ ಆಗ್ರಹ

**ಚಾಮರಾಜಪೇಟೆ ಕ್ಷೇತ್ರದ ಈ 47 ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಕಲಿಯಾಗಿ ತಯಾರಿಸಲಾಗಿದೆ. ಬೇರೆಡೆ ಮಾಡಿರುವ ಕಾಮಗಾರಿಗಳ ಛಾಯಾಚಿತ್ರಗಳನ್ನು ತೆಗೆದು ಈ 47 ಕಾಮಗಾರಿಗಳಿಗೆ ಸಂಬಂಧಿಸಿದ ಕಡತಗಳಲ್ಲಿ ಲಗತ್ತಿಸಲಾಗಿದೆ. ಈ ಕುರಿತಂತೆ ಬಿಬಿಎಂಪಿ ಮಾಜಿ ಸದಸ್ಯರಾಗಿರುವ ಕಾಂಗ್ರೆಸ್ ಪಕ್ಷದವರೇ ಆದ ಶ್ರೀನಿವಾಸ ಮೂರ್ತಿ ಎಂಬುವರು ಅಕ್ರಮದ ತನಿಖೆಗೆ ಆಗ್ರಹಿಸಿದ್ದರು.**

# ಯಾವುದೇ ಅಧಿಕಾರ ಪದವಿ ಶಾಶ್ವತವಲ್ಲ: ಎಮ್ ಶಮಿವುಲ್ಲಾ

## ಸರ್ಕಾರದ ವಾಹನವನ್ನು ಬಳಸದ ಅರಸೀಕೆರೆ ನಗರಸಭೆ ಅಧ್ಯಕ್ಷರು

• ಉದಯವಾಹಿನಿ ಬೆಂಗಳೂರು



ಹಾಸನ ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರವನ್ನು ಹೊರತುಪಡಿಸಿ ಅರಸೀಕೆರೆ ನಗರಸಭೆಯು ಅತಿ ದೊಡ್ಡ ಸ್ಥಳೀಯ ಸಂಸ್ಥೆ ಆಗಿದ್ದು ಈ ನಗರ ಸಭೆಯ ಮೂರನೇ ಬಾರಿ ಅಧ್ಯಕ್ಷರಾಗಿ ಆಯ್ಕೆಯಾಗಿ ಹಾಲಿ ಅಧ್ಯಕ್ಷರಾಗಿ ಕಾರ್ಯಭಾರ ನಡೆಸುತ್ತಿರುವ ಎಂ ಶಮಿವುಲ್ಲಾ ಸರ್ಕಾರದ ವಾಹನವನ್ನೇ ಬಳಸದೆ ತಮ್ಮ ದ್ವಿಚಕ್ರ ವಾಹನದ ಮೂಲಕವೇ ಕಚೇರಿಗೆ ಬರುವುದು ಮತ್ತು ಅರಸೀಕೆರೆ ನಗರದಲ್ಲಿನ ಸಮಸ್ಯೆಗಳಿಗೆ, ನಗರಸಭೆ ವತಿಯಿಂದ ನಡೆಯುವ ಕಾರ್ಯಕ್ರಮಗಳಿಗೆ ತೆರಳಿ ಸರ್ಕಾರಕ್ಕೆ ಇದುವರೆಗೆ ಲಕ್ಷಾಂತರ ಹಣವನ್ನು ಉಳಿತಾಯ ಮಾಡಿ ಅರಸೀಕೆರೆ ನಗರಸಭೆಯ ಮಾದರಿ ಅಧ್ಯಕ್ಷರೆನಿಸಿದ್ದಾರೆ. ಹೀಗೆ ಕೆಲವೇ ದಿನಗಳ ಹಿಂದೆ ಹಾವೇರಿ ಜಿಲ್ಲೆಯ ನಗರಸಭೆಯ ಅಧ್ಯಕ್ಷರು ಸರ್ಕಾರದ ವಾಹನವನ್ನು ಬಳಸದೆ ತಮ್ಮ ಸ್ವಂತ ವಾಹನವನ್ನು ಅಂದರೆ ತಮ್ಮ ಸ್ವಂತ ಕಾರನ್ನು ಉಪಯೋಗಿಸಿಕೊಳ್ಳುವ ಮುಖಾಂತರ ಸುದ್ದಿಯಾಗಿದ್ದರು. ಇದನ್ನು ಸಹಮೀರಿಸುವ ವಿಚಾರವೆಂದರೆ ಅರಸೀಕೆರೆ ನಗರಸಭೆ ಅಧ್ಯಕ್ಷರಾದ ಶಮಿವುಲ್ಲಾ ತಮ್ಮ ದ್ವಿಚಕ್ರ ವಾಹನದಲ್ಲಿ ಕಚೇರಿಗೆ ಬರುವುದರ ಮುಖಾಂತರ ತಮ್ಮ ಸರಳತೆಯನ್ನು ತೋರಿಸಿದರು ಅರಸೀಕೆರೆ ನಗರಾದ್ಯಂತ ಯಾವುದೇ ವಾರ್ಡ್‌ಗಳಲ್ಲಿ ಸಮಸ್ಯೆ ಕಂಡು ಬಂದಾಗ ಆಯಾ ವಾರ್ಡ್‌ನ ನಗರಸಭೆ ಸದಸ್ಯರೊಂದಿಗೆ ಕೂಡಲೇ ನಗರಸಭೆಯ ಸಿಬ್ಬಂದಿಗಳೊಂದಿಗೆ ಭೇಟಿ ನೀಡಿ ನಗರದ ನಾಗರಿಕರ ಸಮಸ್ಯೆಗೆ ಸ್ಪಂದಿಸಿ ಅರಸೀಕೆರೆ ನಗರಾದ್ಯಂತ ನಗರಸಭೆ ಆಡಳಿತಕ್ಕೆ ಚುರುಕು ಮುಟ್ಟಿಸಿದರು.





### ಎಮ್ ಶಮಿವುಲ್ಲಾ ಪ್ರತಿಕ್ರಿಯೆ


**ಅರಸೀಕೆರೆ ನಗರಸಭೆ ಅಧ್ಯಕ್ಷರಾದ ಎಮ್ ಶಮಿವುಲ್ಲಾ ಉದಯವಾಹಿನಿಯೊಂದಿಗೆ ಮಾತನಾಡಿ ಯಾವುದೇ ಅಧಿಕಾರ ಪದವಿ ಶಾಶ್ವತವಲ್ಲ ಬಡವರು ಸಮಾಜದ ಕೆಳ ವರ್ಗದ ಜನ, ನಾಗರೀಕರಿಗೆ ಸ್ಪಂದಿಸುವ ಅವಕಾಶ ಬಂದಿರುವುದೇ ನಮ್ಮ ತಂದೆ ತಾಯಿಯ ಆಶೀರ್ವಾದದಿಂದ ಇದರಿಂದ ಅರಸೀಕೆರೆ ನಗರದ ಅದುನೀಕರಣಕ್ಕೆ ಶ್ರಮಿಸುತ್ತಿರುವುದಾಗಿ. ಇದಕ್ಕೆ ಮುಖ್ಯವಾಗಿ ಸ್ಪಂದಿಸುತ್ತಿರುವ ನಗರ ಸಭೆಯ ಸಿಬ್ಬಂದಿ ವರ್ಗ ಎಲ್ಲಾ ನನ್ನ ಸಹೋದ್ಯೋಗಿ ನಗರಸಭೆಯ ಸದಸ್ಯರುಗಳು, ನಗರಸಭೆ ಉಪಾಧ್ಯಕ್ಷರ ಸಹಕಾರದಿಂದ ನಗರದಲ್ಲಿ ಉತ್ತಮ ಕೆಲಸ ಮಾಡುತ್ತಿರುವುದಾಗಿ, ಈ ವರೆಗೆ ಮೂರು ಬಾರಿ ನಗರಸಭೆ ಅಧ್ಯಕ್ಷರಾದರು ನಮಗೆ ವಾಹನದ ಅವಶ್ಯಕತೆ ಏನಿಲ್ಲ ಇದರಿಂದ ಸರ್ಕಾರಕ್ಕೂ ಸಹ ಆರ್ಥಿಕವಾಗಿ ಉಳಿತಾಯವಾಗುತ್ತದೆ ಇದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದ್ದು ಅರಸೀಕೆರೆ ನಗರದಲ್ಲಿ ದ್ವಿಚಕ್ರ ವಾಹನದಲ್ಲಿಯೇ ಜನರ ಬಳಿ ಹೋದಲ್ಲಿ ಸಾರ್ವಜನಿಕರು, ನಾಗರಿಕರ ಸಮಸ್ಯೆಗಳು ಸದಾ ತಿಳಿದುಬರುತ್ತವೆ ಹೀಗಾಗಿ ಇದರಿಂದಲೇ ನಮಗೆ ಸಾರ್ವಜನಿಕರು, ನಾಗರಿಕರ ಮನಸ್ಸಿಗೆ ಹತ್ತಿರವಾಗಿದ್ದೇವೆ ಎಂದರು.**



# ವಾರಕ್ಕೆ 3 ದಿನ ಕಾವೇರಿ ಆರತಿ ಹತ್ತು ಸಾವಿರ ಆಸನಗಳ ವ್ಯವಸ್ಥೆ, 70% ಉಚಿತ, 30% ಟಿಕೆಟ್

• ಉದಯವಾಹಿನಿ, ಬೆಂಗಳೂರು

ವಾರಕ್ಕೆ ಮೂರು ದಿನ ಕಾವೇರಿ ಆರತಿ ನಡೆಯಲಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಘೋಷಣೆ ಮಾಡಿದ್ದಾರೆ. ವಿಧಾನಸೌಧದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಅವರು ಸಚಿವರು, ಶಾಸಕರು, ರೈತ ಮುಖಂಡರ ಜೊತೆ ಸಭೆ ನಡೆಸಿ ಕಾವೇರಿ ಆರತಿ ಬಗ್ಗೆ ಚರ್ಚಿಸಿದರು. ಬಳಿಕ ಮಾತನಾಡಿದ ಅವರು, ಪ್ರಯತ್ನ ವಿಫಲ ಆಗಬಹುದು, ಪ್ರಾರ್ಥನೆ ವಿಫಲ ಆಗಲ್ಲ. ಕೆಆರ್‌ಎಸ್‌ನಲ್ಲಿ ಹೊಸ ರೂಪ ಕೊಡಲು ಪ್ರಾರಂಭ ಮಾಡಿದ್ದೇವೆ. ವಾರಕ್ಕೆ ಮೂರು ದಿನ ಕಾವೇರಿ ಆರತಿ ನಡೆಯಲಿದೆ. 10 ಸಾವಿರ ಆಸನಗಳ ವ್ಯವಸ್ಥೆ ಮಾಡುತ್ತೇವೆ. ಇದರಲ್ಲಿ 70% ಆಸನಗಳು ಉಚಿತ, 30% ಟಿಕೆಟ್ ಮಾಡ್ತೀವಿ ಎಂದು ಹೇಳಿದರು.



ಕೆಆರ್‌ಎಸ್‌ಗೆ ಬರುವ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸಬೇಕು, ಕಾವೇರಿಗೆ ನಮನ ಸಲ್ಲಿಸಲು ಸಾಕಷ್ಟು ಸಲಹೆಗಳು ಬಂದಿವೆ. ತಾಯಿ ಕಾವೇರಿಗೆ ಜಾತಿ, ಧರ್ಮ, ಬಣ್ಣ ಇಲ್ಲ, ಎಲ್ಲರ ಆಸ್ತಿ ಕಾವೇರಿ. ಕೆಲ ರೈತರು ಆತಂಕ ವ್ಯಕ್ತಪಡಿಸಿದರು. ಗೌರವಿಸಿ ಅವರ ಅಭಿಪ್ರಾಯವನ್ನು ಕೇಳಿದ್ದೇವೆ.

ಡ್ಯಾಂಗೆ ತೊಂದರೆ ಆಗಬಹುದು ಎಂಬ ಆತಂಕ ರೈತರಿಗಿದೆ. ಆ ರೀತಿ ಆಗಲ್ಲ. ಕಾವೇರಿ ಆರತಿ ಯಾವ ರೀತಿ ನಡೆಯಲಿದೆ ಎಂಬುದನ್ನು ಇನ್ನೆರಡು ದಿನದಲ್ಲಿ ಬಿಡುಗಡೆ ಮಾಡುತ್ತೇನೆ. ಮೈಸೂರು, ಮಂಡ್ಯ, ಕೊಡಗು, ಮಂಗಳೂರು ಸಂಸ್ಕೃತಿಯನ್ನೂ ಸೇರಿಸುತ್ತೇವೆ. ಸ್ಥಳೀಯರಿಗೆ ಮಾತ್ರ ಆದ್ಯತೆ ಕೊಡಬೇಕು ಎಂದು ಸೂಚಿಸಿದ್ದೇವೆ ಎಂದು ಹೇಳಿದರು. ಇನ್ನೂ ಹೆಚ್‌ಡಿಕೆಗೆ ತಿರುಗೇಟು ನೀಡಿದ ಅವರು, ಕುಮಾರಣ್ಣನೇ ಡಿಸ್ನಿಲ್ಯಾಂಡ್ ಮಾಡಬೇಕು ಎಂದು ನಮಗೆ ಹೇಳಿದ್ದರು. ನೀನು ಚೆನ್ನಾಗಿ ಬೆಳೆಯುತ್ತಿಯಾ ಅಂದರೆ ಅಪಸ್ವರ ಇದ್ದೇ ಇರುತ್ತದೆ ಎಂದು ಟಾಂಗ್ ಕೊಟ್ಟರು.

# ಸಮಯ ಬಂದರೆ ರಾಮನಗರದಲ್ಲಿಯೇ ನನ್ನ ಮುಂದಿನ ಚುನಾವಣೆ

## ಹೆಸರು ಬದಲಾವಣೆ ಮಾಡಿದ್ರೆ ಅಭಿವೃದ್ಧಿ ಆಗಲ್ಲ, ಕ್ಷೇತ್ರವನ್ನ ಅಭಿವೃದ್ಧಿ ಮಾಡಬೇಕು ಎಂದು ನಿಖಿಲ್ ಕಿಡಿ

• ಉದಯವಾಹಿನಿ, ರಾಮನಗರ

**ಜಿಲ್ಲೆಯಿಂದ ಪಲಾಯನ ಮಾಡುವುದಿಲ್ಲ**

ಚುನಾವಣೆಗೆ ನಿಲ್ಲುವ ಸಮಯ ಬಂದರೆ ರಾಮನಗರದಲ್ಲಿಯೇ ನನ್ನ ಮುಂದಿನ ಚುನಾವಣೆ. ಯಾವುದೇ ಕಾರಣಕ್ಕೂ ನಾನು ಜಿಲ್ಲೆಯಿಂದ ಪಲಾಯನ ಮಾಡುವುದಿಲ್ಲ ಎಂದು ದೃಢ ಸಂಕಲ್ಪವನ್ನು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವ್ಯಕ್ತಪಡಿಸಿದರು. ಇದು ನಮ್ಮ ಸ್ವ ಕ್ಷೇತ್ರ, ನೀವು ಬೆಳೆಸಿದ ಮನೆ ಮಕ್ಕಳು ನಾವು. ನಮ್ಮನ್ನ ಪ್ರೀತಿಯಿಂದ ಅರಸಿದ್ದೀರಿ, ಬೆಳೆಸಿದ್ದೀರಿ. ಯಾವುದೇ ಕಾರಣಕ್ಕೂ ಜಿಲ್ಲೆಯಿಂದ ಪಲಾಯನ ಮಾಡುವುದಿಲ್ಲ, ಸೋಲು ಗೆಲುವು ಸರ್ವೇ ಸಾಮಾನ್ಯ, ನನ್ನ ಮೂರು ಸೋಲುಗಳು ನನಗೆ ರಾಜಕೀಯವಾಗಿ ಪರಿಪಕ್ವತೆಯನ್ನು ಕಲಿಸಿವೆ. ಈ ಸೋಲುಗಳಿಂದ ಕುಗ್ಗದೆ ಮತ್ತೆ ಅವಕಾಶ ಸಿಕ್ಕರೆ ರಾಮನಗರದಿಂದಲೇ ಸ್ಪರ್ಧೆ ಮಾಡುವುದಾಗಿ ತಿಳಿಸಿದರು.

ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಆರನೇ ದಿನದ ಕಾರ್ಯಕರ್ತರ ಸಭೆ ಹಾಗೂ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಸಭೆಯನ್ನ ಉದ್ದೇಶಿಸಿ ಅವರು ಮಾತನಾಡಿದರು. ಕುಮಾರಸ್ವಾಮಿ ಅವರಿಗೆ ದೆಹಲಿಯಲ್ಲಿ ಕೆಲಸವಿಲ್ಲ ರಾಜ್ಯಕ್ಕೆ ಬರ್ತಾರೆಂಬ ಡಿಕೆ ಸುರೇಶ್ ಹೇಳಿಕೆ ವಿಚಾರಕ್ಕೆ ಮಾತನಾಡಿದ ಅವರು, ಹೌದಪ್ಪ ಮಾವು ಬೆಳೆಗಾರರಿಗೆ ಬೆಂಬಲ ಬೆಲೆ ಕೊಡಿಸಿದ್ದು ಡಿಕೆ ಸುರೇಶ್ ಅವರ ಅಥವಾ ಡಿ.ಕೆ.ಶಿವಕುಮಾರ್ ಕೊಡಿಸಿದ್ರಾ..? ಎಂದು ಟಾಂಗ್ ನೀಡಿದರು.

ಮಾವಿನ ಹಣ್ಣಿನ ಬೆಲೆ ಕುಸಿತದಿಂದ ಸಂಕಷ್ಟದಲ್ಲಿದ್ದ ರೈತರಿಗೆ ಕುಮಾರಣ್ಣ ನೆರವಿಗೆ ಬಂದಿದ್ದಾರೆ. ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದರು. ಕುಮಾರಣ್ಣನ ಮನವಿಗೆ ಸ್ಪಂದಿಸಿ ಕೇಂದ್ರ ಸರ್ಕಾರ ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆಯಡಿ ಬೆಂಬಲ ಬೆಲೆ ಘೋಷಿಸಿದೆ ಎಂದರು.



**ಕೈ ಬಿಡುವ ಪ್ರಶ್ನೆಯೇ ಇಲ್ಲ**

**ರಾಮನಗರ ಹೆಸರು ಬದಲಾವಣೆಯಿಂದ ಅಭಿವೃದ್ಧಿಯಾಗಲ್ಲ:** ಹೆಸರು ಬದಲಾವಣೆ ಮಾಡುವುದರಿಂದ ಅಭಿವೃದ್ಧಿ ಆಗಲ್ಲ. ಕೆಂಗಲ್ ಹನುಮಂತಯ್ಯ ಅವರ ಕಟ್ಟಿದ ರಾಮನಗರ ಹೆಸರನ್ನು ಕಾಂಗ್ರೆಸ್ ಅಳಿಸಿದೆ. ಆದರೆ ರಾಮನಗರ ಜನರ ಹೃದಯದಲ್ಲಿ ರಾಮನಗರ ಶಾಶ್ವತವಾಗಿ ಉಳಿದಿದೆ ಮಿಸ್ಟರ್ ಡಿ.ಕೆ ಶಿವಕುಮಾರ್ ಎಂದು ಟಾಂಗ್ ನೀಡಿದರು. ಒಂದು ರಸ್ತೆಗೆ, ಸರ್ಕಾರಿ ಶಾಲೆ ದುರಸ್ತಿಗೆ ಹಣವಿಲ್ಲ ಈ ಸರ್ಕಾರದಲ್ಲಿ. ಆದರೆ ಮಧ್ಯವರ್ತಿಗಳ ಮೂಲಕ ಹೋದ್ರೆ ಎಲ್ಲವೂ ಸಿಗುತ್ತೆ. ಆ ಸ್ಥಿತಿ ಇದೇ ಕಾಂಗ್ರೆಸ್ ಪಕ್ಷದಲ್ಲಿ. ವಸತಿ ಇಲಾಖೆಯಲ್ಲಿ ಮನೆ ಪಡೆಯಬೇಕಾದ್ರೆ ಗುತ್ತಿಗೆದಾರರ ಮೂಲಕ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ಕಾವೇರಿಗೆ ಆರತಿ ಸರ್ಕಾರ ಹಣ ಖರ್ಚು ಮಾಡ್ತಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು ಕಾವೇರಿಗೆ ಆರತಿ ಮಾಡುತ್ತಿರುವುದು ಸ್ವಾಗತ ಮಾಡುತ್ತೇನೆ, ಅದು ನಮ್ಮ ಸಂಸ್ಕೃತಿ. ಆದರೆ ಅದಕ್ಕೆ ಕೋಟಿ, ಕೋಟಿ ಹಣ ಖರ್ಚು ಮಾಡುವುದರಿಂದ ಜನ ಸಾಮಾನ್ಯರಿಗೆ ಸಿಕ್ಕ, ಈ ಹಣವನ್ನ ಕಾಂಗ್ರೆಸ್ ಕೊಡುತ್ತಾ..? ಜನರ ಹಣದಿಂದ ಖರ್ಚು ಮಾಡ್ತಾರೆ ಎಂದು ಟೀಕಿಸಿದರು.

> ರಾಮನಗರದಲ್ಲಿ ಮುಂದಿನ ಚುನಾವಣೆ ಸ್ಪರ್ಧಿಸುವುದಾಗಿ ದೃಢವಾಗಿ ಹೇಳಿದ ಅವರು, ಜಿಲ್ಲೆಯಿಂದ ಪಲಾಯನ ಮಾಡುವ ಪ್ರಶ್ನೆಯೇ ಇಲ್ಲ, ಕುಮಾರಸ್ವಾಮಿ ಅವರು ರೈತರ ಪರವಾಗಿ ಕೆಲಸ ಮಾಡಿದ್ದಾರೆ, ಕಾಂಗ್ರೆಸ್ ಸರ್ಕಾರವು ಅಭಿವೃದ್ಧಿ ಕಾರ್ಯಗಳಿಗೆ ಹಣ ನೀಡುತ್ತಿಲ್ಲ, ಕಾರ್ಯಕರ್ತರನ್ನು ಎಂದಿಗೂ ಕೈಬಿಡುವುದಿಲ್ಲ
> – ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ

**ಕಾರ್ಯಕರ್ತರನ್ನು ಕೈಬಿಡುವ ಪ್ರಶ್ನೆಯೇ ಇಲ್ಲ:** ಪಕ್ಷ ನಿಮ್ಮನ್ನು ಗುರುತಿಸಲಿದೆ. ಕಾರ್ಯಕರ್ತರನ್ನು ಕೈಬಿಡುವ ಪ್ರಶ್ನೆಯೇ ಇಲ್ಲ. ಈ ರಾಜ್ಯ ಪ್ರವಾಸ ಹಮ್ಮಿಕೊಂಡಿರುವುದೇ ಜನರೊಂದಿಗೆ ಜನತಾದಳ ಎಂಬ ಅಭಿಯಾನದ ಭಾಗವಾಗಿ ಪ್ರತಿಯೊಬ್ಬ ಕಾರ್ಯಕರ್ತರನ್ನು ಭೇಟಿಯಾಗಿ ಪಕ್ಷವನ್ನು ಬಲಿಷ್ಠಗೊಳಿಸುವ ಗುರಿಯನ್ನು ಹೊತ್ತಿ ಹೇಳಿದರು.

# ಶಾಸಕ ಪ್ರದೀಪ್ ರಿಂದ ಕೈ ಮುಖಂಡರ ನಿರ್ಲಕ್ಷ್ಯ; ದೂರು

• ಉದಯವಾಹಿನಿ, ಚಿಕ್ಕಬಳ್ಳಾಪುರ

ದಶಕಗಳ ಕಾಲದಿಂದ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸಿದ ಹಾಗೂ ಬೆಳೆಸುತ್ತಿರುವ ಕಾಂಗ್ರೆಸ್ ಮುಖಂಡರನ್ನು ಶಾಸಕ ಪ್ರದೀಪ್ ಈಶ್ವರ್ ರವರು ಮೂಲೆಗುಂಪು ಮಾಡುತ್ತಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಪಕ್ಷದ ನಿಯೋಗ ಒಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ರವರನ್ನು ಭೇಟಿ ಮಾಡಿ ದೂರು ಪತ್ರ ಸಲ್ಲಿಸಿದರು. ಈ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಕಾಂಗ್ರೆಸ್ ಮುಖಂಡರು ಮಾಹಿತಿ ಹರಿಬಿಟ್ಟಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ ನಂತರ ಶಾಸಕ ಪ್ರದೀಪ್ ಈಶ್ವರ ಅವರು ರಾಜಕೀಯವಾಗಿ ತಾವು ಜಯಗಳಿಸಲು ಕಾರಣಕರ್ತರಾದ ಮುಖಂಡರುಗಳನ್ನು ಈಗ ಮೂಲಗುಂಪು ಮಾಡುತ್ತಿದ್ದು ಶಾಸಕರ ಬೆಂಬಲಿಗಾರಿಗೆ ಮಾತ್ರ ಆಯಕಟ್ಟಿನ ನೇಮಕಾತಿ ಸ್ಥಾನಮಾನಗಳನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಇನ್ನು ಕೆಲವೇ ತಿಂಗಳುಗಳಲ್ಲಿ ತಾಲ್ಲೂಕು ಪಂಚಾಯತ್ ಜಿಲ್ಲಾ ಪಂಚಾಯತ್ ಒಳಗೊಂಡಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂಹಿತವಾಗಿರುವ ಹಿನ್ನೆಲೆಯಲ್ಲಿ ಎಲ್ಲಾ ಕಾಂಗ್ರೆಸ್ಸಿಗರನ್ನು ಒಂದುಗೂಡಿಸಿಕೊಂಡು ಕ್ಷೇತ್ರದಲ್ಲಿ ಪಕ್ಷವನ್ನು ಉತ್ತಮವಾಗಿ ಸಂಘಟಿಸುವಲ್ಲಿ ಶಾಸಕ ಪ್ರದೀಪ್ ಈಶ್ವರ್ ವಿಫಲರಾಗಿದ್ದಾರೆ ಇವರು ತಮ್ಮ ನಡೆಯನ್ನು ಇದೇ ರೀತಿ ಮುಂದುವರಿಸಿದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಇದ್ದುಕೊಂಡೇ ನಾವು ಅವರ ನಡೆಯನ್ನು ವಿರೋಧಿಸುತ್ತೇವೆ ಎಂದಿದ್ದಾರೆ. ಇತ್ತೀಚೆಗೆ ನಗರಸಭೆ ಅಧ್ಯಕ್ಷರ ಗಾದಿ ಸೇರಿದಂತೆ ನಡೆದ ಕೆಲವು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನೆಲಕಚ್ಚಿದ್ದು ಈ ರೀತಿ ನೆಲಕಚ್ಚುವುದಕ್ಕೆ ಶಾಸಕ ಪ್ರದೀಪ್ ಈಶ್ವರ ಅವರೇ ನೇರ ಕಾರಣ ಎಂದು ಆರೋಪಿಸಿದ್ದಾರೆ.


ಉದಯವಾಹಿನಿ ಚಿತ್ರ

# ಮಂಡ್ಯದ ಪ್ರಿಯಕರನಿಂದ ಹಾಸನದ ಗೃಹಿಣಿ ಹತ್ಯೆ

## ಗುರುವಾರ ಚಾಟಿಂಗ್, ಭಾನುವಾರ ಡೇಟಿಂಗ್, ಮರುದಿನವೇ ಕಿಲ್ಲಿಂಗ್

• ಉದಯವಾಹಿನಿ, ಮಂಡ್ಯ

ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾಗಿ ಒಂದೇ ವಾರದಲ್ಲಿ ಪ್ರಿಯಕರನಿಂದ ಹಾಸನದ ಗೃಹಿಣಿಯೊಬ್ಬರು ಹತ್ಯೆಗೀಡಾಗಿದ್ದಾರೆ. ಹಾಸನ ಜಿಲ್ಲೆಯ ಹೊಸಕೊಪ್ಪಲು ಗ್ರಾಮದ ಪ್ರೀತಿ (35) ಮೃತ ಮಹಿಳೆ. ಮಂಡ್ಯ ಜಿಲ್ಲೆ ಕೆಆರ್ ಪೇಟೆಯ ಕರೋಟಿ ಗ್ರಾಮದ ಪುನೀತ್ ಹತ್ಯೆಗೈದ ಯುವಕ. ಈ ಇಬ್ಬರು ಇನ್‌ಸ್ಟಾಗ್ರಾಂನಲ್ಲಿ ಗುರುವಾರ ಪರಿಚಯವಾಗಿ ಭಾನುವಾರ ಮೀಟಿಂಗ್ ಡೇಟಿಂಗ್ ಮಾಡಿಕೊಂಡಿದ್ದಾರೆ. ಆ ಬಳಿಕ ಮಹಿಳೆಯನ್ನು ಪ್ರಿಯಕರ ಹತ್ಯೆ ಮಾಡಿದ್ದಾನೆ. ಬಳಿಕ ಜಮೀನಿನಲ್ಲೇ ಶವವನ್ನು ಹೂತು ಹಾಕಿದ್ದಾನೆ. ಪ್ರೀತಿ ಕಾಣಲಿಲ್ಲ ಎಂದು ಸೋಮವಾರ ಆಕೆಯ ಗಂಡ ಹಾಸನದಲ್ಲಿ ಪೊಲೀಸ್ ದೂರು ದಾಖಲಿಸಿದ್ದಾರೆ. ಆ ದೂರಿನ ಆಧಾರದ ಮೇಲೆ ಪೊಲೀಸರು ತನಿಖೆ ನಡೆಸಿದ್ದು, ಆಗ ಮಹಿಳೆಯು ಮಂಡ್ಯದ ಗ್ರಾಮವೊಂದರ ಜಮೀನಿನಲ್ಲಿ ಮೃತಪಟ್ಟಿದ್ದಾರೆ ಎಂದು ಪತ್ತೆಯಾಗಿದೆ. ಈ ಬಗ್ಗೆ ಮಂಡ್ಯ ಪೊಲೀಸ್ ವರಿಷ್ಠಾಧಿಕಾರಿಗಳು ಮಾಹಿತಿ ನೀಡಿದ್ದು, 4 ದಿನಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ಇಬ್ಬರ ಪರಿಚಯ.

ಭಾನುವಾರವೇ ಇಬ್ಬರು ಮೀಟ್ ಆಗಿದ್ದು, ಲೈಂಗಿಕತೆ ವಿಚಾರಕ್ಕೆ ಗಲಾಟೆಯಾಗಿದೆ ಪುನೀತ್ ಪ್ರೀತಿಯ ಮೇಲೆ ಹಲ್ಲೆ ಮಾಡಿದ್ದು, ಈ ವೇಳೆ ಮೃತಪಟ್ಟಿದ್ದಾಳೆ ಎಂದು ತಿಳಿಸಿದ್ದಾರೆ.

**ಭಾನುವಾರವಿಡೀ ಮೈಸೂರು ಸುತ್ತಾಟ:** ಭಾನುವಾರ ಭೇಟಿಯಾದ ಪುನೀತ್ ಪ್ರೀತಿ ಇಬ್ಬರೂ ಮಂಡ್ಯ, ಮೈಸೂರಿನಲ್ಲಿ ಸುತ್ತಾಡಿದ್ದಾರೆ. ಬಳಿಕ ಕೆ ಆರ್ ಪೇಟೆಯ ಕತ್ತರಘಟ್ಟ ಫಾರೆಸ್ಟ್ ಏರಿಯಾದಲ್ಲಿ ಇಬ್ಬರ ನಡುವೆ ಜಗಳ ಆಗಿದ್ದು, ಪ್ರೀತಿಯ ಹತ್ಯೆ ಮಾಡಿದ ಪುನೀತ್ ಆಕೆಯ ಮೈಮೇಲಿದ್ದ ಚಿನ್ನಾಭರಣವನ್ನು ಎತ್ತಿಕೊಂಡು ಆಕೆಯ ಶವವನ್ನು ಕರೋಟಿ ಗ್ರಾಮದ ತನ್ನ ಜಮೀನಿನಲ್ಲಿ ಹೂತು ಹಾಕಿದ್ದಾನೆ.

**ಮಹಿಳೆಯ ಮೊಬೈಲ್ ನೆಟ್‌ವರ್ಕ್‌ನಿಂದ ಪತ್ತೆ:** ಪೊಲೀಸರು ಮೊದಲಿಗೆ ಮಹಿಳೆಯ ಮೊಬೈಲ್ ನೆಟ್‌ವರ್ಕ್ ಪತ್ತೆ ಮಾಡಿದ್ದು, ಆಗ ಎಲ್ಲೆಲ್ಲಿ ಓಡಾಡಿದ್ದಾರೆ ಎಂದು ತಿಳಿದುಬಂದಿದೆ. ಆ ಬಳಿಕ ಚಾಟ್, ಫೋನ್ ಕಾಲ್ ಆಧರಿಸಿ ಪುನೀತ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸತ್ಯ ಒಪ್ಪಿಕೊಂಡಿದ್ದಾನೆ.


ಉದಯವಾಹಿನಿ ಚಿತ್ರ

- ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾಗಿ ಒಂದೇ ವಾರದಲ್ಲಿ ಪ್ರಿಯಕರನಿಂದ ಹತ್ಯೆಯಾದ ಪ್ರೀತಿ.
- ಮಂಡ್ಯ ಜಿಲ್ಲೆ ಕೆಆರ್ ಪೇಟೆಯ ಕರೋಟಿ ಗ್ರಾಮದ ಜಮೀನಿನಲ್ಲಿ ಮಹಿಳೆ ಶವಪತ್ತೆ.
- ಹಾಸನ ಜಿಲ್ಲೆಯ ಹೊಸಕೊಪ್ಪಲು ಗ್ರಾಮದ ಪ್ರೀತಿ ಮೃತ ಮಹಿಳೆ.

### ಲೈಂಗಿಕ ವಿಚಾರಕ್ಕೆ ಗಲಾಟೆ

**ಮಂಡ್ಯದಲ್ಲಿ ಆಘಾತಕಾರಿ ಘಟನೆ ನಡೆದಿದೆ. ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾದ ಪ್ರಿಯಕರನಿಂದ ಹಾಸನದ ಗೃಹಿಣಿ ಕೊಲೆಯಾಗಿದ್ದಾರೆ. ಕೇವಲ ಒಂದು ವಾರದ ಪರಿಚಯದಲ್ಲಿಯೇ ಈ ದುರಂತ ಸಂಭವಿಸಿದೆ. ಆರೋಪಿ ಪುನೀತ್, ಪ್ರೀತಿ ಎಂಬ ಮಹಿಳೆಯನ್ನು ಕೊಂದು ಆಕೆಯ ಶವವನ್ನು ಜಮೀನಿನಲ್ಲಿ ಹೂತು ಹಾಕಿದ್ದಾನೆ. ಪೊಲೀಸರು ಮೊಬೈಲ್ ನೆಟ್‌ವರ್ಕ್ ಆಧರಿಸಿ ಆರೋಪಿಯನ್ನು ಬಂಧಿಸಿದ್ದು, ವಿಚಾರಣೆ ವೇಳೆ ಸತ್ಯಾಂಶ ಹೊರಬಂದಿದೆ. ಲೈಂಗಿಕ ವಿಚಾರಕ್ಕೆ ನಡೆದ ಗಲಾಟೆಯೇ ಕೊಲೆಗೆ ಕಾರಣವೆಂದು ತಿಳಿದುಬಂದಿದೆ.**

# ರೈತನ ಬದುಕು ಹಸುನಾಗಿಸಿದ ಹೈನುಗಾರಿಕೆ

• ಉದಯವಾಹಿನಿ, ಬಂಗಾರಪೇಟೆ

ಕೃಷಿಯಲ್ಲಿ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂಬ ಭಾವನೆ ಬಹುತೇಕರಲ್ಲಿದೆ. ಆದರೆ, ತಾಲ್ಲೂಕಿನ ತೊಪ್ಪನಹಳ್ಳಿ ಗ್ರಾಮದ ರೈತ ರಾಮಚಂದ್ರಪ್ಪ ಅವರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ವಾರ್ಷಿಕ 15 ಲಕ್ಷ ಆದಾಯ ಗಳಿಸುತ್ತಿದ್ದಾರೆ.

ರಾಮಚಂದ್ರಪ್ಪ ಐದು ವರ್ಷಗಳಿಂದ ಹೈನುಗಾರಿಕೆಯಲ್ಲಿ ತೊಡಗಿದ್ದು, ಹಾಲು, ಸಗಣಿ, ಗೊಬ್ಬರವನ್ನು ಮಾರಾಟ ಮಾಡಿ, ಉತ್ತಮ ಆದಾಯ ಗಳಿಸುತ್ತಿದ್ದಾರೆ. ರಾಮಚಂದ್ರಪ್ಪ ಅವರು ಮದಲಿಗೆ ಬೆಂಗಳೂರಿನಲ್ಲಿ ಎಲೆಕ್ಟ್ರಿಕಲ್ ಕೆಲಸ ಮಾಡುತ್ತಿದ್ದರು. ಸ್ವ ಉದ್ಯೋಗ ಆರಂಭಿಸಿ, ಸ್ವಾವಲಂಬಿಯಾಗಿ ಜೀವಿಸಬೇಕು ಎಂಬ ಆಕಾಂಕ್ಷೆಯೊಂದಿಗೆ ಅವರು ಎಲೆಕ್ಟ್ರಿಕ್ ಉದ್ಯೋಗವನ್ನು ತೊರೆದು, ಗ್ರಾಮಕ್ಕೆ ಬಂದರು. ಹಸುಗಳನ್ನು ನೆರಳಿನಲ್ಲಿ ಕಟ್ಟಿಹಾಕಲು ನೈಸರ್ಗಿಕವಾಗಿ ಮತ್ತು ಕಡಿಮೆ ಬಂಡವಾಳದಲ್ಲಿ ತೆಂಗಿನ ಗೆರೆಗಳಲ್ಲಿ ಮೇಲ್ಚಾವಣಿ ನಿರ್ಮಿಸಿದ್ದು, ಹಸುಗಳನ್ನು ಸೆಕೆಯಿಂದ ರಕ್ಷಣೆ ನೀಡಿದೆ. 50x20 ಅಡಿ ಉದ್ದದ ಎರಡು ಕೊಟ್ಟಿಗೆಗಳನ್ನು ನಿರ್ಮಿಸಿದ್ದು, 20 ಹಸುಗಳನ್ನು ಸಾಕುತ್ತಿದ್ದಾರೆ. ಈ ಹಸುಗಳು ಪ್ರತಿನಿತ್ಯ 70–80 ಲೀಟರ್ ಹಾಲು ಕರೆಯುತ್ತವೆ. ಈ ಮೂಲಕ ಶ್ರದ್ಧೆಯಿಂದ ಹೈನುಗಾರಿಕೆ ಮಾಡಿದರೆ, ಉತ್ತಮ ಸಂಪಾದನೆ ಮಾಡಬಹುದು ಎಂಬುದಕ್ಕೆ ಇವರು ಮಾದರಿಯಾಗಿದ್ದಾರೆ. ಎಚ್‌ಎಫ್, ಜೆರ್ಸಿ, ಆಲ್ ಬ್ಲಾಕ್ ಹಸುಗಳನ್ನು ಸಾಕಣೆ ಮಾಡಲಾಗುತ್ತಿದೆ. ಎಚ್‌ಎಫ್ ತಳಿಯಲ್ಲಿ ಹೆಚ್ಚು ಹಾಲು, ಜೆರ್ಸಿಯಲ್ಲಿ ಕೊಬ್ಬಿನಾಂಶ, ಆಲ್ ಬ್ಲಾಕ್ ತಳಿಯಲ್ಲಿ ಈ ಎರಡೂ ಅಂಶ ಇರಲಿದೆ. ಹಸುಗಳ ಮೇವಿಗಾಗಿ ಮೂರು ಎಕರೆ ಜಮೀನು ಗುತ್ತಿಗೆ ಪಡೆದಿದ್ದು, ಎರಡು ಎಕರೆಯಲ್ಲಿ ಹಸುಗಳಿಗೆ ಅಗತ್ಯವಿರುವ ಹುಲ್ಲು ಬೆಳೆಯುತ್ತಿದ್ದಾರೆ. ಮತ್ತೊಂದು ಎಕರೆಯಲ್ಲಿ ಮುಸುಕಿನ ಜೋಳ ಬೆಳೆದಿದ್ದಾರೆ.

ಐದು ವರ್ಷಗಳಿಂದ ಹೈನುಗಾರಿಕೆಯಲ್ಲಿ ತೊಡಗಿರುವ ಅವರು, ಮೊದಲಿಗೆ ಎರಡು ಹಸುವಿನಿಂದ ಇದೀಗ 10 ಕರುಗಳು ಸೇರಿದಂತೆ ಒಟ್ಟಾರೆ 30 ಹಸುಗಳಿವೆ. ಜತೆಗೆ, ಇದೀಗ ಇವರು ನಾಲ್ಕು ಮಂದಿಗೆ ಉದ್ಯೋಗವನ್ನೂ ನೀಡಿದ್ದಾರೆ. ತಿಂಗಳಿಗೆ ಒಂದು ಲಕ್ಷದವರೆಗೆ ಆದಾಯ ಗಳಿಸುವ ಮೂಲಕ ಇತರ ರೈತರಿಗೆ ಮಾದರಿಯಾಗಿದ್ದಾರೆ. ಇದರ ಜೊತೆಗೆ ಗೊಬ್ಬರದ ಗೊಂಡಿಗಳನ್ನು ನಿರ್ಮಾಣ ಮಾಡಿದ್ದು, ಮತ್ತೆ ಅದೆ ಗೊಬ್ಬರವನ್ನು ಬಳಸುವ ಮೂಲಕ ಸಾವಯವ ಕೃಷಿಯನ್ನು ಮಾಡುತ್ತಿದ್ದಾರೆ, ಗೊಬ್ಬರವನ್ನು ಮಾರಾಟ ಮಾಡಿ ಇದರಿಂದಲೂ ಆದಾಯವನ್ನು ಗಳಿಸುತ್ತಿದ್ದಾರೆ.



# ಆರಿದ್ರಾ, ಗಾಳಿಯ ಅಬ್ಬರಕ್ಕೆ ನಲುಗಿದ ಜನಜೀವನ

• ಉದಯವಾಹಿನಿ, ಮಡಿಕೇರಿ

ಕೊಡಗು ಜಿಲ್ಲೆಯಲ್ಲಿ ಮಂಗಳವಾರ ಮಳೆ ತುಸು ತಗ್ಗಿದ್ದರೂ ಗಾಳಿಯ ಆರ್ಭಟ ಮಾತ್ರ ಕಡಿಮೆಯಾಗಿಲ್ಲ. ಭಾರಿ ವೇಗದಲ್ಲಿ ಬೀಸುತ್ತಿರುವ ಗಾಳಿಗೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಮಡಿಕೇರಿ ನಗರದಲ್ಲಿ ಇನ್ನೂ ಮಳೆ ನಿಂತಿಲ್ಲ. ಒಂದಷ್ಟು ಹೊತ್ತಿಗೆ ಒಮ್ಮೆ ಬಿರುಸಾಗಿಯೇ ಮಳೆ ಸುರಿಯುತ್ತಿದೆ. ಈ ವೇಳೆ ಬೀಸುವ ಗಾಳಿಯಲ್ಲಿ ಕೊಡೆ ಹಿಡಿದು ನಡೆಯುವುದೂ ಕಷ್ಟಕರವಾಗಿ ಪರಿಣಮಿಸಿದೆ.

ಕೈಗಳಿಂದ ಕೊಡೆಗಳು ಹಾರಿ ಹೋದರೆ, ಮತ್ತೆ ಕೆಲವು ಬಾರಿ ಕೊಡೆಗಳು ತಿರುಗಿ ಹೋಗುತ್ತಿವೆ. ಜನಜೀವನ ಹಾಗೂ ಜನಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ವಿಪರೀತವಾದ ಶೀತ ಗಾಳಿ ಬೀಸುತ್ತಿರುವುದರಿಂದ ಕನಿಷ್ಠ ಉಷ್ಣಾಂಶ ಮಾತ್ರವಲ್ಲ ಗರಿಷ್ಠ ಉಷ್ಣಾಂಶದಲ್ಲೂ ಗಮನೀಯವಾದ ಇಳಿಕೆ ಕಂಡು ಬಂದಿದೆ. 17 ಡಿಗ್ರಿ ಸೆಲ್ಸಿಯಸ್‌ಗೂ ಕಡಿಮೆ ಉಷ್ಣಾಂಶ ದಾಖಲಾಗಿತ್ತು. ಇದರಿಂದ ಜನರು ಚಳಿಯಿಂದ ನಡುಗುವಂತಾಗಿದೆ. ಶನಿವಾರಸಂತೆ ಸಮೀಪದ ಕೊಡ್ಲಿಪೇಟೆ–ಸೋಮವಾರವಾರಪೇಟೆ ರಸ್ತೆಗೆ ಮರವೊಂದು ಭಾರಿ ಗಾಳಿಗೆ ಉರುಳಿ ಬಿದ್ದು ಸಂಚಾರ ಅಸ್ತವ್ಯಸ್ತಗೊಂಡಿತ್ತು. ನಾಪೋಕ್ಲು ಹೋಬಳಿ ಭಾಗದಲ್ಲೂ ಹಲವು ಮನೆಗಳು ಕುಸಿದಿವೆ.

### ಎಲ್ಲೋ ಅಲರ್ಟ್ ಘೋಷಣೆ

**ಮಳೆ ಮುಂದುವರಿಯಲಿದೆ ಎಂದು ಹೇಳಿರುವ ಭಾರತೀಯ ಹವಾಮಾನ ಇಲಾಖೆ ಕೊಡಗು ಜಿಲ್ಲೆಗೆ ಜೂನ್ 25ರಂದು ಎಲ್ಲೋ ಅಲರ್ಟ್ ನೀಡಿದೆ. ಇದರಿಂದ ಬಿಸಿಲಿನ ವಾತಾವರಣ ಬರುವ ಸಾಧ್ಯತೆ ತೀರಾ ಕಡಿಮೆ ಇದೆ.**


ಉದಯವಾಹಿನಿ ಚಿತ್ರ

# ಇ-ಖಾತೆ ನಿಯಮ ಸರಳೀಕರಣಕ್ಕೆ ಚಿಂತನೆ

• ಉದಯವಾಹಿನಿ, ಕೆ.ಆರ್.ಪೇಟೆ

ರಾಜ್ಯ ಸರ್ಕಾರ ಸಾರ್ವಜನಿಕರ ಹಿತದೃಷ್ಟಿಯಿಂದ ಇ-ಖಾತೆ, ಇ- ಸ್ವತ್ತು, ಬಿ- ಸ್ವತು ಗಳ ನಿಯಮಾವಳಿಗಳನ್ನು ಸರಳೀಕರಣಗೊಳಿಸಲು ಚಿಂತನೆ ನಡೆಸಿದೆ. ಶೀಘ್ರದಲ್ಲಿ ಸಾರ್ವಜನಿಕರ ಸಮಸ್ಯೆಯನ್ನು ಪರಿಹರಿಸಲು ಹೊಸ ನಿಯಮಾವಳಿಗಳನ್ನು ಜಾರಿಗೆ ತರಲಾಗುವುದು ಎಂದು ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದಲ್ಲಿ ಮಂಗಳವಾರ ಆಯೋಜಿಸಿದ್ದ ಜನಸ್ಪಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿಮಾತನಾಡಿದರು. ಸರ್ಕಾರ ರೂಪಿಸಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಪಕ್ಷತೀತ, ಯಾವುದೇ ಜಾತಿಗೆ ಸೀಮಿತಗೊಳಿಸದೆ ಎಲ್ಲರಿಗೂ ನೀಡಲಾಗುತ್ತಿದೆ ಎಂದರು.

ಎರಡು ವರ್ಷಗಳಲ್ಲಿ 20 ಸಾವಿರಕ್ಕೂ ಹೆಚ್ಚಿನ ಕಂದಾಯ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಅಭಿವೃದ್ಧಿ ಕೆಲಸಗಳನ್ನು ಜನಪ್ರತಿನಿಧಿಗಳು ನಿರಂತರವಾಗಿ ಮಾಡಬೇಕು. ಜಿಲ್ಲೆಯಲ್ಲಿ ರೈತರ ಹಿತದೃಷ್ಟಿಯಿಂದ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಹಾಗೂ ಹೊಸ ಕೃಷಿ ವಿಶ್ವವಿದ್ಯಾನಿಲಯವನ್ನು ಸಹ ಪ್ರಾರಂಭಿಸಲಾಗುತ್ತಿದೆ ಎಂದರು. ಕಳೆದ ಮೂರು ತಿಂಗಳಲ್ಲಿ ಕೆ.ಆರ್ ಪೇಟೆಯಲ್ಲಿ 219 ಪೋಡಿಯನ್ನು ದುರಸ್ತಿ ಮಾಡಲಾಗಿದೆ, ಜಿಲ್ಲೆಯಲ್ಲಿ ಒಟ್ಟು 8000 ಪೌತಿ ಖಾತೆ ಮಾಡಿಕೊಡಲಾಗಿದೆ ಎಂದು ತಿಳಿಸಿದರು. ಎಸ್.ಎಸ್.ಎಲ್.ಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ 3 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ಫಲಾನುಭವಿಗಳಿಗೆ, ಕೃಷಿ ಯಂತ್ರೀಕರಣ ಯೋಜನೆಯಡಿ ಸಹಾಯಧನ ವಿತರಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸುಕನ್ಯಾ ಸಮೃದ್ಧಿ ಯೋಜನೆಯ ಫಲಾನುಭವಿಗಳಿಗೆ ಪಾಸ್ ಪುಸ್ತಕ ವಿತರಿಸಲಾಯಿತು. ಕಂದಾಯ ಇಲಾಖೆ ವತಿಯಿಂದ ಫಲಾನುಭವಿಗಳಿಗೆ ಪೌತಿ ಖಾತೆ ಪತ್ರ, ದರಖಾಸ್ತು ಪತ್ರ ವಿತರಿಸಲಾಯಿತು.

# ವಿದ್ಯುತ್ ಸಮಸ್ಯೆ: ಗ್ರಾಮೀಣ ಜನರ ಪರದಾಟ

• ಉದಯವಾಹಿನಿ, ನಾಪೋಕ್ಲು

ಮಳೆ–ಗಾಳಿಯ ಬಿರುಸು ಹೆಚ್ಚಿದಂತೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಮರೀಚಿಕೆಯಾಗಿದೆ. ಬಲ್ಲ ಮಾವಟಿ, ಪೇರೂರು, ಎಮ್ಮೆಮಾಡು ಸೇರಿದಂತೆ ಹೋಬಳಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಬಹುತೇಕ ದಿನಗಳಲ್ಲಿ ವಿದ್ಯುತ್ ಇಲ್ಲದೇ ಗ್ರಾಮಸ್ಥರು ಸಮಸ್ಯೆ ಎದುರಿಸುತ್ತಿದ್ದಾರೆ. ಅಲ್ಲದೆ, ನಿರ್ವಹಣೆ ನೆಪವೊಡ್ಡಿ ವಿದ್ಯುತ್ ಕಡಿತಗೊಳಿಸುತ್ತಿರುವ ಬಗ್ಗೆಯೂ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಳೆಗಾಲ ಆರಂಭವಾಗುತ್ತಿದಂತೆ ವಿದ್ಯುತ್ ಇಲ್ಲದೇ ಕತ್ತಲು ಆವರಿಸುತ್ತಿದೆ. ಕೆಲವು ಭಾಗಗಳಲ್ಲಿ ದಿನದ ಕೆಲವು ಅವಧಿ ಮಾತ್ರ ವಿದ್ಯುತ್ ಇದ್ದರೆ, ಬಹುತೇಕ ಅವಧಿಯಲ್ಲಿ ಕಣ್ಣುಮುಚ್ಚಾಲೆ ಆಟ ಸಾಮಾನ್ಯವಾಗಿದೆ. ಪ್ರಸಕ್ತ ವರ್ಷ ಮೇತಿಂಗಳಿನಲ್ಲಿಯೇ ಮಳೆಯ ಅಬ್ಬರದಿಂದಾಗಿ ವಿದ್ಯುತ್ ಮರೀಚಿಕೆಯಾಗಿದೆ.


ಉದಯವಾಹಿನಿ ಚಿತ್ರ

ಸೆಸ್ಕ್ ಇಲಾಖೆಯ ಬೆರಳೆಣಿಕೆಯ ಸಿಬ್ಬಂದಿ ಸತತ ಶ್ರಮವಹಿಸಿದರೂ, ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್ ಪೂರೈಸಲು ಸಾಧ್ಯವಾಗುತ್ತಿಲ್ಲ. ಅಲ್ಲಲ್ಲಿ ಬುಡಕುಸಿದು, ರೆಂಬೆ ಮುರಿದು ವಿದ್ಯುತ್ ತಂತಿಗಳ ಮೇಲೆ ಬೀಳುತ್ತಿವೆ. ಇದರಿಂದಾಗಿ ವಿದ್ಯುತ್ ಸಮಸ್ಯೆ ತಲೆದೋರಿದ್ದು, ಪ್ರತಿವರ್ಷದಂತೆ ಪರಿಹಾರ ಸಿಗದೇ ಗ್ರಾಹಕರು ಬಳಲುವಂತಾಗಿದೆ. ಹದಿನೈದು ದಿನದಿಂದ ಬಲ್ಲಮಾವಟಿ ವ್ಯಾಪ್ತಿಯಲ್ಲಿ ವಿದ್ಯುತ್ ಇಲ್ಲದೆ ಸಾರ್ವಜನಿಕರು ಕತ್ತಲೆಯಲ್ಲಿ ಕಳೆಯುತ್ತಿದ್ದಾರೆ. ನಾಪೋಕ್ಲು ಸೆಸ್ಕ್ ಕಚೇರಿಗೆ ಕರೆ ಮಾಡಿದರೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಹಳ್ಳಿಗಳಲ್ಲಿ ವಯಸ್ಸಾಗಿ ಅನಾರೋಗ್ಯದಿಂದ ಬಳಲುವವರೂ ಇದ್ದಾರೆ. ಪೇರೂರು, ಬಲ್ಲಮಾವಟಿ, ನೆಲಜಿಯಂತ ಗುಡ್ಡಗಾಡು ಪ್ರದೇಶದಲ್ಲಿ ಒಂದೆಡೆ ಕಾಡಾನೆಗಳ ಹಾವಳಿ. ಜನರು ಹೆದರಿ ಹಗಲು ಮನೆಯಿಂದ ಹೊರಬರುವುದು ಕಷ್ಟ. ರಾತ್ರಿಯೂ ಕತ್ತಲಲ್ಲಿ ದಿನದೂಡುವ ಅನಿವಾರ್ಯ. ಸಂಬಂಧಪಟ್ಟ ಇಲಾಖಾಧಿಕಾರಿಗಳು ಗಮನಹರಿಸಬೇಕು ಎಂದು ಬಲ್ಲಮಾವಟಿಯ ಮೂವೇರ ರೇಖಾ ಪ್ರಕಾಶ್ ಒತ್ತಾಯಿಸಿದ್ದಾರೆ.

**ನಾಪೋಕ್ಲು ವಿಭಾಗದಲ್ಲಿ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಸಣ್ಣ ಮಳೆಗೆ ವಿದ್ಯುತ್ ಕಡಿತಗೊಂಡು ಜನರು ವಿದ್ಯುತ್ ಸಮಸ್ಯೆ ಎದುರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂಬುದು ನಾಗರಿಕರ ಆರೋಪ.**

# ಕೆಆರ್‌ಎಸ್ ಡ್ಯಾಂ ಪ್ರವಾಹ ಎದುರಿಸಲು ಮುನ್ನೆಚ್ಚರಿಕೆ

## ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಾಧ್ಯತೆ | ಮಂಡ್ಯದಲ್ಲಿದೆ 67 ನೆರೆ ಸೂಕ್ಷ್ಮ ಗ್ರಾಮಗಳು

• ಉದಯವಾಹಿನಿ, ಮಂಡ್ಯ

ಜಿಲ್ಲೆಯಲ್ಲಿ ಮಳೆಯಾರ್ಭಟ ಮುಂದುವರಿದಿದೆ. ಮತ್ತೊಂದೆಡೆ ಕೆಆರ್‌ಎಸ್ ಜಲಾಶಯವೂ ಭರ್ತಿಯತ್ತ ತಲುಪಿದೆ. ಹೀಗಾಗಿ ಮಳೆ ಮತ್ತು ನೆರೆ ಪರಿಸ್ಥಿತಿ ಎದುರಿಸಲು ಸಜ್ಜಾಗುವಂತೆ ನಾನಾ ಇಲಾಖೆಗಳ ಅಧಿಕಾರಿಗಳಿಗೆ ಜಿಲ್ಲಾಡಳಿತ ಸೂಚನೆ ನೀಡಿದೆ. ಜಿಲ್ಲೆಯಲ್ಲಿ ಈಗಾಗಲೇ ಮುಂಗಾರು ಹಂಗಾಮು ಪ್ರಾರಂಭವಾಗಿದ್ದು, ಹವಾಮಾನ ಇಲಾಖೆಯ ವರದಿಯ ಪ್ರಕಾರ ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗುತ್ತಿದೆ. ಹೀಗಾಗಿ ಅಧಿಕಾರಿಗಳು ಯಾವುದೇ ಹಾನಿಯಾಗದಂತೆ ಮುಂಜಾಗ್ರತಾ ಕ್ರಮ ಮತ್ತು ಯೋಜನೆಗಳನ್ನು ರೂಪಿಸಿಕೊಳ್ಳಬೇಕು, ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ನಿರ್ದೇಶನ ನೀಡಿದ್ದಾರೆ.

ನಾನಾ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಜಿಲ್ಲಾಮಟ್ಟದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಮಿತಿ ಸಭೆ ನಡೆಸಿರುವ ಜಿಲ್ಲಾಧಿಕಾರಿ ಅವರು, ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿಯಿಂದ ಆಗಬಹುದಾದ ಹಾನಿ ಹಾಗೂ ಕೈಗೊಳ್ಳಬಹುದಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಗಂಭೀರ ಸಮಾಲೋಚನೆ ನಡೆಸಿ ಸಲಹೆ–ಸೂಚನೆ ನೀಡಿದ್ದಾರೆ. ಅಗ್ನಿಶಾಮಕ, ಸೆಸ್ಕ್, ಅರಣ್ಯ, ತಹಸೀಲ್ದಾರ್, ನಗರ ಸ್ಥಳೀಯ ಸಂಸ್ಥೆಗಳು 24X7 ಕಾರ್ಯನಿರ್ವಹಿಸುವ ಕಂಟ್ರೋಲ್ ರೂಂ ಸ್ಥಾಪಿಸಬೇಕು, ಸಾರ್ವಜನಿಕರು ಸಂಪರ್ಕಿಸಬೇಕಿರುವ ದೂರವಾಣಿ ಸಂಖ್ಯೆಯ ಮಾಹಿತಿ ನೀಡಬೇಕು, ಪರಿಕರಗಳನ್ನು ಸಿದ್ಧಪಡಿಸಿಕೊಳ್ಳಿ. ಅಗ್ನಿ ಶಾಮಕ ಇಲಾಖೆಗಳು ಅತಿವೃಷ್ಟಿ ಸಂದರ್ಭದಲ್ಲಿ ಬೇಕಿರುವ ಬೋಟ್, ಲೈಫ್ ಜಾಕೆಟ್ ಸೇರಿದಂತೆ ಇನ್ನಿತರೆ ಪರಿಕರಗಳು ಸುಸ್ಥಿತಿಯಲ್ಲಿರುವ ಬಗ್ಗೆ


ಉದಯವಾಹಿನಿ ಚಿತ್ರ

ಪರಿಶೀಲಿಸಿಕೊಳ್ಳಿ. ಸ್ಥಳೀಯವಾಗಿ ನುರಿತ ಈಜುಗಾರರ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ.

ಜಿಲ್ಲೆಯಲ್ಲಿ 67 ಗ್ರಾಮಗಳನ್ನು ನೆರೆಗೆ ಸಿಲುಕಬಹುದಾದ ಗ್ರಾಮಗಳು ಎಂದು ಈಗಾಗಲೇ ಗುರುತಿಸಲಾಗಿದೆ. ಈ ಗ್ರಾಮಗಳಿಗೆ ಅಧಿಕಾರಿಗಳು ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಬೇಕು. ತಹಶೀಲ್ದಾರ್‌ಗಳು ಗ್ರಾ.ಪಂ.ಮಟ್ಟದಲ್ಲಿ ಸಭೆ ನಡೆಸಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಅವಶ್ಯಕವಾದಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಬೇಕಿದ್ದು, ಬೇಕಿರುವ ಮೂಲ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸಿದ್ಧತೆ ಮಾಡಿಕೊಳ್ಳಿ ಎಂದು ಸೂಚಿಸಲಾಗಿದೆ.

**ಪ್ರವಾಹದ ಮುನ್ನೆಚ್ಚರಿಕೆ:** ಕೆಆರ್‌ಎಸ್ ನದಿ ಪಾತ್ರದ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಕಾವೇರಿ ನೀರಾವರಿ ನಿಗಮ ಪ್ರವಾಹದ ಮುನ್ನೆಚ್ಚರಿಕೆ ನೀಡಿದೆ. ಕೆಆರ್‌ಎಸ್ ಜಲಾಶಯ ಭರ್ತಿಯಂಚು ತಲುಪಿರುವುದರಿಂದ ಹೊರ ಹರಿವಿನ ಪ್ರಮಾಣವನ್ನು ಯಾವುದೇ ಸಂದರ್ಭದಲ್ಲೂ ಹೆಚ್ಚಿಸಬಹುದು. ಹೀಗಾಗಿ ಕಾವೇರಿ ನದಿ ಪಾತ್ರದಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆಯಿದೆ. ಈ ಬಗ್ಗೆ ಎಚ್ಚರ ವಹಿಸುವಂತೆ ಸಲಹೆ ನೀಡಿದೆ.

### ಡಿಸಿ ಸೂಚನೆಗಳಿವು

- ದುರ್ಬಲ ಮರ, ಕೊಂಬೆಗಳ ತೆರವು
- ಸೆಸ್ಕ್ ಅಧಿಕಾರಿಗಳು, ಸಿಬ್ಬಂದಿಯೊಂದಿಗೆ ಅರಣ್ಯ ಇಲಾಖೆ ಸಮನ್ವಯದೊಂದಿಗೆ ಕೆಲಸ
- ಆರೋಗ್ಯ ಇಲಾಖೆ ಆರೋಗ್ಯ ಸಮಿತಿ ಚುರುಕು
- ಅಧಿಕಾರಿಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿರಬೇಕು
- ಹಾನಿಯಾದಲ್ಲಿ ತಕ್ಷಣ ಜಿಲ್ಲಾಡಳಿತಕ್ಕೆ ವರದಿ
- ಅಗ್ನಿಶಾಮಕ ಇಲಾಖೆಯಿಂದ ಕಾರ್ಯಾಗಾರ ಆಯೋಜನೆ

> ಜಿಲ್ಲೆಯಲ್ಲಿ ಮಳೆಯಿಂದ ಮತ್ತು ಕಾವೇರಿ ನದಿ ಪಾತ್ರದಲ್ಲಿ ನೆರೆ ಪರಿಸ್ಥಿತಿ ಎದುರಿಸಲು ಜಿಲ್ಲಾಡಳಿತ ಸಜ್ಜುಗೊಂಡಿದೆ. ಎಸ್‌ಡಿಆರ್‌ಎಫ್ ಅನುದಾನದಡಿ ಈಗಾಗಲೇ ತಹಶೀಲ್ದಾರ್ ಬಳಿ ಎಲ್ಲಾ ತಾಲ್ಲೂಕು ಸೇರಿ ಒಟ್ಟು 2 ಕೋಟಿ ರೂ. ಅನುದಾನ ಇರುತ್ತದೆ. ಹೆಚ್ಚುವರಿ ಬೇಕಿದ್ದಲ್ಲಿ ಬಿಡುಗಡೆ ಮಾಡಲಾಗುವುದು
> –ಡಾ.ಕುಮಾರ, ಜಿಲ್ಲಾಧಿಕಾರಿ, ಮಂಡ್ಯ

> ತುರ್ತು ಸಂದರ್ಭದಲ್ಲಿ ಕೆಲಸ ನಿರ್ವಹಿಸಲು ಇಲಾಖೆಗಳ ನಡುವೆ ಸಮನ್ವಯ ಅತಿ ಮುಖ್ಯ. ಈ ನಿಟ್ಟಿನಲ್ಲಿಕ್ರ ಮ ವಹಿಸಲಾಗಿದೆ. ಕೆಆರ್ ಎಸ್ ಮತ್ತು ಕಾವೇರಿ ನದಿ ಪಾತ್ರದ ಪ್ರಮುಖ ಸ್ಥಳಗಳಲ್ಲಿ ಪೊಲೀಸರನ್ನು ನಿಯೋಜಿಸಿ ಬಂದೋಬಸ್ತ್ ಹಾಕಲಾಗುವುದು. ಮುತ್ತತ್ತಿ, ಬಲಮುರಿ, ಎಡಮುರಿ ಬಳಿ ಪ್ರವಾಸಿಗರು ನೀರಿಗಿಳಿಯಬಾರದು
> – ಮಲ್ಲಿಕಾರ್ಜುನ ಬಾಲದಂಡಿ, ಎಸ್ಪಿ, ಮಂಡ್ಯ

## ಮಿನಿ ನ್ಯೂಸ್

### ವಿದ್ಯುತ್ ಸಮಸ್ಯೆ ಸರಿಪಡಿಸಿ

• ಉದಯವಹಿನಿ, ಕೋಲಾರ

ಬೇತಮಂಗಲ ಮಾರ್ಗದ ಎಫ್–01, ಎಫ್–7 ವಿದ್ಯುತ್ ಸಂಪರ್ಕದಲ್ಲಿ ಆಗುತ್ತಿರುವ ಸಮಸ್ಯೆಗಳಿಂದ ರೈತರಿಗೆ, ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗುತ್ತಿದೆ ಎಂದು ನಮ್ಮ ಕೋಲಾರ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ ಕೋಟಿಗಾನಹಳ್ಳಿ ಗಣೇಶ್‌ಗೌಡ ಆರೋಪಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು, ಬೇತಮಂಗಲ ಮಾರ್ಗದ ಚಾಮರ ಹಳ್ಳಿ, ಹರಟಿ, ಕೋಟಿಗಾನಹಳ್ಳಿ ಸೇರಿದಂತೆ ಇನ್ನಿತರೆ ಗ್ರಾಮಗಳಲ್ಲಿ ಅಸಮರ್ಪಕ ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ರೈತರು ತುಂಬಾ ನಷ್ಟಕ್ಕೆ ತುತ್ತಾಗುತ್ತಿದ್ದಾರೆ. ತಾವು ಬೆಳೆದ ಬೆಳೆಗಳಿಗೆ ಸರಿಯಾಗಿ ನೀರು ಹರಿಸಲಾಗದೆ ಬೆಳೆಗಳು ಒಣಗುತ್ತಿವೆ. ಇನ್ನು ಶಾಲಾ ಕಾಲೇಜು ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗುತ್ತಿದೆ. ಈಗಾಗಲೇ ಹಲವು ಬಾರಿ ಬೆಸ್ಕಾಂ ಇಲಾಖೆಯ ಮುಂದೆ ಪ್ರತಿಭಟನೆಗಳನ್ನು ಮಾಡಿ ಮನವಿಗಳನ್ನು ನೀಡಿದ್ದರೂ ಸಹ ಪ್ರಯೋಜನವಾಗಿಲ್ಲ ಎಂದು ದೂರಿದರು.

ಇನ್ನು ಇಲಾಖೆಯ ಅಧಿಕಾರಿಗಳು ರೈತರ ವ್ಯವಸಾಯದ ಜಮೀನುಗಳಲ್ಲಿ ಯಾವುದೇ ಮುನ್ಸೂಚನೆ ನೀಡದೆ ಅವರಿಗೆ ಇಷ್ಟ ಬಂದ ಕಡೆ ಎಲ್ಲಂದರಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿ ತೊಂದರೆ ಮಾಡುತ್ತಿದ್ದಾರೆ. ತೊಂದರೆಗೊಳಗಾದ ರೈತರುಗೆ ನಷ್ಟ ಪರಿಹಾರ ಕಲ್ಪಿಸಿಕೊಡಬೇಕು. ಇನ್ನಾದರೂ ಎಚ್ಚೆತ್ತುಕೊಂಡು ಸಮರ್ಪಕ ವಿದ್ಯುತ್ ಸರಬರಾಜಿಗೆ ಮುಂದಾಗಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

### ರಸ್ತೆಯಲ್ಲಿ ಮಹಿಳೆಗೆ ಲೈಂಗಿಕ ಕಿರುಕುಳ ಫಿಲೇಚರ್ ಮಾಲೀಕನ ಬಂಧನ

• ಉದಯವಾಹಿನಿ, ರಾಮನಗರ

ಕೂಲಿ ಹಣ ಕೇಳಲು ಮಗನೊಂದಿಗೆ ಫಿಲೇಚರ್ ಫ್ಯಾಕ್ಟರಿಗೆ ಬಂದಿದ್ದ ಮಹಿಳೆ ಮೇಲೆ ಹಲ್ಲೆನಡೆಸಿ, ರಸ್ತೆಯಲ್ಲಿ ಸೀರೆ ಹಿಡಿದು ಎಳೆದಾಡಿ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ, ಫಿಲೇಚರ್ ಫ್ಯಾಕ್ಟರಿ ಮಾಲೀಕ ನಾಸೀರ್ ಎಂಬಾತನನ್ನು ಐಜೂರು ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ಒಂದು ತಿಂಗಳಿಂದ ಮಹಿಳೆ ಫ್ಯಾಕ್ಟರಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಇತ್ತೀಚೆಗೆ ನಾಸೀರ್ ಮಹಿಳೆಗೆ ಕೆಟ್ಟದಾಗಿ ಕೈ ಸನ್ನೆ ಮಾಡುತ್ತಿದ್ದ. ಅದಕ್ಕೆ ಪ್ರತಿರೋಧ ತೋರಿದಾಗ ಮೈ ಮುಟ್ಟಿ ಅಸಭ್ಯವಾಗಿ ವರ್ತಿಸಲು ಮುಂದಾಗಿದ್ದ. ಇದರಿಂದ ಬೇಸರಗೊಂಡ ಮಹಿಳೆ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದ್ದರು ಎಂದು ಪೊಲೀಸರು ಹೇಳಿದರು. ಕೂಲಿ ಹಣ ಕೇಳುವುದಕ್ಕಾಗಿ ಮಹಿಳೆ ಸಂಜೆ ಮಗನೊಂದಿಗೆ ಮತ್ತೆ ಫ್ಯಾಕ್ಟರಿಗೆ ಹೋಗಿದ್ದರು. ಈ ವೇಳೆ ಕೆಟ್ಟದಾಗಿ ನಿಂದಿಸಿದ ನಾಸೀರ್, ಕಬ್ಬಿಣದ ರಾಡಿನಿಂದ ಮಹಿಳೆ ಮೇಲೆ ಹಲ್ಲೆ ನಡೆಸಿದ್ದಾನೆ. ಮಹಿಳೆ ಜೋರಾಗಿ ಕೂಗಿಕೊಂಡು ಫ್ಯಾಕ್ಟರಿಯಿಂದ ಹೊರಕ್ಕೆ ಬಂದರೂ ಬಿಡದ ಆರೋಪಿ, ಅಟ್ಟಿಸಿಕೊಂಡು ಬಂದು ಸೀರೆ ಎಳೆದು ದೇಹ ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಪೊಲೀಸರು ತಿಳಿಸಿದರು. ಮಹಿಳೆಯ ಕೂಗಾಟ ಕೇಳಿ ಅಕ್ಕಪಕ್ಕದವರು ಸ್ಥಳದಲ್ಲಿ ಜಮಾಯಿಸುತ್ತಿದ್ದಂತೆ, ಆರೋಪಿ ಫ್ಯಾಕ್ಟರಿಗೆ ಒಳಕ್ಕೆ ಓಡಿ ಹೋಗಿದ್ದ. ನಂತರ ಮಹಿಳೆ ಆಟೊದಲ್ಲಿ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದು, ನಂತರ ಠಾಣೆಗೆ ಬಂದು ದೂರು ಕೊಟ್ಟಿದ್ದರು. ಆ ಮೇರೆಗೆ, ಬೆಳಿಗ್ಗೆ ಆತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

### ಏಕಾಏಕಿ ರಸ್ತೆಗೆ ನುಗ್ಗುವ ನಾಯಿಗಳು: ಸವಾರರಿಗೆ ಸಂಕಷ್ಟ

• ಉದಯವಾಹಿನಿ, ಕೊಡಿಗೇನಹಳ್ಳಿ

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಬೈಕ್–ಕಾರು ಸಂಚರಿಸುವಾಗ ಏಕಾಏಕಿ ನುಗ್ಗಿಬರುವ ನಾಯಿಗಳಿಂದ ಸವಾರರು ಹಾಗೂ ಪ್ರಯಾಣಿಕರು ಸಂಕಷ್ಟ ಎದುರಿಸುವಂತಾಗಿದೆ. ಹೋಬಳಿ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಜನರು ಓಡಾಡುವುದು ಕಷ್ಟವಾಗಿದೆ. ಗಲ್ಲಿ ಗಲ್ಲಿಗಳಲ್ಲಿ ತಿರುಗಾಡುತ್ತಿರುವ ಬೀದಿ ನಾಯಿಗಳು ಏಕಾಏಕಿ ವಾಹನ ಸವಾರರ ಮೇಲೆ ದಾಳಿ ಮಾಡುತ್ತವೆ. ಕೆಲ ನಾಯಿಗಳು ಬೈಕ್, ಕಾರು, ಜನರ ಹಿಂದೆ ಓಡಿ ಬಂದು ಆತಂಕ ಮೂಡಿಸುತ್ತಿವೆ. ಪಟ್ಟಣದ ಮಾಂಸ ಮಾರಾಟ ಮಳಿಗೆ, ಜಯಮಂಗಲಿ ನದಿ ಸೇತುವೆ ಸಮೀಪವಿರುವ ತ್ಯಾಜ್ಯಕ್ಕೆ ನಾಯಿಗಳು ಬೀಡುಬಿಟ್ಟಿರುತ್ತವೆ. ಇದರಿಂದಾಗಿ ಈ ರಸ್ತೆ ಮೂಲಕ ಸಂಚರಿಸುವ ಸವಾರರು, ವಿದ್ಯಾರ್ಥಿಗಳು ಹಾಗೂ ಡೇರಿಗೆ ಬರುವ ಹಾಲು ಉತ್ಪಾದಕರ ಪಾಡು ಹೇಳತೀರದಂತಾಗಿದೆ ಎನ್ನುತ್ತಾರೆ ಬಾಬು. ಅಧಿಕಾರಿಗಳು ಗಮನಹರಿಸಿ ನಾಯಿಗಳ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

### 12 ಗಂಟೆ ಕೆಲಸ: ಕಾರ್ಮಿಕರಿಗೆ ಬೆದರಿಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ತುಮಕೂರು

ಕೆಲಸದ ಅವಧಿ ಹೆಚ್ಚಳ ವಿರೋಧಿಸಿ, 35 ಸಾವಿರ ಸಂಬಳ ನಿಗದಿಗೆ ಆಗ್ರಹಿಸಿ ನಗರದಲ್ಲಿ ಮಂಗಳವಾರ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಕೇಂದ್ರ ಸರ್ಕಾರ ಕಾರ್ಮಿಕ ಸಂಹಿತೆ ಜಾರಿಗೆ ತರಲು ರಾಜ್ಯದ ಮೇಲೆ ಒತ್ತಡ ಹೇರುತ್ತಿದೆ. ಇದು ಸಾಲದೆಂಬಂತೆ ಕೆಲಸದ ಅವಧಿ ದಿನಕ್ಕೆ 12 ಗಂಟೆಗಳ ಕಾಲ ವಿಸ್ತರಿಸಲು ಮುಂದಾಗಿದೆ. ಕಾರ್ಮಿಕರನ್ನು ಬೆದರಿಸಿ 12 ಗಂಟೆಗೆ ಒಪ್ಪಿಗೆ ಪಡೆಯಲಾಗುತ್ತಿದೆ. ಒಪ್ಪಿಗೆ ನೀಡದ ಕಾರ್ಮಿಕರನ್ನು ಕೆಲಸದಿಂದ ತೆಗೆಯುವ ಬೆದರಿಕೆ ಹಾಕಲಾಗುತ್ತಿದೆ ಎಂದು ಸಿಐಟಿಯು ಜಿಲ್ಲಾ ಘಟಕದ ಅಧ್ಯಕ್ಷ ಸೈಯದ್ ಮುಜೀಬ್ ಆರೋಪಿಸಿದರು.

ಸಿಐಟಿಯು ಜಿಲ್ಲಾ ಖಜಾಂಚಿ ಎ.ಲೋಕೇಶ್, ಸರ್ಕಾರದಿಂದ ಅನುಮತಿ ಪಡೆಯದೆ ಕಾರ್ಮಿಕರ ಸಂಖ್ಯೆ ಕಡಿಮೆ ಮಾಡಲು, ಕಾರ್ಖಾನೆ ಮುಚ್ಚಲು ಮಾಲೀಕರಿಗೆ ಅವಕಾಶ ನೀಡುವ ತಿದ್ದುಪಡಿ ಮಸೂದೆ ಸಿದ್ದಪಡಿಸಲಾಗಿದೆ. ಕಾಯಂ ಸ್ವರೂಪದ ಕೆಲಸಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರನ್ನು ನಿಯೋಜಿಸಲು ಮಾಲೀಕರಿಗೆ ಅವಕಾಶ ನೀಡಲಾಗಿದೆ. ಇದು ಕಾರ್ಮಿಕರ ಬದುಕಿಗೆ ಮಾರಕವಾಗಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕಾರ್ಮಿಕ ಅಧಿಕಾರಿ ಕಚೇರಿ ತನಕ ಪ್ರತಿಭಟನಾ ಮೆರವಣಿಗೆ ನಡೆಯಿತು. ಕಾರ್ಮಿಕ ಅಧಿಕಾರಿ ಅಹವಾಲು ಆಲಿಸಬೇಕು, ಮನವಿ ಸ್ವೀಕರಿಸಬೇಕು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ಸುಮಾರು ಎರಡು ಗಂಟೆ ಧರಣಿ ನಡೆಸಿದರು. ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಂತರಾಳದಿಂದ... EDITORIAL

# ತುರ್ತು ಪರಿಸ್ಥಿತಿಯ ನೆನಪುಗಳು ಕಲಿಯಬೇಕಾದ ಪಾಠ ಹಲವು

ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ, 1975ರ ಜೂನ್ 25ರಂದು ತುರ್ತು ಪರಿಸ್ಥಿತಿಯನ್ನು ಹೇರಿದ್ದುದು ದೇಶದ ಪ್ರಜಾತಂತ್ರ ವ್ಯವಸ್ಥೆ ಕಂಡ ಅತ್ಯಂತ ಕರಾಳ ಅಧ್ಯಾಯ. ದೇಶವು ತುರ್ತು ಪರಿಸ್ಥಿತಿಯನ್ನು ಕಂಡು 50 ವರ್ಷಗಳು ಸಂದಿವೆ. ಈ ಸಂದರ್ಭವು ಸರ್ವಾಧಿಕಾರದ ಅಪಾಯಗಳ ಬಗ್ಗೆ ನೆನಪು ಮಾಡಿಕೊಡಬೇಕು. ಯಾವುದೇ ಸಮಾಜ, ಯಾವುದೇ ವ್ಯವಸ್ಥೆ ಇಂತಹ ಸರ್ವಾಧಿಕಾರದ ತೆಕ್ಕೆಗೆ ಜಾರುವ ಅಪಾಯ ಇರುತ್ತದೆ. ಸರ್ವಾಧಿಕಾರವು ಯಾವುದೇ ಸಂದರ್ಭದಲ್ಲಿ, ಬಗೆ ಬಗೆಯ ರೂಪಗಳಲ್ಲಿ ಎದುರಾಗಬಹುದು. ತುರ್ತು ಪರಿಸ್ಥಿತಿ ಜಾರಿಗೆ ಬರುವ ಮೊದಲು, ದೇಶದಲ್ಲಿ ಪ್ರಜಾತಂತ್ರ ವ್ಯವಸ್ಥೆಯು ಬೇರು ಬಿಡುತ್ತಿದೆ ಎಂದು ಭಾವಿಸಲಾಗಿತ್ತು. ವ್ಯಂಗ್ಯವೆಂದರೆ, ತುರ್ತು ಪರಿಸ್ಥಿತಿಯ ಮೂಲಕ ಪ್ರಜಾತಂತ್ರದ ಹೆಸರಿನಲ್ಲೇ ಪ್ರಜಾತಂತ್ರವನ್ನು ಹಾಳುಮಾಡಲಾಯಿತು. ಸ್ಥಿರತೆಯ ಅಗತ್ಯ, ಪ್ರಗತಿ ಮತ್ತು ಆಡಳಿತ, ಆಂತರಿಕ ಹಾಗೂ ಬಾಹ್ಯ ಬೆದರಿಕೆಗಳು ಸರ್ವಾಧಿಕಾರವನ್ನು ಹೇರಲು ಸಿಗುವ ನೆಪಗಳು. ತುರ್ತು ಪರಿಸ್ಥಿತಿ 21 ತಿಂಗಳಿಗೆ ಕೊನೆಗೊಂಡಿತು ಎಂಬುದು ಅದರ ಕುರಿತಾಗಿನ ಒಂದು ಒಳ್ಳೆಯ ಸಂಗತಿ. ತುರ್ತು ಪರಿಸ್ಥಿತಿ ಜಾರಿಗೆ ತಂದಿದ್ದಕ್ಕೆ ನೈತಿಕ ಮತ್ತು ರಾಜಕೀಯ ಹೊಣೆ ಹೊರಬೇಕಿರುವುದು ಕಾಂಗ್ರೆಸ್ ಪಕ್ಷ. ಆ ಸಂದರ್ಭದಲ್ಲಿ ಅತಿರೇಕಗಳು ನಡೆದವು ಎಂಬುದನ್ನು ಕಾಂಗ್ರೆಸ್ ಒಪ್ಪಿಕೊಂಡಿದೆಯಾದರೂ ತುರ್ತು ಪರಿಸ್ಥಿತಿ ಜಾರಿಗೊಳಿಸಿದ್ದನ್ನು ಬೇಷರತ್ತಾಗಿ ಮತ್ತು ಪೂರ್ಣವಾಗಿ ಖಂಡಿಸುವ ಕೆಲಸವನ್ನು ಅದು ಇನ್ನೂ ಮಾಡಿಲ್ಲ. ತುರ್ತು ಪರಿಸ್ಥಿತಿ ಬಗ್ಗೆ ಆಗಾಗ ಕೆಲವು ವಿವರಣೆಗಳನ್ನು ಪಕ್ಷವು ನೀಡಿದೆ. ಅವು ವಾಸ್ತವದಲ್ಲಿ ಮಾರುವೇಷದ ಸಮರ್ಥನೆಗಳು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ತುರ್ತು ಪರಿಸ್ಥಿತಿಯ ಸ್ಮರಣಾರ್ಥವಾಗಿ ವರ್ಷವಿಡೀ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಿದೆ. ಭಾರತದ ಪ್ರಜಾತಂತ್ರದ ಇತಿಹಾಸದಲ್ಲಿನ ಅತ್ಯಂತ ಕರಾಳ ಅವಧಿಯ ಬಗ್ಗೆ ಜನರಿಗೆ ನೆನಪು ಮಾಡಿಕೊಡಲು ಸರ್ಕಾರವು ಕಾರ್ಯಕ್ರಮಗಳ ಪಟ್ಟಿಯೊಂದನ್ನು ಸಿದ್ಧಪಡಿಸಿದೆ. ಆಗಿನ ಸಂದರ್ಭದ ದಾಳಿಗಳ ಬಗ್ಗೆ ಯಾವ ನೆನಪುಗಳೂ ಇಲ್ಲದ ಯುವಜನರಿಗೆ ಅದರ ಬಗ್ಗೆ ಹೇಳಬೇಕಾದ ಅಗತ್ಯ ಇದೆ. ಆದರೆ, ತುರ್ತು ಪರಿಸ್ಥಿತಿಯು ಈಗಲೂ ಗತ ಪದ ಅಲ್ಲ. ನಾಗರಿಕ ಸ್ವಾತಂತ್ರ್ಯಕ್ಕೆ ಈಗಲೂ ಲಗಾಮು ಬೀಳುತ್ತಿದೆ, ಅಭಿವ್ಯಕ್ತಿ ಸ್ವಾತಂತ್ರ್ಯವು ಇಂದಿಗೂ ಬಂಧಮುಕ್ತ ಆಗಿಲ್ಲ, ಮುನ್ನೆಚ್ಚರಿಕೆಯ ಕ್ರಮಕ್ಕಾಗಿ ಬಂಧಿಸುವುದು ಮುಂದುವರಿದಿದೆ, ವಿರೋಧ ಪಕ್ಷಗಳ ನಾಯಕರನ್ನು ಮತ್ತು ನಾಗರಿಕ ಹಕ್ಕುಗಳ ಪರವಾಗಿ ಹೋರಾಟ ನಡೆಸುವವರನ್ನು ಗುರಿಯಾಗಿಸಿಕೊಳ್ಳಲು ಕಾನೂನು ಜಾರಿ ಸಂಸ್ಥೆಗಳು ಹಾಗೂ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ದೇಶದ ಪ್ರಜಾತಾಂತ್ರಿಕ ಸಂಸ್ಥೆಗಳ ಮೇಲೆ ಒತ್ತಡ ಹೇರಲಾಗುತ್ತಿದೆ. ದೇಶದ ಸಂಸತ್ತಿನ ಮಹತ್ವವನ್ನು ಕುಗ್ಗಿಸಲಾಗಿದೆ, ಭಿನ್ನ ಅಭಿಪ್ರಾಯಗಳ ಬಗ್ಗೆ ಸಹಿಷ್ಣುತೆ ಕಾಣುತ್ತಿಲ್ಲ, ನಾಯಕನೊಬ್ಬನನ್ನು ಕೇಂದ್ರೀಕರಿಸಿಕೊಂಡು ವ್ಯಕ್ತಿಪೂಜೆ ನಡೆಯುತ್ತಿದೆ. ಇವೆಲ್ಲವೂ ತುರ್ತು ಪರಿಸ್ಥಿತಿಯ ಗುಣಲಕ್ಷಣಗಳು, ಸರ್ವಾಧಿಕಾರದ ಸೂಚಕಗಳು. 'ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿ ಇದೆ' ಎಂಬ ಮಾತನ್ನು ವಿರೋಧ ಪಕ್ಷಗಳ ಹಲವು ನಾಯಕರು ಹೇಳಿದ್ದಾರೆ. ಆದರೆ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ನಡೆದವುಗಳನ್ನು ಸಮರ್ಥಿಸಲು ಈಗಿನ ಸಂದರ್ಭದಲ್ಲಿ ಆಗುತ್ತಿರುವುದನ್ನು ಬಳಸಿಕೊಳ್ಳುವುದು ಖಂಡಿತ ತಪ್ಪು.



**ಜೀವಿಸುವ ಸ್ವಾತಂತ್ರ್ಯ ಸೇರಿದಂತೆ ಪ್ರಜೆಗಳ ಸಾಂವಿಧಾನಿಕ ಹಕ್ಕುಗಳನ್ನು ಅಮಾನತಿನಲ್ಲಿ ಇರಿಸಿದ್ದು, ವಿರೋಧ ಪಕ್ಷಗಳ ನಾಯಕರನ್ನು ಹಾಗೂ ಸಾಂವಿಧಾನಿಕ ಹಕ್ಕುಗಳ ಪರವಾಗಿ ಹೋರಾಟ ನಡೆಸುವವರನ್ನು ಸಾರಾಸಗಟಾಗಿ ಬಂಧಿಸಿದ್ದು, ಮಾಧ್ಯಮ ಸ್ವಾತಂತ್ರ್ಯವನ್ನು ಹತ್ತಿಕ್ಕಿದ್ದು, ಸರ್ಕಾರವು ಮನಸೋ ಇಚ್ಛೆ ತೀರ್ಮಾನಗಳನ್ನು ಕೈಗೊಂಡಿದ್ದು, ವ್ಯಕ್ತಿಯೊಬ್ಬರ ಸುತ್ತ ಆಡಳಿತ ಮತ್ತು ರಾಜಕೀಯ ಗಿರಕಿ ಹೊಡೆದಿದ್ದು 'ಪ್ರಜಾತಂತ್ರ'ವನ್ನು ನಿರರ್ಥಕವಾಗಿಸಿತು.**

ತುರ್ತು ಪರಿಸ್ಥಿತಿ ಎಂಬುದು ಸರ್ವಾಧಿಕಾರಿ ಮನಃಸ್ಥಿತಿಯ ಸರ್ಕಾರ ಬಳಸಿದ ರಾಜಕೀಯ ಹಾಗೂ ಕಾನೂನು ಅಸ್ತ್ರಮಾತ್ರವೇ ಅಲ್ಲ. ಅದು ಸ್ವಾತಂತ್ರ್ಯಕ್ಕೆ ಮತ್ತು ಸಂವಿಧಾನದ ಅತ್ಯುತ್ತಮ ಮೌಲ್ಯಗಳಿಗೆ ವಿರುದ್ಧವಾಗಿ ವರ್ತಿಸುವ ಅಧಿಕಾರದ ಒಳಗೆ ಕೂತಿರುವ ಮನಃಸ್ಥಿತಿ. ನಮ್ಮ ಸ್ವಾತಂತ್ರ್ಯದ ವಿಚಾರದಲ್ಲಿ ಸರ್ಕಾರಗಳನ್ನು, ರಾಜಕೀಯ ಪಕ್ಷಗಳನ್ನು ನಂಬಲು ಆಗುವುದಿಲ್ಲ ಎಂಬುದು ದೇಶ ಕಂಡ ತುರ್ತು ಪರಿಸ್ಥಿತಿಯ ವರ್ಷಾಚರಣೆಯ ಈ ಸಂದರ್ಭದಲ್ಲಿ ಅಗತ್ಯವಾಗಿ ಮನನ ಮಾಡಿಕೊಳ್ಳಬೇಕಾದ ಪಾಠ. ತಮ್ಮ ಸ್ವಾತಂತ್ರ್ಯವನ್ನು ಜನ ತಾವೇ ರಕ್ಷಿಸಿಕೊಳ್ಳಬೇಕು, ಆ ಸ್ವಾತಂತ್ರ್ಯ ಕಾಪಾಡುವ ಪ್ರಜಾತಾಂತ್ರಿಕ ಸಂಸ್ಥೆಗಳನ್ನು ಜನರೇ ಬಲಪಡಿಸಬೇಕು. ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ಹೊಣೆ ನಮ್ಮದೇ ಆಗಿರುತ್ತದೆ.

# ರಾಮಾಯಣ



## ಗುಹನು ಶ್ರೀ ರಾಮಲಕ್ಷ್ಮಣರ ವೃತ್ತಾಂತವನ್ನು ಭರತನಿಗೆ ಹೇಳಿದ್ದು

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಈತನೊಬ್ಬನೇ ದಶರಥಮಹಾರಾಯನಿಗೆ ಸಮಾನವಾದ ಲಕ್ಷಣವುಳ್ಳವನು. ಈತನು ವನಕ್ಕೆ ಹೋದರೆ ದಶರಥರಾಯನು ಬಹುಕಾಲ ಜೀವದಿಂದಿರಲಾರನೆಂದು ಅಂತಃಪುರದ ಸ್ತ್ರೀಯರೆಲ್ಲರೂ ಗೋಳಿಟ್ಟು ಚೈತನ್ಯಗುಂದಿದರು. ಈಗ ಶ್ರೀರಾಮನು ವನಕ್ಕೆ ಬಂದನು. ಈಗ ಈತನ ಆರಮನೆಯು ರೋದನಧ್ವನಿಯಿಂದ ಪರಿಪೂರ್ಣವಾಗಿರುವುದು. ಕೌಸಲ್ಯಾದೇವಿಯೂ ನನ್ನ ತಾಯಿಯಾದ ಸುಮಿತ್ರಾದೇವಿಯೂ ದಶರಥರಾಯನೂ ಈತನ ಅಗಲಿಕೆಯಿಂದುಂಟಾದ ದುಃಖಾತಿಶಯದಿಂದ ಜೀವಿಸಲಾರರು. ದೈವಾಧೀನದಿಂದ ನನ್ನ ತಾಯಿಯಾದ ಸುಮಿತ್ರಾದೇವಿಯು ತನ್ನ ಕಿರಿಯಮಗನಾದ ಶತ್ರುಘ್ನನು ಇರುವನೆಂದು ಧೈರ್ಯದಿಂದ ಜೀವಿಸಿಕೊಂಡಿರಬಹುದು. ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಯು ಜೀವಿಸಲಾರಳು. ದಶರಥರಾಯನು ತನ್ನ ಮನೋರಥವನ್ನು ಪಡೆಯದೆ ಹೋದದ್ದರಿಂದಲೂ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡದೆ ವನಕ್ಕೆ ಕಳುಹಿಸಿದ್ದರಿಂದಲೂ ಜೀವಿಸಲಾರನು. ಅಲ್ಲಿರುವ ಮಕ್ಕಳು ಸ್ವರ್ಗಸ್ಥನಾದ ತಂದೆಗೆ ಅಗ್ನಿಸಂಸ್ಕಾರವನ್ನು ಮಾಡಿ ಪಿತೃಕಾರ್ಯವನ್ನು ತೀರಿಸುವರು. ಅವರು ಸಮಸ್ತ ರತ್ನಗಳಿಂದ ಸಂಪೂರ್ಣವಾಗಿ ಸಮಸ್ತ ಕಲ್ಯಾಣಮಹೋತ್ಸವಗಳಿಂದ ಒಪ್ಪುವಂಥ ಅಯೋಧ್ಯಾ ಪಟ್ಟಣದಲ್ಲಿ ಸುಖಿತರಾಗಿ ಸಂಚರಿಸುವರು. ನಾವು ಸತ್ಯಸಂಧನೂ ಕುಶಲಿಯೂ ಆದ ಶ್ರೀರಾಮನೊಡನೆ ಹದಿನಾಲ್ಕು ವರ್ಷ ವನವಾಸವನ್ನು ಪೂರೈಸಿಕೊಂಡು ಬಂದು ಅಯೋಧ್ಯಾ ಪಟ್ಟಣವನ್ನು ಪ್ರವೇಶಿಸುವೆವೆ ಎಂದು ಹಂಬಲಿಸುತ್ತ ನುಡಿದನು. ಈ ಪ್ರಕಾರವಾಗಿ ಆ ರಾತ್ರಿಯು ಕಳೆದು ಸೂರ್ಯೋದಯವಾಗಲು ರಾಮಲಕ್ಷ್ಮಣರು ಈ ಭಾಗೀರಥೀತೀರದಲ್ಲಿ ನಾರುಬಟ್ಟೆಯನ್ನುಟ್ಟು ಜಡೆಗಳನ್ನು ಧರಿಸಿಕೊಂಡರು. ಮಹತ್ತಾದ ಆರಣ್ಯದಲ್ಲಿ ಸಂಚರಿಸುವ ಮದ್ದಾನೆಗಳಂತೆ ಬಿಲ್ಲುಬಾಣ ಗಳನ್ನು ಧರಿಸಿಕೊಂಡು ಸೀತಾಸಮೇತರಾಗಿ ಈ ಭಾಗೀರಥಿಯನ್ನು ದಾಟಿ ಮುಂದೆ ತೆರಳಿದರು ಎಂದು ಗುಹನು ಭರತನಿಗೆ ಹೇಳಿದನು.

### ಶ್ರೀರಾಮನು ಅರಣ್ಯದಲ್ಲಿ ಮಲಗಿದ್ದ ಸ್ಥಳವನ್ನು ಭರತನು ನೋಡಿದ್ದು

ಗುಹನ ಮಾತನ್ನು ಕೇಳಿ ಶ್ರೀರಾಮನನ್ನು ನೆನೆದು ಭರತನು ಮನೋವ್ಯಥೆಯಿಂದ ಎದೆಯಲ್ಲಿ ಗಾಯಪಟ್ಟ ಮದ್ದಾನೆಯಂತೆ ದುಃಖಿಸುತ್ತ ಮೂರ್ಛಿತನಾದನು. ಅದನ್ನು ನೋಡಿ ಶತ್ರುಘ್ನನು ವ್ಯಥೆಯಿಂದ ಭರತನನ್ನು ತಬ್ಬಿಕೊಂಡು ಗೋಳಿಟ್ಟು ರೋದನಮಾಡುತ್ತ ಶೋಕದಿಂದ ಸತ್ತ್ವಗುಂದಿದನು. ಆಗ ಶ್ರೀರಾಮ ಲಕ್ಷ್ಮಣ ಭರತ ಶತ್ರುಘ್ನರ ತಾಯಂದಿರಾದ ಕೌಸಲ್ಯಾದೇವಿಯೂ ಕೈಕೇಯಿ ದೇವಿಯೂ ಸುಮಿತ್ರಾದೇವಿಯೂ ಮಿಕ್ಕವರೂ ಮೂರ್ಛಾಗತರಾದ ಭರತಶತ್ರುಘ್ನರನ್ನು ಕಂಡು ರೋದನ ಮಾಡುತ್ತ ಅವರನ್ನು ಸುತ್ತಿಕೊಂಡರು. ಕೌಸಲ್ಮಾ ದೇವಿಯು ಅತ್ಯಂತ ಮನೋವ್ಯಥೆಯುಳ್ಳವಳಾಗಿ ಭರತಶತ್ರುಘ್ನರಿಬ್ಬರನ್ನೂ ತನ್ನ ಕುಮಾರನಾದ ಶ್ರೀರಾಮನನ್ನು ತಬ್ಬಿಕೊಳ್ಳುವಹಾಗೆ ಆಲಿಂಗಿಸಿಕೊಂಡು ಹಿಡಿದೆತ್ತಿ ಭರತನನ್ನು ಕುರಿತು ಭರತ, ಏಕೆ ಮೂರ್ಛಾಗತನಾಗಿ ಬಿದ್ದೆ ? ನಿನ್ನ ಶರೀರದಲ್ಲಿ ಏನಾದರೂ ವ್ಯಾಧಿ ಸಂಭವಿಸಿರುವುದೆ ? ನೀನೇಕೆ ಸತ್ತ್ವಗುಂದಿದೆ ? ಇಕ್ಷ್ವಾಕುವಂಶದ ಜೀವನೋಪಾಯವೆಲ್ಲವೂ ನಿನ್ನ ಅಧೀನವಾಗಿದೆ. ಶ್ರೀರಾಮನು ವನಕ್ಕೆ ಹೋಗಿ ದಶರಥರಾಯನು ಸ್ವರ್ಗಸ್ಥನಾದಮೇಲೂ ನಿನ್ನನ್ನು ನೋಡಿ ನಾವು ಪ್ರಾಣಗಳನ್ನು ಧರಿಸಿಕೊಂಡಿದ್ದೇವೆ. ನಮ್ಮಿಷ್ಟು ಮಂದಿಗೂ ನೀನೇ ರಕ್ಷಕನು.

**ಮುಂದುವರಿಯುವುದು...**

# ಎಸಿ ರೂಮ್‌ನಲ್ಲಿ ಕೂತು ವರ್ಕ್ ಮಾಡುವವರಿಗೆ ಬೇಗನೇ ಮೂಳೆಗಳಿಗೆ ಸಂಬಂಧಿಸಿದ ಸಮಸ್ಯೆ ಬರಬಹುದಂತೆ



ಸಾಮಾನ್ಯವಾಗಿ ಈಗ ಎಲ್ಲಾ ಕಡೆಯಲ್ಲೂ ಕೂಡ ಎಸಿ ಇದ್ದೇ ಇರುತ್ತದೆ! ಕೆಲವರು ಮನೆಯಲ್ಲಿ ಎಸಿ ಹಾಕಿಸಿಕೊಂಡಿದ್ದರೆ, ಇನ್ನೂ ಕೆಲವರು ಆಫೀಸ್‌ಗಳಲ್ಲಿ ದಿನದ ಏಳೆಂಟು ಗಂಟೆಗಳಾದರೂ ಎಸಿ ಕೋಣೆಯಲ್ಲಿ ಕೂತು ಕೆಲಸ ಮಾಡುತ್ತಾರೆ. ಇನ್ನೂ ಕೆಲವರು ಕಾರಿನಲ್ಲಿ ಪ್ರಯಾಣಿಸುತ್ತಿರುವಾಗಲೂ ಕೂಡ, ಎಸಿ ಹಾಕಿಕೊಂಡೆ ಹೋಗುತ್ತಾರೆ. ಆದರೆ ನಿಮಗೆ ಗೊತ್ತಿರಲಿ ಎಸಿಯಲ್ಲಿ ಕುಳಿತುಕೊಳ್ಳುವುದರಿಂದ ಆರೋಗ್ಯದ ಮೇಲೆ ಸಾಕಷ್ಟು ಅನಾರೋಗ್ಯ ಸಮಸ್ಯೆಗಳು ಕಾಡುತ್ತವೆ ಎನ್ನುತ್ತಾರೆ ಆರೋಗ್ಯ ತಜ್ಞರು. ಅದರಲ್ಲೂ ದೀರ್ಘಕಾಲದವರೆಗೆ ಎಸಿಯಲ್ಲಿ ಕುಳಿತುಕೊಳ್ಳುವುದರಿಂದ ಮೂಳೆಗೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆಯಂತೆ.

**ದೇಹದ ಮೂಳೆಗಳು ದುರ್ಬಲಗೊಳ್ಳುತ್ತವೆ:** ಸಾಮಾನ್ಯವಾಗಿ ಬೇಸಿಗೆಯಲ್ಲಿ ಹೆಚ್ಚಿನವರು ಎಸಿಯನ್ನು ಬಳಸುತ್ತಾರೆ ಅಲ್ಲದೆ ಹೆಚ್ಚಿನವರು ಎಸಿ ಕೊಠಡಿಗಳಲ್ಲಿ ದೀರ್ಘಕಾಲ ದವರೆಗೆ ತಮ್ಮ ಕೆಲಸ ಕಾರ್ಯಗಳನ್ನು ಮಾಡುತ್ತಾ ಇರುತ್ತಾರೆ. ಆದರೆ ಅದು ಬೇಸಿಗೆಯಲ್ಲಿ ಅಥವಾ ಮಳೆಗಾಲವೇ ಇರಲಿ, ಎಸಿ ರೂಮ್‌ನಲ್ಲಿ ದೀರ್ಘಕಾಲದವರೆಗೆ ಸಮಯ ಕಳೆಯುವುದರಿಂದ ದೇಹದ ಮೂಳೆಗಳ ಆರೋಗ್ಯಕ್ಕೆ ಒಳ್ಳೆಯ ದಲ್ಲ ಎನ್ನುತ್ತಾರೆ.



ಆಂಧ್ರಪ್ರದೇಶದ ಪ್ರಸಿದ್ಧ ಮೂಳೆ ತಜ್ಞರಾದ ಡಾ. ಶಿವಯ್ಯ ಪೋಟ್ಲಾ ಅವರು. ಡಾ. ಶಿವಯ್ಯ ಅವರ ಪ್ರಕಾರ, ಕಡಿಮೆ ತಾಪಮಾನದಲ್ಲಿ ಎಸಿ ಗಾಳಿ ಬರುವ ಸ್ಥಳಗಳಲ್ಲಿ ದೀರ್ಘಕಾಲ ದವರೆಗೆ ಸಮಯ ಕಳೆಯುವುದರಿಂದ, ದೇಹದ ಮೂಳೆಗಳು ದುರ್ಬಲಗೊಳ್ಳುತ್ತವೆ, ಕೀಲುಗಳಿಗೆ ಸಂಬಂಧಪಟ್ಟ ನೋವಿನ ಸಮಸ್ಯೆ ಕೂಡ ಹೆಚ್ಚಾಗುತ್ತದೆಯಂತೆ.

**ವೈದ್ಯರು ಹೇಳುವ ಪ್ರಕಾರ:** ನಾವು ನಿರಂತರವಾಗಿ ಕಡಿಮೆ ತಾಪಮಾನದಲ್ಲಿ ಸಮಯ ಕಳೆಯುವು ದರಿಂದ, ದೇಹದ ಚಯಾಪಚಯ ಕ್ರಿಯೆಯು ಕ್ರಮೇಣ ಪರಿಣಾಮ ಬೀರಲು ಪ್ರಾರಂಭಿಸುತ್ತದೆ ಎಂದು ಡಾ. ಶಿವಯಾ ವಿವರಿಸುತ್ತಾರೆ. ಇದು ಮೂಳೆಗಳಿಗೆ ರಕ್ತದ ಹರಿವನ್ನು ಕಡಿಮೆ ಮಾಡುತ್ತದೆ ಜೊತೆಗೆ ಮೂಳೆಗಳನ್ನು ಬಲ ಪಡಿಸಲು ಅಗತ್ಯವಾದ ಪೋಷಣೆಯನ್ನು ಕೂಡ ಕಡಿಮೆ ಮಾಡುತ್ತದೆ. ನಾವು ಈ ಸ್ಥಿತಿಯಲ್ಲಿ ದೀರ್ಘಕಾಲ ಇದ್ದರೆ, ಮೂಳೆಗಳು ದುರ್ಬಲಗೊಳ್ಳಲು ಪ್ರಾರಂಭಿಸುತ್ತವೆ ಮತ್ತು ಕೀಲು ನೋವು ಕೂಡ ಹೆಚ್ಚಾಗುತ್ತದೆ.

**ಮೈಕೈ ನೋವು ಕೂಡ ಶುರುವಾಗಬಹುದು:** ಯಾರು ಹೆಚ್ಚು ಹೊತ್ತು ಎಸಿ ಕೋಣೆಯಲ್ಲಿ ಸಮಯಕಳೆಯುತ್ತಾರೆಯೋ ಅಥವಾ ಎಸಿ ಕೋಣೆಯಲ್ಲೇ ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಮಾಡುತ್ತಾ ಇರುತ್ತಾರೆಯೋ ಅವರಲ್ಲಿ ಮೂಳೆಗಳಿಗೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಯ ಜೊತೆಗೆ ಮೈಕೈ ನೋವು ಕಾಣಿಸಿಕೊಳ್ಳಬಹುದು, ಕೈಕಾಲುಗಳಲ್ಲಿ ಸೆಳೆತ, ಸೊಂಟದ ಹತ್ತಿರ ನೋವು ಹೀಗೆ ಅನೇಕ ಆರೋಗ್ಯ ಸಮಸ್ಯೆಗಳು ಕೂಡ ಒಂದರಂತೆ ಒಂದು ಕಂಡು ಬರಲು ಶುರುವಾಗುತ್ತದೆ ಹಾಗಾಗಿ ಆದಷ್ಟು ಎಸಿಯಿಂದ ದೂರವಿರುವುದು ಒಳ್ಳೆಯದು ಎನ್ನುವುದು ತಜ್ಞರ ಸಲಹೆ.



**ಜಂಕ್ ಫುಡ್ ಸಿಗರೇಟ್ ಮತ್ತು ಮದ್ಯಪಾನದಿಂದ ದೂರವಿರಿ**

**ಜಂಕ್ ಫುಡ್ ಮೂಳೆಗಳಿಗೆ ಹಾನಿ ಮಾಡುತ್ತದೆ ಏಕೆಂದರೆ ಅದು ಪೌಷ್ಟಿಕಾಂಶವನ್ನು ಹೊಂದಿರುವುದಿಲ್ಲ ಮತ್ತು ದೇಹದಲ್ಲಿ ಆಮ್ಲೀಯ ಪರಿಣಾ ಮವನ್ನು ಹೆಚ್ಚಿಸುತ್ತದೆ, ಇದು ಮೂಳೆಗಳಿಗೆ ಹಾನಿ ಮಾಡುತ್ತದೆ. ಸಿಗರೇಟ್ ಮತ್ತು ಮದ್ಯಪಾನ ಮಾಡುವುದರಿಂದ ಮೂಳೆಗಳು ದುರ್ಬ ಗೊಳ್ಳುತ್ತವೆ. ಈ ಅಭ್ಯಾಸಗಳನ್ನು ತ್ಯಜಿಸುವ ಮೂಲಕ ಮೂಳೆಗಳ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದು.**

**ಮೂಳೆಗಳ ಆರೋಗ್ಯಕ್ಕೆ ಆಹಾರ ಪದ್ಧತಿ ಹೀಗಿರಲಿ:** ದೇಹವನ್ನು ಆದಷ್ಟು ಹೈಡ್ರೇಟೆಡ್ ಆಗಿರುವುದನ್ನು ಅಭ್ಯಾಸ ಮಾಡಿಕೊಳ್ಳಿ. ಸಾಧ್ಯವಾದಷ್ಟು ಹೆಚ್ಚು ನೀರು ಕುಡಿಯಿರಿ. ನೀರು ದೇಹದ ಚಯಾಪಚಯ ಕ್ರಿಯೆಯನ್ನು ಸಮತೋಲನದಲ್ಲಿಡುತ್ತದೆ ಮತ್ತು ಮೂಳೆಗಳಿಗೆ ಅಗತ್ಯವಾದ ಖನಿಜಗಳ ಸಮತೋಲನವನ್ನು ಕಾಯ್ದುಕೊಳ್ಳಲು ನೆರವಾಗುತ್ತದೆ.

ಮೂಳೆಗಳನ್ನು ಬಲಪಡಿಸಲು ಕ್ಯಾಲ್ಸಿಯಂ ಬಹಳ ಮುಖ್ಯ. ಇದಕ್ಕಾಗಿ ಪ್ರತಿದಿನ ಹಾಲು ಕುಡಿಯುವ ಅಭ್ಯಾಸ ಮಾಡಿಕೊಳ್ಳಿ. ಇದರ ಜೊತೆಗೆ, ಮೊಸರು, ಚೀಸ್, ಇತರ ಡೈರಿ ಉತ್ಪನ್ನಗಳು ಕೂಡ ಮೂಳೆಗಳಿಗೆ ಪ್ರಯೋಜನಕಾರಿ. ಪಾಲಕ್ ಮತ್ತು ಬ್ರೊಕೊಲಿಯಂತಹ ಹಸಿರು ತರಕಾರಿಗಳು ಕ್ಯಾಲ್ಸಿಯಂ, ಕಬ್ಬಿಣ ಮತ್ತು ಇತರ ಅಗತ್ಯ ಪೋಷಕಾಂಶಗಳನ್ನು ಹೇರಳವಾಗಿ ಹೊಂದಿರುತ್ತವೆ. ಇವುಗಳ ಸೇವನೆಯು ಮೂಳೆಗಳನ್ನು ದೀರ್ಘಕಾಲದವರೆಗೆ ಬಲವಾಗಿರಿಸುತ್ತದೆ. ವ್ಯಾಯಾಮವು ಮೂಳೆಗಳು ಮತ್ತು ಸ್ನಾಯುಗಳನ್ನು ಬಲಪಡಿ ಸುತ್ತದೆ. ಪ್ರತಿದಿನ ಕನಿಷ್ಠ 30 ನಿಮಿಷಗಳ ಕಾಲ ನಡೆಯಿರಿ ಅಥವಾ ಲಘು ವ್ಯಾಯಾಮ ಮಾಡಿ. ಇದು ಮೂಳೆಗಳನ್ನು ಹಿಗ್ಗಿಸಲು ಸಹಾಯ ಮಾಡುತ್ತದೆ ಮತ್ತು ರಕ್ತ ಪರಿಚಲನೆ ಸುಧಾರಿಸುತ್ತದೆ.

# ಕಣ್ಮನ ತುಂಬಿದ ಸೌಖ್ಯಳ ಅತ್ಯದ್ಭುತ ನೃತ್ಯ ನೈವೇದ್ಯ



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

**ಅಪೂರ್ವ ಕಲಾನೈಪುಣ್ಯದ ನರ್ತನವಿಲಾಸ**

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ವೇದಿಕೆಯ ಮೇಲೆ ಮಿಂಚಿನ ಬಳ್ಳಿಯೊಂದು ಫಳಫಳನೆ ಝಳಪಿಸುತ್ತಿತ್ತು. ಅದು ಪುಟ್ಟ ಬಾಲಕಿ ಸೌಖ್ಯ ಎಂಬ ಬೆಳಕಿನ ಕಿರಣ, ವೇದಿಕೆಯ ತುಂಬಾ ಮಿನುಗುತ್ತಿತ್ತು. ನಿರಾಯಾಸವಾಗಿ ಎರಡು ಗಂಟೆಗಳ ಕಾಲ ಸೌಖ್ಯ ವೇಮರಾಜು, ಹಸನ್ಮುಖದಿಂದ ತನ್ನ ಅಂಗಶುದ್ಧ ನರ್ತನದಿಂದ ಆಸಕ್ತಿಕರವಾಗಿದ್ದ ಕೃತಿಗಳಿಗೆ ಜೀವನೀಡಿ ಕಲಾರಸಿಕರ ಹೃದಯ ತುಂಬಿದಳು. ಅದು ಅವಳ ಮೊದಲ ಹೆಜ್ಜೆಯ 'ರಂಗಪ್ರವೇಶ' ಎನಿಸಲೇ ಇಲ್ಲ. ಪಳಗಿದ ಅವಳ ಚಲನೆ, ಹೆಜ್ಜೆ- ನೃತ್ಯದ ವಿವಿಧ ಆಯಾಮಗಳನ್ನು ವೀಕ್ಷಿಸಿದವರಿಗೆ ಅವಳ ನುರಿತ ಅಭಿನಯ, ರಂಗಾಕ್ರಮಣದ ನಡೆ ನೋಡಿದವರಿಗೆ ಅಚ್ಚರಿ ಆಗಿತ್ತು. ಗುರು ಅಭಿನಯಾ ನಟರಾಜನ್, ಬಹು ಸೊಗಸಾಗಿ ನಟುವಾಂಗ ಮಾಡುತ್ತಾ ಶಿಷ್ಯೆಯ ಕಲಾಚೈತನ್ಯಕ್ಕೆ ಪೋಷಣೆ ನೀಡಿದ್ದರು. ಅಷ್ಟೇ ಅಲ್ಲದೆ ಅಭಿನಯ ಅವರ ಕಲಾತ್ಮಕ ನೃತ್ಯ ಸಂಯೋಜನೆ ಮಿಂಚಿನ ಸಂಚಾರ ಮೂಡಿಸಿ ಸುಮನೋಹರವಾಗಿದ್ದವು.

ಭರತನಾಟ್ಯದ 'ಮಾರ್ಗಂ' ಪದ್ಧತಿಯ 'ಪುಷ್ಪಾಂಜಲಿ' ( ರಾಗ- ವಿಜಯ ವಸಂತ, ಆದಿತಾಳ-ರಚನೆ ಮಧುರೈ ಮುರಳೀಧರನ್) ಯಿಂದ ನೃತ್ಯ ಆರಂಭಿಸಿದ ಕಲಾವಿದೆ, ಕ್ಲಿಷ್ಟವಾದ ಜತಿಸ್ವರದ ನೃತ್ತಗಳ ನವ ಚೈತನ್ಯದಿಂದ ಮುಂದುವರೆದು, ಶಕ್ತಿಹಾಲಿ ಅಭಿನಯದ, ಅಷ್ಟೇ ದೈವೀಕತೆ ಮಡುಗಟ್ಟಿದ ದೇವೀ ಸ್ತುತಿ, ರೋಮಾಂಚಕ ಆಕಾಶಚಾರಿ- ಭ್ರಮರಿಗಳಿಂದ ಅಲ್ಲಲ್ಲಿ ಕೌತುಕ ಹುಟ್ಟಿಸಿದ, ಪ್ರಬುದ್ಧ ಅಭಿನಯದ ಸೆಳಕುಗಳಿಂದ ಕೂಡಿದ ರಾಗಮಾಲಿಕೆ- ಖಂಡಚಾಪು ತಾಳದ 'ನರಸಿಂಹ ಕೌತ್ವಂ' ಗಳನ್ನು ಬಹು ರಮ್ಯವಾಗಿ ಪ್ರಸ್ತುತಪಡಿಸಿದಳು.



ನಟರಾಜನನ್ನು ಕುರಿತ ' ಶಿವ ವರ್ಣಂ'- ಸುದೀರ್ಘ ಬಂಧ. ಭಕ್ತಿ ಪ್ರಧಾನ ಕೃತಿಯನ್ನು ಸೌಖ್ಯ ಉತ್ತಮ ಅಭಿನಯದೊಂದಿಗೆ ನಯನ ಮನೋಹರ ನೃತ್ತಗಳನ್ನು ಆಕರ್ಷಕವಾಗಿ ಸಾಕ್ಷಾತ್ಕರಿಸಿದಳು. ಶಿವನ ಸೊಗಸಾದ ಆನಂದ ತಾಂಡವ ಮತ್ತು ಅವನ ವರ್ಣನೆ- ಮಹಿಮೆಗಳನ್ನು ಕುರಿತು ಕಲಾವಿದೆ ಪ್ರಸ್ತುತಪಡಿಸಿದ ಪರಿಣಾಮಕಾರಿ ಅಭಿನಯ- ನೃತ್ತ ನೈವೇದ್ಯ ಮನಮುಟ್ಟಿತು. ಸೌಖ್ಯಳ ನಿರಂತರ, ಅನಾಯಾಸ ನೃತ್ಯ ಸಾಮರ್ಥ್ಯ ಬೆರಗು ಉಂಟುಮಾಡಿತ್ತು. ಅತ್ಯದ್ಭುತವಾಗಿ ನರ್ತಿಸಿದ ಕಲಾವಿದೆ ತನ್ನ ಅಸಾಧಾರಣ ಚೈತನ್ಯ- ಉತ್ಸಾಹಗಳ ಪ್ರದರ್ಶನದಿಂದ. ಪ್ರೇಕ್ಷಕರಿಂದ ಬಹು ಮೆಚ್ಚುಗೆ ಪಡೆದಳು. ಮುಂದೆ ಅಣ್ಣಮಾಚಾರ್ಯರ ನಾರಾಯಣ ತೆ ನಮೋ ನಮೋ -ಕೃತಿ ದೈವೀಕವಾಗಿ ಮನಸೆಳೆಯಿತು. ಕೃಷ್ಣನಲ್ಲಿ ಅನುರಕ್ತಳಾದ ಮುಗ್ಧ ನಾಯಕಿ ಅವನ ನಿರೀಕ್ಷೆಯಲ್ಲಿ ಸಂಭ್ರಮಿಸುವ ಮತ್ತು ಅವನ ಅಗಲಿಕೆಯ ವಿರಹವೇದನೆಯಿಂದ ತಳಮಳಗೊಳ್ಳುವ, ನಾಯಕಿಯ ಭಾವನೆಗಳ ಏರಿಳಿತಗಳನ್ನು ಸೌಖ್ಯ ಜಾವಳಿಯಲ್ಲಿ ಬಹು ಪರಿಣಾಮಕಾರಿಯಾಗಿ ಕಟ್ಟಿ ಕೊಟ್ಟಳು. ವಿವಿಧ ವಿನ್ಯಾಸದ ಜತಿಗಳಿಂದ ವಿಜೃಂಭಿಸಿದಸುಮನೋಹರ 'ತಿಲ್ಲಾನ' ದೊಂದಿಗೆ ಅವಳು ಪ್ರಸ್ತುತಿಯನ್ನು ಅಂತ್ಯಗೊಳಿಸಿದಳು. ವಯಸ್ಸಿಗೂ ಮೀರಿದ ಪ್ರತಿಭೆಯಾದ ಸೌಖ್ಯಳ ಕಣ್ಮನ ತುಂಬಿದ ಸುಂದರ ನರ್ತನ ಚಿರಸ್ಮರಣೀಯವಾಗಿತ್ತು. ನೃತ್ಯದ ವರ್ಚಸ್ಸನ್ನು ಉನ್ನತೀಕರಿಸಿದ ಕಲಾತ್ಮಕ ರಂಗಸಜ್ಜಿಕೆ, ಬೆಳಕಿನ ಚಮತ್ಕಾರಗಳ ಜೊತೆ ಹೃದಯಂಗಮ ಸಂಗೀತದ ಬೆಂಬಲ ಪಡೆದ ನೃತ್ಯವಲ್ಲರಿ ಪ್ರಫುಲ್ಲವಾಗಿ ಪಲ್ಲವಿಸಿತ್ತು. ಭಾವಪೂರ್ಣ ಗಾಯನದಲ್ಲಿ ವಿದುಷಿ. ಲಕ್ಷ್ಮೀ ವರುಣ್, ಹೆಸರಿಗೆ ಅನ್ವರ್ಥಕ ಸುಮಧುರ ವೇಣುವಾದನದಲ್ಲಿ ವಿ. ವೇಣುಗೋಪಾಲರ ನಿನಾದ ವೈಭವ, ಪೃಥ್ವೀ ಕೃಷ್ಣರ ಮೃದಂಗ ಝೇಂಕಾರ, ವಯೊಲಿನ್ ಮಾಧುರ್ಯದಲ್ಲಿ ಅರ್ಜುನ್ ಎಂ.ಡಿ., ರಿದಮ್ ಪ್ಯಾಡಿನ ಮಾಂತ್ರಿಕತೆಯಲ್ಲಿ ಮಿಥುನ್ ಶಕ್ತಿ ವಿಜೃಂಭಿಸಿದರು. ಸುಸ್ಪಷ್ಟ ಖಚಿತ ಧ್ವನಿಪ್ರವಾಹದ ನಟುವಾಂಗದಲ್ಲಿ ಗುರು ಅಭಿನಯರ ಪ್ರಭಾವ ಅತಿಶಯವಾಗಿತ್ತು.

# ದೃಷ್ಟಿ ತಗಲುವುದು ಎಂದರೇನು?



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

1) ಯಾವುದಾದರೊಂದು ಜೀವದ ರಜ-ತಮಾತ್ಮಕ ಇಚ್ಛೆಯು, ಇನ್ನೊಂದು ಜೀವದ ಮೇಲೆ ದುಷ್ಪರಿಣಾಮವನ್ನು ಮಾಡುವುದಕ್ಕೆ ದೃಷ್ಟಿ ತಗಲುವುದು ಎನ್ನುತ್ತಾರೆ.

2) ಇದರ ಒಂದು ಉದಾಹರಣೆಯೆಂದರೆ, ಮಗುವಿಗೆ ದೃಷ್ಟಿ ತಗಲುವುದು. ನಗುವ ಅಥವಾ ಮುದ್ದಾದ ಮಗುವನ್ನು ನೋಡಿ ಕೆಲವು ಜನರ ಮನಸ್ಸಿನಲ್ಲಿ ಅವರಿಗೆ ಅರಿವಾಗದೇ, ಒಂದು ರೀತಿಯ ಆಸಕ್ತಿಯುಕ್ತ ವಿಚಾರಗಳು ಬರುತ್ತವೆ.

3) ಆಸಕ್ತಿಯುಕ್ತ ವಿಚಾರಗಳು ಯಾವಾಗಲೂ ರಜ-ತಮಾತ್ಮಕವಾಗಿರುತ್ತವೆ. ಮಗುವಿನ ಸೂಕ್ಷ್ಮದೇಹವು ಅತ್ಯಂತ ಸಂವೇದನಾಶೀಲವಾಗಿರುವುದರಿಂದ, ಈ ರಜ-ತಮಾತ್ಮಕ ಸ್ಪಂದನಗಳಿಂದ ಅದರ ಮೇಲೆ ಕೆಟ್ಟ ಪರಿಣಾಮವಾಗುತ್ತದೆ; ಅಂದರೆ ಮಗುವಿಗೆ ದೃಷ್ಟಿ ತಗಲುತ್ತದೆ.

4) ಕೆಲವೊಮ್ಮೆ ಯಾವುದಾದರೊಬ್ಬ ವ್ಯಕ್ತಿ, ಪ್ರಾಣಿ ಅಥವಾ ವಸ್ತುವಿನ ಬಗ್ಗೆ ಯಾವುದಾದರೊಬ್ಬ ವ್ಯಕ್ತಿ ಅಥವಾ ಕೆಟ್ಟ ಶಕ್ತಿಯ ಮನಸ್ಸಿನಲ್ಲಿ ಕೆಟ್ಟ ವಿಚಾರಗಳು ಬರುತ್ತವೆ, ಅವರಿಗೆ ಒಳಿತಾಗುವುದನ್ನು ಆ ವ್ಯಕ್ತಿಗೆ ಅಥವಾ ಕೆಟ್ಟ ಶಕ್ತಿಗೆ ಸಹಿಸಲಾಗುವುದಿಲ್ಲ. ಇದರಿಂದ ನಿರ್ಮಾಣವಾಗುವ ಕೆಟ್ಟ ಸ್ಪಂದನಗಳು ಆ ವ್ಯಕ್ತಿ, ಪ್ರಾಣಿ ಅಥವಾ ವಸ್ತುವಿನ ಮೇಲೆ ಪರಿಣಾಮವನ್ನು ಬೀರುವುದಕ್ಕೆ 'ದೃಷ್ಟಿ ತಗಲುವುದು' ಎನ್ನುತ್ತಾರೆ.


5) 'ಯಾವುದಾದರೊಂದು ಜೀವದ ಮನಸ್ಸಿನಲ್ಲಿ, ಇನ್ನೊಂದು ಜೀವದ ಬಗ್ಗೆ ತೀವ್ರ ಮತ್ಸರ ಅಥವಾ ದ್ವೇಷಯುಕ್ತ ವಿಚಾರಗಳ ಪ್ರಮಾಣವು ಶೇ. 30 ಕ್ಕಿಂತ ಹೆಚ್ಚಿಗಿದ್ದರೆ, ಆ ಜೀವದ ದೃಷ್ಟಿಯು ಇನ್ನೊಂದು ಜೀವಕ್ಕೆ ತೀವ್ರವಾಗಿ ತಗಲಬಹುದು. ಈ ರೀತಿಯ ದೃಷ್ಟಿ ತಗಲಿದಾಗ ದೃಷ್ಟಿ ತಗಲಿದ ಜೀವಕ್ಕೆ ಶಾರೀರಿಕಕ್ಕಿಂತ ಮಾನಸಿಕ ತೊಂದರೆಗಳಾಗುವ ಪ್ರಮಾಣ ಹೆಚ್ಚಿರುತ್ತದೆ. ಇದಕ್ಕೆ 'ಸೂಕ್ಷ್ಮ-ಸ್ತರದಲ್ಲಿ ತೀವ್ರ ದೃಷ್ಟಿ ತಗಲುವುದು' ಎನ್ನುತ್ತಾರೆ.'

6) ಅಘೋರಿ ವಿಧಿಗಳನ್ನು ಮಾಡುವವರಿಂದ ಯಾವುದಾದರೊಬ್ಬ ವ್ಯಕ್ತಿಯ ಮೇಲೆ ಮಾಟದಂತಹ ವಿಧಿಗಳನ್ನು ಮಾಡಿಸಿಕೊಂಡಿದ್ದರೂ ಆ ವ್ಯಕ್ತಿಗೆ ದೃಷ್ಟಿ ತಗಲುತ್ತದೆ.

**ಮಾಟದ ವೈಶಿಷ್ಟ್ಯಗಳು:** 1) ದೃಷ್ಟಿ ತಗಲಬೇಕಾದರೆ ಯಾವುದಾದರೊಂದು ಜೀವದ ಕಪಟ ವಾಸನೆಯು ಶೇ. 30ರಷ್ಟು ಇಬೇಕಾಗುತ್ತದೆ, ಆದರೆ ಮಾಟ ತಗಲಬೇಕಾದರೆ ಈ ಕಪಟ ವಾಸನೆಯು ಶೇ. 30 ಕ್ಕಿಂತಲೂ ಹೆಚ್ಚು ತೀವ್ರ, ಅಂದರೆ ಉಗ್ರರೂಪವನ್ನು ತಾಳಬೇಕಾಗುತ್ತದೆ.

2) ದೃಷ್ಟಿಯ ಸ್ಪಂದನಗಳು ಶೇ.30ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ತ್ರಾಸದಾಯಕವಾದರೆ, ಅದು ಮಾಟದಲ್ಲಿ ರೂಪಾಂತರವಾಗುತ್ತದೆ.

3) ಕೆಟ್ಟ ಶಕ್ತಿಗಳು ಹರಡುವ ಕಪ್ಪು ಶಕ್ತಿಯಿಂದ ಯಾವುದಾದರೊಂದು ಜೀವಕ್ಕೆ ತೊಂದರೆಯಾಗುವುದಕ್ಕೂ ಜೀವಕ್ಕೆ ಆ ಕೆಟ್ಟ ಶಕ್ತಿಯ ದೃಷ್ಟಿ ತಗಲಿತು ಎನ್ನುತ್ತಾರೆ.



# ನಿದ್ರಾಹೀನತೆಗೆ ಮನೆಮದ್ದು

ಹೂವನ್ನು ಹೊಟ್ಟೆಗೆ ಸೇವಿಸುವುದರಿಂದ ಅಥವಾ ಹೂವನ್ನು ತಲೆಯಲ್ಲಿ ಮುಡಿಯುವುದರಿಂದಸುಖವಾಗಿ ನಿದ್ದೆ ಬರುತ್ತದೆ. ಬಾಳೆಹಣ್ಣನ್ನು ಸಿಪ್ಪೆಸಹಿತವಾಗಿ ಕತ್ತರಿಸಿ 1 ಲೋಟ ನೀರಿಗೆ ಹಾಕಿ ಚೆನ್ನಾಗಿ ಕುದಿಸಿ ಅರ್ಧ ಇಂಗಿದನಂತರಶೋಧಿಸಿಕೊಂಡು ಕುಡಿಯುವುದರಿಂದ ಚೆನ್ನಾಗಿ ನಿದ್ರೆ ಬರುತ್ತದೆ. ಸಬ್ಬಸ್ಸಿಗೆ ಸೊಪ್ಪಿನ 2 ಕಡ್ಡಿಯನ್ನು ಮಲಗುವದಿಂಬಿನ ಹತ್ತಿರ ಇಟ್ಟು ಮಲಗಿದರೆ ಅದರ ವಾಸನೆಗೆ ಚೆನ್ನಾಗಿ ನಿದ್ರೆ ಬರುತ್ತದೆ.



ಬಿಸಿಮಾಡಿದ ಹರಳೆಣ್ಣೆಯನ್ನು ಕಣ್ಣಿನ ರೆಪ್ಪೆಯ ಮೇಲೆ ಸವರಿ ಮಲಗಿದರೆ ಸುಖವಾಗಿ ನಿದ್ರೆ ಬರುತ್ತದೆ. ಕೊತ್ತಂಬರಿ ಸೊಪ್ಪಿನ ರಸಕ್ಕೆ ಸಕ್ಕರೆಯನ್ನು ಹಾಕಿ ಚೆನ್ನಾಗಿ ಪಾಕ ಬರುವವರೆಗೆ ಕುದಿಸಿ, ಆರಿಸಿ, ಗಾಜಿನ ಸೀಸೆಗೆ ಹಾಕಿಟ್ಟುಕೊಳ್ಳಿ. ಪ್ರತಿದಿನ ರಾತ್ರಿ 2 ಚಮಚ ಈ ಸಿರಪ್ ಅನ್ನು ನೀರಿಗೆ ಸೇರಿಸಿ ಷರಬತ್ತು ಮಾಡಿಕೊಂಡು ಕುಡಿದರೆ ಚೆನ್ನಾಗಿ ನಿದ್ರೆ ಬರುತ್ತದೆ.

ಮಲಗುವ ಮುನ್ನ ಬಿಸಿನೀರಿನ ಸ್ನಾನ ಮಾಡಿ ಬಿಸಿ ಹಾಲು ಕುಡಿದು ಮಲಗಿ ಸುಖವಾದ ನಿದ್ರೆ ಬರುತ್ತದೆ.

ರಾತ್ರಿ ಮಲಗುವಾಗ ಅಂಗಾತ ಮಲಗಿ ದೀರ್ಘವಾಗಿ ಉಸಿರಾಟ ಮಾಡಿ, ಹಲವಾರು ಬಾರಿ ಮಾಡಿ ನಂತರ ಎಡಪಕ್ಕಕ್ಕೆ ತಿರುಗಿ ಮಲಗಿದರೆ ನಿದ್ರೆ ಬರುತ್ತದೆ. ಹುರುಳಿಕಾಳಿನ ಸಾರನ್ನು ತಿಂದರೆ ಸೊಗಸಾಗಿ ನಿದ್ರೆ ಬರುತ್ತದೆ. ವಾರಕ್ಕೊಮ್ಮೆ ಅಭ್ಯಂಗ ಸ್ನಾನ ಮಾಡುವುದರಿಂದ ಸೊಗಸಾಗಿ ನಿದ್ರೆ ಬರುತ್ತದೆ. ಹೆಸರುಬೇಳೆ ಪಾಯಸ ಮಾಡಿ ಕುಡಿದರೆ ಚೆನ್ನಾಗಿ ನಿದ್ರೆ ಬರುತ್ತದೆ.

# ಈ ಲಕ್ಷಣಗಳು ಕಾಣಿಸಿದ್ರೆ ನಿಮ್ಮ ದೇಹದಲ್ಲಿ ಕಬ್ಬಿಣಾಂಶದ ಕೊರತೆಯಿದೆ ಎಂದರ್ಥ

ಮಾನವನ ದೇಹಕ್ಕೆ ಕಬ್ಬಿಣಾಂಶವು ಅತ್ಯಗತ್ಯ. ನಿಮ್ಮ ದೇಹದಲ್ಲಿರುವ ಕಬ್ಬಿಣದ ಸುಮಾರು 70% ರಷ್ಟು ಕೆಂಪು ರಕ್ತ ಕಣಗಳಲ್ಲಿರುವ ಹಿಮೋಗ್ಲೋಬಿನ್ ಎಂಬ ಪ್ರೋಟೀನ್‌ನಲ್ಲಿ ಕಂಡುಬರುತ್ತದೆ. ಕೆಂಪು ರಕ್ತ ಕಣಗಳಲ್ಲಿರುವ ಪ್ರೋಟೀನ್ ಆಗಿರುವ ಹಿಮೋಗ್ಲೋಬಿನ್ ಅನ್ನು ತಯಾರಿಸಲು ಕಬ್ಬಿಣಾಂಶವು ಅತ್ಯಗತ್ಯ. ಈ ಕೆಂಪು ರಕ್ತ ಕಣಗಳು ನಿಮ್ಮ ದೇಹದಾದ್ಯಂತ ಆಮ್ಲಜನಕವನ್ನು ಸಾಗಿಸಲು ಸಹಾಯ ಮಾಡುತ್ತವೆ. ಆರು ಪ್ರತಿಶತ ಕಬ್ಬಿಣವು ಇತರ ಅಗತ್ಯ ಪ್ರೋಟೀನ್‌ಗಳಲ್ಲಿಯೂ ಕಂಡುಬರುತ್ತದೆ ಮತ್ತು ಇನ್ನೊಂದು 25% ನಿಮ್ಮ ದೇಹದಲ್ಲಿ ಫೆರಿಟಿನ್ ಎಂಬ ರಕ್ತ ಪ್ರೋಟೀನ್‌ನಲ್ಲಿ ಸಂಗ್ರಹವಾಗುತ್ತದೆ. ನಿಮ್ಮ ದೇಹದಲ್ಲಿ ಕಬ್ಬಿಣಾಂಶದ ಮಟ್ಟಗಳು ಹೆಚ್ಚಿದ್ದರೆ ಅಥವಾ ತುಂಬಾ ಕಡಿಮೆಯಾಗಿದ್ದರೆ ಅವು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು.

**ಕಬ್ಬಿಣಾಂಶದ ಕೊರತೆಗೆ ಕಾರಣಗಳು:**


**ರಕ್ತದ ನಷ್ಟ:** ರಕ್ತವು ಕೆಂಪು ರಕ್ತ ಕಣಗಳಲ್ಲಿ ಕಬ್ಬಿಣವನ್ನು ಹೊಂದಿರುತ್ತದೆ. ಆದ್ದರಿಂದ ನೀವು ರಕ್ತವನ್ನು ಕಳೆದುಕೊಂಡರೆ, ನೀವು ಸ್ವಲ್ಪ ಕಬ್ಬಿಣವನ್ನು ಕಳೆದುಕೊಳ್ಳುತ್ತೀರಿ. ಭಾರೀ ಋತುಚಕ್ರ ಹೊಂದಿರುವ ಮಹಿಳೆಯರು ಕಬ್ಬಿಣದ ಕೊರತೆಯ ರಕ್ತಹೀನತೆಯ ಅಪಾಯವನ್ನು ಹೊಂದಿರುತ್ತಾರೆ.

**ಆಹಾರದಲ್ಲಿ ಕಬ್ಬಿಣದ ಕೊರತೆ:** ನಿಮ್ಮ ದೇಹವು ನೀವು ಸೇವಿಸುವ ಆಹಾರಗಳಿಂದ ನಿಯಮಿತವಾಗಿ ಕಬ್ಬಿಣವನ್ನು ಪಡೆಯುತ್ತದೆ. ಹಾಗಾಗಿ ಕಬ್ಬಿಣಾಂಶ ಭರಿತ ಆಹಾರವನ್ನು ಸೇವಿಸಿ.

**ಕಬ್ಬಿಣವನ್ನು ಹೀರಿಕೊಳ್ಳಲು ಅಸಮರ್ಥತೆ:** ಆಹಾರದಿಂದ ಕಬ್ಬಿಣವು ನಿಮ್ಮ ಸಣ್ಣ ಕರುಳಿನಲ್ಲಿ ನಿಮ್ಮ ರಕ್ತಪ್ರವಾಹಕ್ಕೆ ಹೀರಲ್ಪಡುತ್ತದೆ. ಸೆಲಿಯಾಕ್ ಕಾಯಿಲೆಯಂತಹ ಕರುಳಿನ ಅಸ್ವಸ್ಥತೆಗೆ ಕಾರಣವಾಗುತ್ತದೆ.

**ಅನಾರೋಗ್ಯಕ್ಕೆ ಒಳಗಾಗುವುದು**

**ಕಬ್ಬಿಣದ ಕೊರತೆಯು ನಿಮ್ಮ ರೋಗ ನಿರೋಧಕ ಶಕ್ತಿಯನ್ನು ದುರ್ಬಲಗೊಳಿಸುತ್ತದೆ. ದುರ್ಬಲ ರೋಗನಿರೋಧಕ ಶಕ್ತಿಯುಳ್ಳ ವ್ಯಕ್ತಿಯಲ್ಲಿ ಆಗಾಗ್ಗೆ ಶೀತ, ಜ್ವರ ಅಥವಾ ಸೋಂಕುಗಳಿಗೆ ಒಳಗಾಗುತ್ತಾರೆ. ನಿಮ್ಮ ರೋಗನಿರೋಧಕ ಶಕ್ತಿ ದುರ್ಬಲವಾಗುತ್ತಿದ್ದರೆ, ಖಂಡಿತವಾಗಿಯೂ ನಿಮ್ಮ ಕಬ್ಬಿಣಾಂಶದ ಮಟ್ಟವನ್ನು ಪರೀಕ್ಷಿಸಿಕೊಳ್ಳಿ.**



**ಗರ್ಭಧಾರಣೆ:** ಕಬ್ಬಿಣದ ಪೂರಕವಿಲ್ಲದೆ, ಅನೇಕ ಗರ್ಭಿಣಿ ಮಹಿಳೆಯರಲ್ಲಿ ಕಬ್ಬಿಣಾಂಶದ ಕೊರತೆಯಿಂದಾಗಿ ರಕ್ತಹೀನತೆ ಕಂಡುಬರುತ್ತದೆ.

**ಆಗಾಗ್ಗೆ ದಣಿದ ಭಾವನೆ:** ದೇಹದಲ್ಲಿ ಕಬ್ಬಿಣದ ಪ್ರಮಾಣ ಕಡಿಮೆಯಾದಾಗ ಹಿಮೋಗ್ಲೋಬಿನ್ ಉತ್ಪಾದನೆ ಕಡಿಮೆಯಾಗುತ್ತದೆ. ಇದರಿಂದಾಗಿ ದೇಹದ ಭಾಗಗಳಿಗೆ ಕಡಿಮೆ ಆಮ್ಲಜನಕ ತಲುಪುತ್ತದೆ. ಇದರಿಂದಾಗಿ ನೀವು ಕಷ್ಟಪಟ್ಟು ಕೆಲಸ ಮಾಡದಿದ್ದರೂ ಸಹ ನೀವು ಆಗಾಗ್ಗೆ ದಣಿದ ಅನುಭವವನ್ನು ಅನುಭವಿಸುತ್ತೀರಿ.

**ಮುಖ ಅಥವಾ ತುಟಿಗಳ ಬಣ್ಣ ಹಳದಿಯಾಗುವುದು:** ಕಬ್ಬಿಣದ ಕೊರತೆಯು ರಕ್ತದ ಪ್ರಮಾಣವನ್ನು ಕಡಿಮೆ ಮಾಡುತ್ತದೆ ಮತ್ತು ಮುಖವು ಬಿಳುಚಿದಂತೆ ಮಸುಕಾಗಿ ಕಾಣಲು ಪ್ರಾರಂಭಿಸುತ್ತದೆ. ತುಟಿಗಳ ಬಣ್ಣ, ಕಣ್ಣುಗಳ ಕೆಳಗೆ ಚರ್ಮವನ್ನು ನೋಡುವ ಮೂಲಕ ನೀವು ಕಬ್ಬಿಣಾಂಶದ ಕೊರತೆಯಿಂದ ಬಳಲುತ್ತಿದ್ದೀರಿ ಎಂದು ಊಹಿಸಬಹುದು.

**ತಲೆತಿರುಗುವಿಕೆ:** ಕಬ್ಬಿಣಾಂಶದ ಕೊರತೆಯಿಂದಾಗಿ, ಮೆದುಳಿಗೆ ಸಾಕಷ್ಟು ಆಮ್ಲಜನಕ ಸಿಗುವುದಿಲ್ಲ. ಇದರ ಪರಿಣಾಮವಾಗಿ ತಲೆತಿರುಗುವಿಕೆ, ಮೂರ್ಛೆ ಅಥವಾ ಅಸಮತೋಲಿತ ನಡಿಗೆಯ ಭಾವನೆ ಉಂಟಾಗುತ್ತದೆ. ಹಾಗಾಗಿ ಕಬ್ಬಿಣದ ಕೊರತೆಯನ್ನು ನಿರ್ಲಕ್ಷಿಸಬಾರದು.

**ದುರ್ಬಲ ಉಗುರುಗಳು ಅಥವಾ ಉಗುರುಗಳ ಮುರಿತ:** ದುರ್ಬಲ ಅಥವಾ ಚಮಚದ ಆಕಾರದ ಉಗುರುಗಳು ಸುಲಭವಾಗಿ ಮುರಿಯುತ್ತದೆ. ಈ ರೀತಿ ಉಗುರುಗಳು ತುಂಡಾಗುವುದು ದೇಹದಲ್ಲಿ ಕಬ್ಬಿಣದ ಕೊರತೆಯ ಸಂಕೇತವಾಗಿದೆ. ಈ ಬದಲಾವಣೆ ನಿಧಾನವಾಗಿ ಸಂಭವಿಸುತ್ತದೆ, ಇದದನ್ನು ನಿರ್ಲಕ್ಷಿಸುವುದು ಹಾನಿಕಾರಕ.

**ಉಸಿರಾಟದ ತೊಂದರೆ, ದೌರ್ಬಲ್ಯ:** ಸಾಮಾನ್ಯ ವ್ಯಾಯಾಮ ಮಾಡಿದ ನಂತರ, ಮೆಟ್ಟಿಲುಗಳನ್ನು ಹತ್ತಿದ ನಂತರವೂ ನೀವು ಉಸಿರಾಟದ ತೊಂದರೆ ಅನುಭವಿಸಲು ಪ್ರಾರಂಭಿಸಿದರೆ, ದೇಹವು ಸಾಕಷ್ಟು ಆಮ್ಲಜನಕವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದರ ಸಂಕೇತವಾಗಿರಬಹುದು, ಇದು ಕಬ್ಬಿಣದ ಕೊರತೆಯನ್ನು ಸೂಚಿಸುತ್ತದೆ.



## ಕಾರ್ಯಾಲಯಕ್ಕಿಲ್ಲ ಉದ್ಘಾಟನೆ ಭಾಗ್ಯ : 3 ವರ್ಷಗಳಿಂದ ನಡೆಯುತ್ತಿರುವ ತಾ. ಪಂ ಕಟ್ಟಡ ಕಾಮಗಾರಿ

• ಉದಯವಾಹಿನಿ ಶಿರಸಿ

ಕಾಮಗಾರಿ ಆರಂಭವಾಗಿ ಮೂರೂವರೆ ವರ್ಷ ಸಮೀಪಿಸಿದರೂ ಇಲ್ಲಿನ ತಾಲ್ಲೂಕು ಪಂಚಾಯಿತಿ ನೂತನ ಕಟ್ಟಡ ಇನ್ನೂ ಪೂರ್ಣ ಪ್ರಮಾಣದಲ್ಲಿ ಬಳಕೆಗೆ ಮುಕ್ತವಾಗಿಲ್ಲ. ಈ ಮೊದಲಿದ್ದ 50 ವರ್ಷಕ್ಕೂ ಹಳತಾದ ಕಟ್ಟಡದಲ್ಲಿ ತಾಲ್ಲೂಕು ಪಂಚಾಯಿತಿ ನಿತ್ಯದ ವ್ಯವಹಾರ ನಡೆಯುತ್ತಿತ್ತು. ಇಡೀ ಕಟ್ಟಡ ಶಿಥಿಲಗೊಂಡು ಅಪಾಯಕ್ಕೆ ಆಹ್ವಾನ ನೀಡುವಂತಿತ್ತು. ಅಲ್ಲದೇ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ, ಇಒ ಅವರ ಕಚೇರಿ ಪ್ರಮುಖ ಕಟ್ಟಡದಿಂದ ಹೊರಗಡೆಯಿದ್ದ ಕಾರಣ ನಿತ್ಯದ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿತ್ತು. ಈ ಎಲ್ಲಾ ಕಾರಣಕ್ಕೆ 2021ರಲ್ಲಿ ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಮಂಜೂರಾತಿ ನೀಡಿತ್ತು. 2021ರ ಫೆಬ್ರುವರಿಯಲ್ಲಿ ಮಂಜೂರಾದ ಯೋಜನೆಯನ್ನು ಡಿಸೆಂಬರ್ ತಿಂಗಳಲ್ಲಿ ಗುತ್ತಿಗೆದಾರರಿಗೆ ಕಾಮಗಾರಿ



ಉದಯವಾಹಿನಿ ಚಿತ್ರ

ನಡೆಸಲು ನೀಡಲಾಗಿತ್ತು. ನಗರದ ಉಪವಿಭಾಗಾಧಿಕಾರಿ ಕಚೇರಿ ಪಕ್ಕದಲ್ಲಿದ್ದ 50 ವರ್ಷ ಹಿಂದಿನ ತಾಲ್ಲೂಕು ಪಂಚಾಯಿತಿಯ ಕಟ್ಟಡ ತೆರವು ಮಾಡಿ 2 ಕೋಟಿ ವೆಚ್ಚದಲ್ಲಿ ಹೊಸದಾಗಿ ಕಟ್ಟಡ ನಿರ್ಮಿಸುವ ಕಾಮಗಾರಿ ನಡೆದಿದೆ. ಶೇ 90ರಷ್ಟು ಕಾರ್ಯ ಪೂರ್ಣವಾಗಿದ್ದು, ಒಳಾಂಗಣ ಅಲಂಕಾರ, ಕಾಂಪೌಂಡ್ ಸೇರಿ ಇತರ ಕಾಮಗಾರಿ ಬಾಕಿಯಿದೆ. ನಿಧಾನಗತಿಯ ಕಾಮಗಾರಿಂದ 2023ರಲ್ಲೇ ಮುಕ್ತಾಯವಾಗಬೇಕಿದ್ದ ಕಾಮಗಾರಿ ಹೆಚ್ಚುವರಿಯಾಗಿ 2 ವರ್ಷ ಹಿಡಿದಿದೆ. ಇದರಿಂದ ಬೇರೆ ಕಟ್ಟಡದಲ್ಲಿಯೇ ಕಾರ್ಯ ನಿರ್ವಹಿಸುವ ಅನಿವಾರ್ಯದಲ್ಲಿರುವ ತಾಲ್ಲೂಕು ಪಂಚಾಯಿತಿ ಸಿಬ್ಬಂದಿ ಸ್ಥಳ ಅಭಾವದ ನಡುವೆಯೇ ನಿತ್ಯದ ಕೆಲಸ ಮಾಡುವಂತಾಗಿದೆ.

ಈ ಮೊದಲಿದ್ದ ಕಟ್ಟಡದ ನೀಲನಕ್ಷೆ ಬದಲಾವಣೆಯಾದ ಕಾರಣ ಆರಂಭದಲ್ಲಿ ಕಾಮಗಾರಿ ಪ್ರಾರಂಭಿಸಲು ವಿಳಂಬಾಗಿತ್ತು. ನಂತರ ರಾಜ್ಯ ಸರ್ಕಾರ ಬದಲಾವಣೆ, ಗುತ್ತಿಗೆದಾರರ ವಿಳಂಬ ನೀತಿಯಿಂದ ಇನ್ನಷ್ಟು ತಡವಾಗಿದೆ. ಪ್ರಸ್ತುತ ಕಟ್ಟಡ ಕಾಮಗಾರಿ ಮುಗಿದಿದ್ದು, ಹಸ್ತಾಂತರಿಸಿಕೊಳ್ಳುವಂತೆ ಗುತ್ತಿಗೆದಾರರು ತಿಳಿಸಿದ್ದಾರೆ. ಆ ಪ್ರಕ್ರಿಯೆ ಜಾರಿಯಲ್ಲಿದೆ' ಎಂದು ತಾಲ್ಲೂಕು ಪಂಚಾಯಿತಿ ಅಧಿಕಾರಿಯೊಬ್ಬರು ಹೇಳಿದರು.

> ವಾರದೊಳಗೆ ಉಳಿದೆಲ್ಲ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಶಾಸಕ ಭೀಮಣ್ಣ ನಾಯ್ಕ ಸೂಚಿಸಿದ್ದು ಶೀಘ್ರದಲ್ಲೇ ಕಟ್ಟಡ ಉದ್ಘಾಟನೆಯಾಗಲಿದೆ
> -ಚನ್ನಬಸಪ್ಪ ಹಾವಣಗಿ, ತಾಲ್ಲೂಕು ಪಂಚಾಯಿತಿ ಇಒ

## ಮಿನಿ ನ್ಯೂಸ್

## ಮಲೆನಾಡಿನಲ್ಲಿ ಧಾರಾಕಾರ ಮಳೆ

• ಉದಯವಾಹಿನಿ ಚಿಕ್ಕಮಗಳೂರು

ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆ ಮುಂದುವರಿದಿದ್ದು, ಹಲವೆಡೆ ಧಾರಾಕಾರ ಮಳೆ ಸುರಿಯಿತು. ಕಳಸ, ಕೊಪ್ಪ, ಶೃಂಗೇರಿ, ಕುದುರೆಮುಖ, ಎನ್.ಆರ್.ಪುರ, ಮೂಡಿಗೆರೆ, ಕೊಟ್ಟಿಗೆಹಾರ, ಆಲ್ದೂರು, ಬಾಳೆಹೊನ್ನೂರು ಸುತ್ತಮುತ್ತ ಧಾರಾಕಾರವಾಗಿ ಸುರಿಯಿತು. ಚಿಕ್ಕಮಗಳೂರು, ಮುಳ್ಳಯ್ಯನಗಿರಿ ಭಾಗದಲ್ಲಿ ಮಧ್ಯಾಹ್ನದ ನಂತರ ಜೋರು ಮಳೆ ಸುರಿಯಿತು.

## ನೌಕರರ ಬೇಡಿಕೆ ಈಡೇರಿಕೆಗೆ ಪ್ರತಿಭಟನೆ

• ಉದಯವಾಹಿನಿ ಮೂಡಲಗಿ

ಗ್ರಾಮ ಪಂಚಾಯಿತಿ ನೌಕರರಿಗೆ ಸೇವಾ ಹಿರಿತನ ಆಧಾರದಲ್ಲಿ ವೇತನ ನಿಗದಿಗೊಳಿಸಬೇಕು, ಕನಿಷ್ಠ ವೇತನ 31,000 ಸಾವಿರ ನಿಗದಿಯಾಗಬೇಕು, ಪ್ರತಿ ಗ್ರಾಮ ಪಂಚಾಯಿತಿಗೆ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ನೇಮಕ, ಪಿಂಚಣಿ ಸೌಲಭ್ಯ ಜಾರಿಯಾಗಬೇಕು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ಗ್ರಾಮ ಪಂಚಾಯಿತಿ ನೌಕರರ ಸಂಘ ಮೂಡಲಗಿ ಘಟಕದ ಪದಾಧಿಕಾರಿಗಳು ತಾಲ್ಲೂಕು ಪಂಚಾಯಿತಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಗ್ರಾಮ ಪಂಚಾಯಿತಿ ನೌಕರರ ಸಂಘದ ಮೂಡಲಗಿ ತಾಲ್ಲೂಕು ಘಟಕದ ಅಧ್ಯಕ್ಷ ರಮೇಶ ಹೊಳಿ ಮತ್ತು ಉಪಾಧ್ಯಕ್ಷ ರಾಜು ದೊಡ್ಡಮನಿ ಮಾತನಾಡಿ, ಕೆಲವು ಪಂಚಾಯಿತಿಗಳಲ್ಲಿ ಕಡಿಮೆ ಸಂಬಳದಲ್ಲಿ ನೌಕರರನ್ನು ದುಡಿಸಿಕೊಳ್ಳುತ್ತಿದ್ದಾರೆ. ಅನುಕಂಪ ಆಧಾರದ ಮೇಲೆ ನೇಮಕಾತಿಗಳಾಗಿಲ್ಲ, ಬಾಕಿ ಉಳಿದಿರುವ ಶಿಕ್ಷಣ ಅರ್ಹತೆ ಇಲ್ಲದ ಅನುಮೋದನೆ ಪ್ರಕರಣಗಳನ್ನು ಜಿಲ್ಲಾ ಪಂಚಾಯಿತಿ ಕಳಿಸುವಂತಾಗಬೇಕು, ಕಚೇರಿ ಮುಂದೆ ನಿತ್ಯ ಧ್ವಜಾರೋಹಣ ಮಾಡುವ ಸಿಬ್ಬಂದಿಗೆ 60 ಸಂಬಳ ನೀಡುವ ಆದೇಶವು ಜಾರಿಯಾಗಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

## ದಾನಿಹಳ್ಳಿ- ಬನ್ನಾಪುರ ಬಳಿ ಕರಡಿ ದರ್ಶನ

• ಉದಯವಾಹಿನಿ ನ್ಯಾಮತಿ

ಪಟ್ಟಣದ ಹೊರವಲಯದ ಕುಮಟಾ- ಕಾರಮಡಗಿ ಹೆದ್ದಾರಿಯ ದಾನಿಹಳ್ಳಿ ಬನ್ನಾಪುರದ ಹಳ್ಳದ ಬಳಿ ಬುಧವಾರ ಮುಂಜಾನೆ ವಾಯುವಿಹಾರಕ್ಕೆ ತೆರಳಿದ್ದವರಿಗೆ ಕರಡಿಯ ದರ್ಶನವಾಗಿದೆ.

ಹೊನ್ನಾಳಿ ರಸ್ತೆಯಲ್ಲಿ ವಾಯುವಿಹಾರಕ್ಕೆ ಹೋಗುತ್ತಿರುವಾಗ ರಸ್ತೆಯ ಬಲಬದಿಯಿಂದ ಕರಡಿಯೊಂದು ಎಡಬದಿಗೆ ಹೋಗುತ್ತಿರುವುದನ್ನು ನೋಡಿದೆವು. ಚಿತ್ರ ಸೆರೆಹಿಡಿಯಲು ಸಾಧ್ಯವಾಗಲಿಲ್ಲ ನಂತರ ಅದರ ಹೆಜ್ಜೆ ಗುರುತನ್ನು ಚಿತ್ರ ತೆಗೆದೆವು. ನಮಗೂ ಕರಡಿಗೂ ಸ್ವಲ್ಪ ಅಂತರವಿದ್ದು ಕರಡಿ ನಮ್ಮನ್ನು ಗಮನಿಸಲಿಲ್ಲ. ಈ ಭಾಗದಲ್ಲಿ ಜಮೀನುಗಳು ಬಿತ್ತನೆಗೆ ಆಗದೆ ಬಯಲು ಪ್ರದೇಶವಾಗಿದ್ದರಿಂದ ಕರಡಿ ಸಂಚಾರ ಕಂಡು ಬಂದಿತು ಎಂದು ಸುರಹೊನ್ನೆ ನಿವಾಸಿಗಳಾದ ಯುಧಿಷ್ಠರ ಮತ್ತು ಕಳ್ಳಿಳ್ಳಿ ಪುಟ್ಟಪ್ಪ ಮಾಹಿತಿ ನೀಡಿದರು. ಈ ರಸ್ತೆಯಲ್ಲಿ ವಾಯುವಿಹಾರಕ್ಕೆ, ದ್ವಿಚಕ್ರ ವಾಹನ ಸವಾರರು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಾರೆ. ಅರಣ್ಯ ಇಲಾಖೆಯವರು ಕೂಡಲೇ ಕ್ರಮಕೈಗೊಳ್ಳಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ಜಾಗೃತ, ಸಂಘಟಿತ ಜನತೆಯೇ ಪ್ರಜಾಪ್ರಭುತ್ವದ ಶಕ್ತಿ:ರಾಧಾ ಮೋಹನದಾಸ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಂಗಳೂರು

ಜಾಗೃತ ಹಾಗೂ ಸಂಘಟಿತ ಜನತೆಯೇ ಪ್ರಜಾಪ್ರಭುತ್ವದ ನಿಜವಾದ ಶಕ್ತಿ. ನಾಗರಿಕರು ಎಚ್ಚರವಾಗಿರದಿದ್ದರೆ, ದೇಶದಲ್ಲಿ ಅಳುಕಿನ ಸ್ಥಿತಿ ನಿರ್ಮಾಣವಾಗುತ್ತದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ರಾಧಾ ಮೋಹನದಾಸ್ ಅಗರ್ವಾಲ್ ಹೇಳಿದರು.

ಬಿಜೆಪಿಯ ದಕ್ಷಿಣ ಕನ್ನಡ ಜಿಲ್ಲಾ ಘಟಕವು ಇಲ್ಲಿ ಏರ್ಪಡಿಸಿದ್ದ ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್- ಕರಾಳ ಇತಿಹಾಸಕ್ಕೆ 50 ವರ್ಷಗಳು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರಭುತ್ವವನ್ನು ಪ್ರಶ್ನಿಸುವುದನ್ನು ನಿಲ್ಲಿಸಿದರೆ ದೇಶವೂ ಮತ್ತೆ ಪರಕೀಯತೆಯತ್ತ ಹೆಜ್ಜೆ ಹಾಕುತ್ತದೆ. ತುರ್ತು ಪರಿಸ್ಥಿತಿಯ ಕರಾಳತೆಯನ್ನು ಮೆಲುಕು ಹಾಕುವ ಈ ದಿನ ನಾವೂ ಈ ಮಾತುಗಳನ್ನು ಮತ್ತೆ ಜ್ಞಾಪಿಸಿಕೊಳ್ಳಬೇಕು.

ಅಂತಹ ಕರಾಳ ದಿನಗಳು ಮತ್ತೊಮ್ಮೆ ಮರುಕಳಿಸಲು ಅವಕಾಶ ನೀಡಬಾರದು ಎಂದರು. ತುರ್ತು ಪರಿಸ್ಥಿತಿಯ ವಿರುದ್ಧದ ಆಂದೋಲನ ರೂಪುಗೊಂಡಿದ್ದೇ ಕರ್ನಾಟಕದ ನೆಲದಲ್ಲಿ, ರೈಲ್ವೆ ಕಾರ್ಮಿಕರ ನೇತಾರರಾಗಿದ ಈ ಮಣ್ಣಿನ ಮಗ ಜಾರ್ಜ್ ಫರ್ನಾಂಡಿಸ್ ಅದಕೆ ಮುಂದಾಳತ ನೀಡಿದರು ಎಂದರು. ಬಿಜೆಪಿ ದ.ಕ. ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ ಸ್ವಾಗತಿಸಿದರು. ಸಂಘಟನಾ ಸಮಿತಿ ಸಂಚಾಲಕ ಪುರುಷೋತ್ತಮ ಮುಂಗಿಮನೆ ಧನ್ಯವಾದ ಸಮರ್ಪಿಸಿದರು.

## ತುಂಗಭದ್ರಾ ಭಾಗಶಃ ಭರ್ತಿಯಾದರೂ ರೈತರಿಗೆ ತಪ್ಪಿಲ್ಲ ಆತಂಕ

• ಉದಯವಾಹಿನಿ ಹೊಸಪೇಟೆ

ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್ ದುರಸ್ತಿ ಇರುವ ಕಾರಣ ಈ ಬಾರಿ 80 ಟಿಎಂಸಿ ಮಾತ್ರ ನೀರು ಸಂಗ್ರಹಿಸಲು ತಜ್ಞರು ಸಲಹೆ ನೀಡಿರುವ ಹಿನ್ನೆಲೆ, ಮುಂಚಿತವಾಗಿ ಕಾಲುವೆಗಳಿಗೆ ನೀರು ಹರಿಸುವಂತೆ ಅಚ್ಚುಕಟ್ಟು ಪ್ರದೇಶದ ರೈತರು ಕೂಗಿದೆ.

ಅಚ್ಚುಕಟ್ಟು ಪ್ರದೇಶದ ರೈತರು ಈಗಾಗಲೇ ಕೃಷಿ ಚಟುವಟಿಕೆ ಆರಂಭಿಸಿದ್ದು, ಈ ಬಾರಿ ಎರಡು ಬೆಳೆಗಳಿಗೆ ನೀರು ಸಿಗುವುದು ಅನುಮಾನ ಎಂಬಂತೆಯೇ ಈಗಾಗಲೇ ಟಿಬಿ ಮಂಡಳಿಯಲ್ಲಿ ಮಾತುಗಳು ಕೇಳಿ ಬರುತ್ತಿವೆ. ಟಿಬಿ ಡ್ಯಾಂನ 19ನೇ ಕ್ರಸ್ಟ್‌ಗೇಟ್ ದುರಂತದ ಬಳಿಕ ಉಳಿದ 32 ಕ್ರಸ್ಟ್ ಗೇಟ್ ಪರಿಶೀಲಿಸಿದ ತಜ್ಞರು, ಗೇಟ್‌ಗಳು ಮುಕ್ಕಾಗಿರುವ ಕುರಿತು ವರದಿಯಲ್ಲಿ ಹೇಳಿದ ಬಳಿಕ ಜಲಾಶಯದ ಸುರಕ್ಷತೆ ದೃಷ್ಟಿಯಿಂದ 80 ಟಿಎಂಸಿ ನೀರು ಮಾತ್ರ ಸಂಗ್ರಹ ಮಾಡುವುದು ಸೂಕ್ತ ಎಂದು ಸಲಹೆ ನೀಡಿದ್ದಾರೆ. ಕಳೆದ ವರ್ಷ ಡ್ಯಾಂ ಗರಿಷ್ಠ ಮಟ್ಟದಲ್ಲಿ ಸಂಗ್ರಹಗೊಂಡಿದ್ದ ದಿನವೇ ದುರಂತ ಸಂಭವಿಸಿದ್ದ ಹಿನ್ನೆಲೆ, ಈ ಬಾರಿ ತುಂಗಭದ್ರೆ ಒಡಲನ್ನು ಪೂರ್ಣ ಪ್ರಮಾಣದಲ್ಲಿ ತುಂಬದಿರಲು ನಿರ್ಣಯಿಸಲಾಗಿದೆ.

ಆದರೆ, ಇದೇ ಕಾರಣಕ್ಕೆ ಈ ಸಲ ಅಚ್ಚುಕಟ್ಟು ಪ್ರದೇಶದ ರೈತರು ಆತಂಕಗೊಂಡಿದ್ದಾರೆ.

ಅಧಿಕಾರಿಗಳು ಒಂದೇ ಬೆಳೆಗೆ ನೀರು ಕೊಡುವುದಾಗಿ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಗೇಟ್‌ಗಳನ್ನು ಅಡ್ಡ ಇಟ್ಟುಕೊಂಡು ವಿನಾಕಾರಣ ಬೇರೆ ಕಾಮಗಾರಿ ಮಾಡಿ ಕಾಲಹರಣ ಮಾಡುವ ಮೂಲಕ ರೈತರಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ರೈತರು ದೂರಿದ್ದಾರೆ.

**48.270 ಟಿಎಂಸಿ ನೀರು ಸಂಗ್ರಹ**

**ಜಲಾಶಯದಲ್ಲಿ ಜೂ.24ರ ಬೆಳಗ್ಗೆ ವೇಳೆಗೆ 48.270 ಟಿಎಂಸಿ ನೀರು ಸಂಗ್ರಹಗೊಂಡಿದೆ. ಕಳೆದ ವರ್ಷ ಇದೇ ಸಂದರ್ಭದಲ್ಲಿ ಕೇವಲ 5.37 ಟಿಎಂಸಿ ನೀರಿತ್ತು. ಆ ಬಳಿಕ ಒಂದೇ ತಿಂಗಳಲ್ಲಿ ಡ್ಯಾಂ ಭರ್ತಿಯಾಗಿ ನದಿಗೆ ನೀರು ಹರಿಸಲಾಗಿತ್ತು. ಹಾಗಾಗಿ, ಈ ಬಾರಿ ಈಗಾಗಲೇ ಅವಧಿಗೂ ಮುನ್ನವೇ ಟಿಬಿ ಡ್ಯಾಂಗೆ ಅಧಿಕ ನೀರು ಹರಿದು ಬಂದಿದ್ದು, ಈಗಲೂ 25 ಸಾವಿರ ಕ್ಯುಸೆಕ್ ಒಳಹರಿವಿದೆ. 1614.94 ಅಡಿ ಜಲಾಶಯ ಮಟ್ಟ ದಾಖಲಾಗಿದೆ. ಗೇಟ್ ಸಮಸ್ಯೆ ಇರುವ ಕಾರಣ ಡ್ಯಾಂ ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡುತ್ತಿಲ್ಲ. ಹಾಗಾಗಿ, ಮುಂಚಿತವಾಗಿಯಾದರೂ ನೀರು ಹರಿಸಬೇಕಿದೆ. ಈ ನಿಟ್ಟಿನಲ್ಲಿ ಈ ಭಾಗದ ಜನಪ್ರತಿನಿಧಿಗಳು ಮಾತನಾಡದಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.**


ಉದಯವಾಹಿನಿ ಚಿತ್ರ

**ಮುಂಗಾರು ಉತ್ತಮ**

**ಈ ವರ್ಷ ಮುಂಗಾರು ಉತ್ತಮವಾಗಿ ಸುರಿದಿದೆ. ತುಂಗಭದ್ರಾ ಜಲಾಶಯ ನೆಚ್ಚಿಕೊಂಡು ಮೂರು ರಾಜ್ಯಗಳ ರೈತರು ಕೃಷಿ ಮಾಡುತ್ತಿದ್ದಾರೆ. ಕ್ರಸ್ಟ್ ಗೇಟ್‌ಗಳನ್ನು ಬದಲಿಸಿ ನೂತನ ಗೇಟ್ ಅಳವಡಿಸುವ ಹಿನ್ನೆಲೆ 80 ಟಿಎಂಸಿ ನೀರು ಸಂಗ್ರಹ ಮಾಡುವುದಾಗಿ ಹೇಳಿದ್ದರು. ಕೂಡಲೇ ಕಾಲುವೆಗಳಿಗೆ ನೀರು ಹರಿಸಿದರೆ ರೈತರಿಗೆ ಅನುಕೂಲವಾಗಲಿದೆ ಎಂದಿದ್ದಾರೆ ಡಾ.ಪುರುಷೋತ್ತಮ ಗೌಡ ಅಧ್ಯಕ್ಷ, ತುಂಗಭದ್ರಾ ರೈತ ಸಂಘ.**

**ಐಸಿಸಿ ಸಭೆಯತ್ತ ಎಲ್ಲರ ಚಿತ್ತ**

**ಡ್ಯಾಂನಲ್ಲಿ 80 ಟಿಎಂಸಿ ನೀರು ಮಾತ್ರ ಸಂಗ್ರಹಿಸಲು ನಿರ್ಧರಿಸಿರುವ ಹಿನ್ನೆಲೆ, ಮುಂಚಿತವಾಗಿಯೇ ನೀರು ಹರಿಸಬೇಕೆಂದು ಈ ಹಿಂದೆಯೇ ಮನವಿ ಸಲ್ಲಿಸಿದ್ದರು. 25 ಟಿಎಂಸಿ ನೀರು ತುಂಬಿದ ಕೂಡಲೇ ಕಾಲುವೆಗಳಿಗೆ ನೀರು ಹರಿಸಿದರೆ ರೈತರಿಗೂ ಒಳ್ಳೆಯದಾಗಲಿದ್ದು, ಜಲಾಶಯದ ಸಂರಕ್ಷಣೆಗೂ ಒಳ್ಳೆಯ ಕ್ರಮವಾಗಲಿದೆಯೆಂದು ಮನವಿ ಮಾಡಿದ್ದರು. ಆದರೆ, ಸದ್ಯ ಟಿಬಿ ಡ್ಯಾಂನಲ್ಲಿ ಸಂಗ್ರಹ ಮಟ್ಟ 50 ಟಿಎಂಸಿ ಸಮೀಪಿಸಿದೆ. ಜೂನ್ ವೇಳೆಗೆ ಅದಾಗಲೇ ಅರ್ಧ ಭರ್ತಿಯಾಗಿರುವ ಡ್ಯಾಂನಿಂದ ಕಾಲುವೆಗಳಿಗೆ ನೀರು ಹರಿಸಬೇಕೆಂಬ ಕೂಗು ಜೋರಾಗಿರುವ ಮಧ್ಯೆಯೇ ಇದೇ ತಿಂಗಳ 27ರಂದು ಬೆಂಗಳೂರಿನಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ಕರೆದಿದ್ದು, ಸಭೆ ನಡೆದ ಕೆಲವೇ ದಿನಗಳಲ್ಲಿ ನೀರು ಹರಿಸುವ ಸಾಧ್ಯತೆಗಳು ಕೂಡ ಇವೆ.**

- ಜಲಾಶಯದಲ್ಲಿ 80 ಟಿಎಂಸಿ ಮಾತ್ರ ನೀರನ್ನು ಸಂಗ್ರಹಿಸಲು ತಜ್ಞರು ಸಲಹೆ ನೀಡಿದ್ದಾರೆ
- ಅಧಿಕಾರಿಗಳು ಒಂದೇ ಬೆಳೆಗೆ ನೀರು ನೀಡುವ ಕುರಿತು ತಪ್ಪು ಮಾಹಿತಿ ನೀಡುತ್ತಿದ್ದಾರೆ.
- ತುಂಗಭದ್ರಾ ಜಲಾಶಯದ ಶ್ರೇಣಿಯಲ್ಲಿ ಮೂರು ರಾಜ್ಯಗಳ ರೈತರು ಕೃಷಿ ಚಟುವಟಿಕೆ ನಡೆಸುತ್ತಿದ್ದಾರೆ.

## ಮಲೆನಾಡಿನಲ್ಲಿ ವರುಣನ ಆರ್ಭಟ: ಕತ್ತಲೆಯಲ್ಲಿ ಮುಳುಗಿವೆ ಗ್ರಾಮಗಳು

• ಉದಯವಾಹಿನಿ ಸಕಲೇಶಪುರ

ಮಲೆನಾಡಿನಲ್ಲಿ ವರುಣನ ಆರ್ಭಟ ಮತ್ತುಷ್ಟು ಹೆಚ್ಚಿದ್ದು, ಹಲವು ಗ್ರಾಮಗಳು ವಿದ್ಯುತ್ ಸಂಪರ್ಕ ಕಡಿದುಕೊಂಡು ಕತ್ತಲೆಯಲ್ಲಿ ಮುಳುಗಿವೆ. ಕೃಷಿ ಚಟುವಟಿಕೆಗಳು ಬಹುತೇಕ ಸ್ಥಗಿತಗೊಂಡಿವೆ. ತಾಲ್ಲೂಕಿನ ಹಾನುಬಾಳು, ಹೆತ್ತೂರು, ಬೆಳಗೂಡು, ಯಸಳೂರು ಹಾಗೂ ಕಸಬ ಹೋಬಳಿ ವ್ಯಾಪ್ತಿ ಹಾಗೂ ಪಶ್ಚಿಮ ಘಟ್ಟದ ಅಂಚಿನ ಗ್ರಾಮೀಣ ಪ್ರದೇಶಗಳಲ್ಲಿ ಮಳೆ ಮತ್ತಷ್ಟು ಬಿರುಸುಗೊಂಡಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಮರ ಮುರಿದು ಬಿದ್ದ ಪರಿಣಾಮ ಕೆಲವು ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

ಈ ಬಾರಿ ಅವಧಿಗೂ ಮುಂಚೆಯೇ(ಮೇ ಅಂತ್ಯದಲ್ಲಿ) ಮುಂಗಾರು ಪ್ರಾರಂಭವಾಗಿದ್ದ ಕಾರಣ ಬಹುತೇಕ ಕೃಷಿಕರು ಹಾಗೂ ಬೆಳೆಗಾರರಿಗೆ ಮುಂಗಾರು ಪೂರ್ವ ಕೃಷಿ ಚಟುವಟಿಕೆ ಕೈಗೊಳ್ಳಲು ಹಿನ್ನಡೆಯಾಗಿತ್ತು. ಕಳೆದ ವಾರ ಮಳೆ ಬಿಡುವುದು ನೀಡಿದ್ದ ಕಾರಣ ತೋಟಗಳಿಗೆ ಗೊಬ್ಬರ, ಔಷಧ ಸಿಂಪಡಣೆ (ಬೋರ್ಡೋ)


ಉದಯವಾಹಿನಿ ಚಿತ್ರ

ಹಾಗೂ ಇತರೆ ಕಾರ್ಯಗಳನ್ನು ತರಾತುರಿಯಲ್ಲಿ ಮುಂದುವರಿಸಿದ್ದರು. ಆದರೀಗ ಕಳೆದ ಕೆಲ ದಿನಗಳಿಂದ ಮಳೆ ಮತ್ತೆ ಪುನರಾರಂಭವಾದ ಹಿನ್ನೆಲೆ ಬೆಳೆಗಾರರ ಉತ್ಸಾಹಕ್ಕೆ ತಣ್ಣೀರೆರಚಿದೆ. ಇದೇ ಪ್ರಮಾಣದಲ್ಲಿ ಮಳೆ ಮುಂದುವರೆದರೆ, ಬೆಳೆಗಳಿಗೆ ರೋಗ ತಗುಲುವ ಮತ್ತು ಫಸಲು ನೆಲ ಕಚ್ಚುವ ಆತಂಕ ಎದುರಾಗಿದೆ.

ಮಳೆ ಅಬ್ಬರ ಹಿನ್ನೆಲೆ ಕೂಲಿ ಕಾರ್ಮಿಕರು ಮತ್ತು ರೈತರು ಕೃಷಿ ಚಟುವಟಿಕೆಗಳತ್ತ ತೆರಳದೆ ಕೆಲಸ ಕಾರ್ಯಗಳಿಗೆ ರಜೆ ಘೋಷಿಸಿದ್ದಾರೆ. ಜಿಲ್ಲಾಡಳಿತ ಮಂಗಳವಾರ ಶಾಲೆಗಳಿಗೆ ತಡವಾಗಿ ರಜೆ ಘೋಷಣೆ ಮಾಡಿದ್ದರಿಂದ ಬಹುತೇಕ ವಿದ್ಯಾರ್ಥಿಗಳು ಸುರಿಯುತ್ತಿದ್ದ ಮಳೆಯಲ್ಲಿಯೇ ಬೆಳಗ್ಗೆ ಶಾಲೆಗೆ ತೆರಳಿ ರಜೆ ವಿಷಯ ತಿಳಿದು ವಾಪಾಸ್ಸಾಗುತ್ತಿದ ದೃಶ್ಯ ಕಂಡು ಬಂತು. ಇದು ಪೋಷಕರ ಅಸಮಾಧಾನಕ್ಕೆ ಕಾರಣವಾಯಿತು.

**ಜಲಪಾತಗಳಿಗೆ ಜೀವಕಳೆ**

**ಮೈದುಂಬಿದ ನದಿ, ಹಳ್ಳಕೊಳ್ಳಗಳು ಜಿಲ್ಲೆಯ ಜೀವನಾಡಿ ಹೇಮಾವತಿ ಜಲಾಶಯಕ್ಕೆ ಒಳ ಹರಿವು ಮತ್ತಷ್ಟು ಹೆಚ್ಚಳವಾಗಿದೆ. ಎತ್ತಿನಹೊಳೆ, ಅಡ್ಡ ಹೊಳೆ, ಕೆಂಪುಹೊಳೆ, ಕಾಡುಮನೆಹೊಳೆ, ಹೊಂಗಡಹಳ್ಳ ಹೊಳೆ, ಕೀರಿಹೊಳೆ ಮತ್ತು ಜಪಾವತಿ ಹೊಳೆ ಸೇರಿದಂತೆ ಬಹುತೇಕ ಎಲ್ಲಾ ಹಳ್ಳಕೊಳ್ಳಗಳು ತುಂಬಿ ರಭಸವಾಗಿ ಹರಿಯುತ್ತಿವೆ. ಈ ಭಾಗದ ಎಲ್ಲಾ ಜಲಪಾತಗಳು ಜೀವಕಳೆ ಪಡೆದು ಹಾಲ್ನೊರೆಯಂತೆ ಧುಮ್ಮಿಕ್ಕುತ್ತಿವೆ.**

## ಬುದ್ಧ, ಬಸವಣ್ಣ, ಅಂಬೇಡ್ಕರ್ ತತ್ವಪಾಲಿಸಿ

• ಉದಯವಾಹಿನಿ ಹುಮನಾಬಾದ್

ಸರ್ವ ಜನಾಂಗದ ಒಳಿತನ್ನು ಬಯಸಿದ ಭಗವಾನ ಬುದ್ಧ, ಬಸವಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ತತ್ವಗಳನ್ನು ಎಲ್ಲರೂ ಪಾಲಿಸಬೇಕು ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದರು.

ಪಟ್ಟಣದ ಸರಕಾರಿ ನೌಕರರ ಭವನದ ಸಭಾಂಗಣದಲ್ಲಿ ಆಶ್ರಯ ದೀಪ ಟ್ರಸ್ಟ್ ವತಿಯಿಂದ ನಡೆದ ಆಶ್ರಯ ದೀಪ ಟ್ರಸ್ಟ್ ಉದ್ಘಾಟನೆ ಸಮಾರಂಭ ಹಾಗೂ ಬುದ್ಧ, ಬಸವ, ಅಂಬೇಡ್ಕರ್ ಅವರ ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಅನ್ಯಾಯ ಮೇಲುಗೈ ಸಾಧಿಸಿದಾಗ ಅವತಾರ ಪುರುಷರು ಕಾಣಿಸಿಕೊಂಡು ಧರ್ಮವನ್ನು ಸ್ಥಾಪಿಸುತ್ತಾರೆ ಎಂಬ ನಂಬಿಕೆ ಇದೆ. 12ನೇ ಶತಮಾನದಲ್ಲಿ ಬಸವೇಶ್ವರ, 19ನೇ ಶತಮಾನದಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದೀನದಲಿತರು,ಶೋಷಿತರ ವಿಮೋಚನಕಾರರಾಗಿ,


ಉದಯವಾಹಿನಿ ಚಿತ್ರ

ಅಜ್ಞಾನ ಮತ್ತು ಮೂಢನಂಬಿಕೆಗಳ ವಿರುದ್ಧ ಸಮಾಜ ಸುಧಾರಕರಾಗಿ ಕಾಣಿಸಿಕೊಂಡರು ಎಂದರು.

ಗೌತಮ ಬುದ್ಧರು ಆಸೆಯೇ ಮೂಲ ಎಂದು ಸಾರಿದರೇ, ಬಸವಣ್ಣನವರು ಕಾಯಕವೇ ಕೈಲಾಸ ಎಂದು ಹಾಗೂ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ ಮತ್ತು ಒಗ್ಗಟ್ಟಿನ ಹೋರಾಟ ಎಂಬ ಸಂದೇಶವನ್ನು ಸಮಾಜಕ್ಕೆ ಸಾರಿದ್ದಾರೆ. ಜೀವನದ ಸಾರವನ್ನು ತಿಳಿಸುವ ಈ ಸಂದೇಶಗಳು ಇಂದಿನ ಯುವಕ-ಯುತಿಯರು ಅರಿತುಕೊಳ್ಳಬೇಕು ಎಂದರು.

## ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನ

• ಉದಯವಾಹಿನಿ, ವಿಜಯಪುರ

ಮಾದಕ ವಸ್ತುಗಳ ಸೇವನೆಯಿಂದ ಮನುಷ್ಯ ಅನೇಕ ದೈಹಿಕ ಹಾಗೂ ಮಾನಸಿಕ ಕಾಯಿಲೆಗೆ ಒಳಗಾಗಿ ತನ್ನ ಜೀವವನ್ನೆ ಕಳೆದುಕೊಳ್ಳುತ್ತಾನೆ ಹಾಗೂ ಆರ್ಥಿಕವಾಗಿ ದಿವಾಳಿ ಕೂಡ ಆಗುತ್ತಾನೆ. ಇದರಿಂದ ಕುಟುಂಬ ಹಾಗೂ ಸಮಾಜದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಸಮಾಜ ಮಾದಕ ವಸ್ತುಗಳಿಂದ ಮುಕ್ತವಾಗಿರಬೇಕು


ಉದಯವಾಹಿನಿ ಚಿತ್ರ

ಎಂದು ಡಿವೈಎಸ್ಪಿ ಬಸವರಾಜ ಯಲಿಗಾರ ಹೇಳಿದರು

ವಿಜಯಪುರ ನಗರದ ಪ್ರತಿಷ್ಠಿತ ಬಿ ಎಲ್ ಡಿ ಈ ಸಂಸ್ಥೆಯ ಎಸ್.ಎಸ್. ಪದವಿ ಪೂರ್ವ ಕಾಲೇಜಿನಲ್ಲಿ ವಿಜಯಪುರ ಜಿಲ್ಲಾ ಪೊಲೀಸ್, ಗಾಂಧಿ ಚೌಕ್ ಪೊಲೀಸ್ ಠಾಣೆ, ವಿಜಯಪುರ ಇವರ ಸಂಯುಕ್ತ ಆಶ್ರಯದಲ್ಲಿ ಮಾದಕ ವಸ್ತುಗಳ ಸಾಗಾಣಿಕೆ ಮತ್ತು ಮಾರಾಟದ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು.

> **ಇಂದಿನ ಯುವಕರು ತಂದೆ, ತಾಯಿ ಹಾಗೂ ಗುರುಗಳ ಋಣ ಎಂದಿಗೂ ಮರೆಯಬಾರದು. ಸದ್ಗುಣ ಸಚ್ಚಾರಿತ್ರ್ಯ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದುಶ್ಚಟಗಳಿಂದ ದೂರವಿರಬೇಕು. ಮಾದಕ ವಸ್ತುಗಳು ನಮ್ಮ ವ್ಯಕ್ತಿತ್ವಕ್ಕೆ ಹಾಗೂ ಆರೋಗ್ಯಕ್ಕೆ ಮಾರಕವಾಗಿವೆ.**
> -ಬಸವರಾಜ ಯಲಿಗಾರ, ಡಿವೈಎಸ್ಪಿ

## ಭಾರಿ ಗಾತ್ರದ ಲಾರಿ ಟಿಪ್ಪರ್ ಓಡಾಟ, ಆರ್.ಟಿ.ಓ ಅಧಿಕಾರಿಗಳು ಗಾಢನಿದ್ರೆಯಲ್ಲಿ: ಸಾರ್ವಜನಿಕರ ಆರೋಪ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನಾದ್ಯಂತ ಕೆಂಪು ಮಣ್ಣು, ಸುದ್ದ ಸವಳು, ಮರಳು,ಗಣಿಗಾರಿಕೆ ಕಲ್ಲು ಬಂಡೆಗಳು ಸೇರಿದಂತೆ ಕಲ್ಬುರ್ಗಿ ಸಿಮೆಂಟ್ ಪ್ರೈವೇಟ್ ಲಿಮಿಟೆಡ್ ಛತ್ರಸಾಲ ಹಾಗೂ ಚೆಟ್ಟಿನಾಡು ಕಾರ್ಖಾನೆಗಳಿಗೆ ವಿವಿಧ ಲಾರಿ, ಟಿಪ್ಪರ್,ಟ್ರ್ಯಾಕ್ಟರ್,ಸೇರಿದಂತೆ ವಿವಿಧ ವಾಹನಗಳು ಅತಿಯಾದ ಭಾರಿ ಪ್ರಮಾಣದಲ್ಲಿ ತುಂಬಿಕೊಂಡು ಹೋಗುತ್ತಿರುವುದರಿಂದ ರಸ್ತೆ ಹದಗೆಡುತ್ತಿವೆ ಹಾಗೂ ಮೇಲ್ಗಡೆವಿರುವ ವಿದ್ಯುತ್ ತಂತಿಗಳು,ಕಂಬಗಳು ಮುರಿದು ಬೀಳುವ ಸ್ಥಿತಿಯಲ್ಲಿವೆ ಆದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಕಾರ್ಖಾನೆಯವರಿಗೆ ಹೇಳಿದರೂ ಪ್ರಯೋಜನವಾಗಿಲ್ಲ ಆದರೆ ಜಿಲ್ಲೆಯಾದ್ಯಂತ ಆರ್ ಟಿ.ಓ ಅಧಿಕಾರಿಗಳು ಗಾಢನಿದ್ರೆಯಲ್ಲಿ ಇದ್ದಂತೆ ಕಾಣುತ್ತಿದೆ ಎಂದು ಕರ್ಚಖೇಡ ಗ್ರಾ.ಪಂ.ಅಧ್ಯಕ್ಷ ಬಾಬುಮಿಯ್ಯ ಮೋಮೀನ್ ಆರೋಪಿಸಿದ್ದಾರೆ.

ತಾಲ್ಲೂಕಿನ ಚೆತ್ರಸಾಲ ಮತ್ತು ಕರ್ಚಖೇಡ ಮುಖ್ಯರಸ್ತೆಗಳಿಗೆ ಭಾರಿ ಗಾತ್ರದ ವಾಹನಗಳು ಹೋಗುವುದರಿಂದ ರಸ್ತೆಗಳು ಹದಗೆಟ್ಟಿವೆ ಕಾರಣ


ಉದಯವಾಹಿನಿ ಚಿತ್ರ

ವಾಹನಗಳು ತಡೆಗಟ್ಟುವಂತೆ ಕಾರ್ಖಾನೆ ಅಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿದರು. ಕಾರ್ಖಾನೆಯ ಸಿಎಸ್‌ಆರ್ ಅನುದಾನದಲ್ಲಿ ಆಂಬುಲೆನ್ಸ್ ಸೌಲಭ್ಯ ಇದ್ದರೂ ಕೂಡ ನಮ್ಮ ಗ್ರಾಮಗಳಿಗೆ ಯಾವುದೇ ಅನುಕೂಲ ವಾಗುತ್ತಿಲ್ಲ,ಯಾವುದೇ ಅಪಘಾತ ಆಗಿದ್ದಾಗ ಹಾಗೂ ಗರ್ಭಿಣಿಯವರಿಗೆ ಹೆರಿಗೆ ಸಂದರ್ಭ ಆಸ್ಪತ್ರೆಗೆ ಹೋಗಲು ಕೇಳಿದರೆ ಕುಂಟುನೆಪ ಹೇಳುತ್ತಿದ್ದಾರೆ ಎಂದರು.

> **ಛತ್ರಸಾಲ ಕಲಬುರ್ಗಿ ಸಿಮೆಂಟ್ ಕಾರ್ಖಾನೆಗೆ ಅತಿ ಎತ್ತರದ ಭಾರಿ ವಾಹನಗಳು ಬರುತ್ತಿವೆ ವಾಹನಗಳಿಂದ ಕರ್ಚಖೇಡ ಗ್ರಾಮದ ಹಾಗೂ ಛತ್ರಸಾಲ ಗ್ರಾಮದ ವಿದ್ಯುತ್ ತಂತಿಗಳು ಹಾಗೂ ಕಂಬಗಳು ಮುರಿದು ಬೀಳುತ್ತಿವೆ,ಭಾರಿ ಗಾತ್ರದ ವಾಹನಗಳಿಂದ ರಸ್ತೆಗಳು ಕೆಟ್ಟು ಹೋಗುತ್ತಿವೆ ಅನೇಕ ಬಾರಿ ಕಂಪನಿ ಸಂಬಂಧಪಟ್ಟವರಿಗೆ ಗಮನಕ್ಕೂ ತಂದಿದ್ದಾರೆ ಯಾವುದೇ ಪ್ರಯೋಜನೆ ಆಗಿಲ್ಲವೆಂದರು.**
> -ಬಾಬುಮಿಯ್ಯ ಮೋಮೀನ್

ಸಲೀಂ ಪಾಷಾ,ಎಸ್.ಕೆ ಸದ್ದಾಮ್, ಶಂಕರ ಮುತ್ತಂಗಿ, ತಿಪ್ಪಣ್ಣ ಕುಂಬಾರ,ಬಸಪ್ಪ ಹೆಂಡಿ, ಜಗನ್ನಾಥ,ರಾಜು ಪೂಜಾರಿ,ಅನೇಕರಿದ್ದರು.

## ಅಂಗನವಾಡಿ ಆಹಾರಕ್ಕೆ ಹುಳ: ಗ್ರಾಮಸ್ಥರ ಆಕ್ರೋಶ

• ಉದಯವಾಹಿನಿ, ಸವಣೂರು

ತಾಲ್ಲೂಕಿನ ಮಣ್ಣೂರು ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಪೂರೈಸಿರುವ ಆಹಾರದಲ್ಲಿ ನುಸಿ (ಹುಳ) ಇರುವ ಆರೋಪ ವ್ಯಕ್ತವಾಗಿದ್ದು, ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಗ್ರಾಮಸ್ಥರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಅಂಗನವಾಡಿ ಕೇಂದ್ರದಲ್ಲಿ ತಪಾಸಣೆ ನಡೆಸಿದ ಗ್ರಾಮಸ್ಥರು, ಆಹಾರದಲ್ಲಿ ನುಸಿ ಇರುವುದನ್ನು ಪತ್ತೆ ಮಾಡಿದರು. ಅಂಗನವಾಡಿ ಕೇಂದ್ರಕ್ಕೆ ಪೂರೈಸಲಾದ ಆಹಾರದಲ್ಲಿ ನುಸಿ ಹೆಚ್ಚಾಗಿದ್ದು, ಇದನ್ನೇ ಮಕ್ಕಳು ಹಾಗೂ ಗರ್ಭಿಣಿ-ಬಾಣಂತಿಯರಿಗೆ ಕೊಡಲಾಗುತ್ತಿದೆ' ಎಂದು ಆರೋಪಿಸಿದರು. ನುಸಿ ಇರುವ ಆಹಾರ ಹಿಡಿದುಕೊಂಡು ಅಂಗನವಾಡಿ ಎದುರು ನಿಂತಿದ್ದ ಗ್ರಾಮಸ್ಥರು, ಹಿರಿಯ ಅಧಿಕಾರಿಗಳು ಬಂದು ಸಮಸ್ಯೆ ಬಗೆಹರಿಸುವವರೆಗೂ ಸ್ಥಳದಿಂದ ಹೋಗುವುದಿಲ್ಲವೆಂದು ಪಟ್ಟು ಹಿಡಿದರು. ಸ್ಥಳಕ್ಕೆ ಬಂದ ಸಿಡಿಪಿಒ ಉಮಾ ಕೆ.ಎಸ್. ಅವರನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು.

**ಆಹಾರದಲ್ಲಿ ನುಸಿ ಹೆಚ್ಚು**


ಉದಯವಾಹಿನಿ ಚಿತ್ರ

ಮಣ್ಣೂರು ಸೇರಿದಂತೆ ಹಲವು ಅಂಗನವಾಡಿ ಕೇಂದ್ರಗಳಿಗೆ ಕಳಪೆ ಆಹಾರ ಪೂರೈಸಲಾಗುತ್ತಿದೆ. ಗೋಧಿ ನುಚ್ಚು, ಹೆಸರು, ಬೆಲ್ಲ, ತೊಗರಿ ಬೇಳೆ, ಅಕ್ಕಿ ಸೇರಿದಂತೆ ಹಲವು ಆಹಾರ ಪದಾರ್ಥ ನೀಡಲಾಗುತ್ತಿದೆ. ಇವೆಲ್ಲವೂ ಕಳಪೆಯಾಗಿವೆ ಎಂದು ದೂರಿದರು. 'ಕಳಪೆ ಆಹಾರ ಸೇವಿಸಿದ ಮಕ್ಕಳು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಗರ್ಭಿಣಿಯರು ಹಾಗೂ ಬಾಣಂತಿಯರ ಪಾಡು ಹೇಳತೀರದ್ದಾಗಿದೆ. ಕಳಪೆ ಆಹಾರ ಸರಬರಾಜು ಮಾಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಮುಂಬರುವ ದಿನಗಳಲ್ಲಿ ಗುಣಮಟ್ಟದ ಆಹಾರ ಪೂರೈಕೆ ಮಾಡಬೇಕು' ಎಂದು ಒತ್ತಾಯಿಸಿದರು.

## • ಶಿಕ್ಷಣದ ಸುಧಾರಣೆಗೆ ನಾನು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇನೆ, ಆದರೂ ಫಲಿತಾಂಶ ಕುಸಿಯುತ್ತಿದೆ

# ಶಿಕ್ಷಣ ಸುಧಾರಣೆಗೆ ಶಿಕ್ಷಕರು ಒತ್ತು ನೀಡಿ: ಶಾಸಕ ಪ್ರಭು ಬಿ. ಚವ್ಹಾಣ

• ಉದಯವಾಹಿನಿ, ಔರಾದ್

ಶಿಕ್ಷಣದ ಸುಧಾರಣೆಗೆ ನಾನು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಆದರೂ ಫಲಿತಾಂಶ ಕುಸಿಯುತ್ತಿದೆ. ಈ ಬಾರಿ ಎಲ್ಲ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬರುವ ನಿರೀಕ್ಷೆ ಹೊಂದಿದ್ದೇನೆ. ಉತ್ತಮ ಫಲಿತಾಂಶ ಕೊಡಿ ಇಲ್ಲವಾದರೆ ತಾವಾಗಿಯೇ ಕೆಲಸ ಬಿಟ್ಟು ಹೋಗಿ ಎಂದು ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಅಧಿಕಾರಿಗಳು ಮತ್ತು ಶಿಕ್ಷಕರಿಗೆ ಖಾರವಾಗಿ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯತ ಕಛೇರಿ ಸಭಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಜರುಗಿದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲಾ ಮುಖ್ಯಶಿಕ್ಷಕರ ಸಭೆ ಮತ್ತು ಶೈಕ್ಷಣಿಕ ಕಾರ್ಯಾಗಾರದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದ ಅವರು ಮಾತನಾಡಿದರು. ಶಿಕ್ಷಕರ ಮೇಲಿನ ಗೌರವದಿಂದಾಗಿ ಇಷ್ಟು ದಿನ ಸುಮ್ಮನಿದ್ದೆ. ಶಿಕ್ಷಕರು ಪ್ರತಿ ಬಾರಿ ಉತ್ತಮ ಫಲಿತಾಂಶ ಕೊಡುವುದಾಗಿ ಕೇವಲ ಆಶ್ವಾಸನೆಗಳನ್ನು ಮಾತ್ರ ನೀಡುತ್ತಾ ಬರುತ್ತಿದ್ದೀರಿ. ಆದರೆ ಫಲಿತಾಂಶ ಮಾತ್ರ ಸುಧಾರಿಸಿಲ್ಲ.

ಹಿಂದೆ ಶೇ.82 ಇದ್ದ ಫಲಿತಾಂಶ ಶೇ.55ಕ್ಕೆ ಕುಸಿದಿರುವುದು ಮುಜುಗರದ ಸಂಗತಿ. ಈ ಬಾರಿ ಯಾವುದೇ ಕಾರಣಕ್ಕೂ


ಉದಯವಾಹಿನಿ ಚಿತ್ರ

**ಅಧಿಕಾರಿಗಳಿಗೆ ತರಾಟೆ**

**ಗ್ರಾಮ ಸಂಚಾರದ ಸಂದರ್ಭದಲ್ಲಿ ಪ್ರತಿ ಶಾಲೆಗೆ ಭೇಟಿ ನೀಡಿ ಸಮಸ್ಯೆಗಳನ್ನು ಖುದ್ದಾಗಿ ವೀಕ್ಷಿಸಿದ್ದೇನೆ. ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರು ಇಲ್ಲದಿರುವುದು ಕಾಣಿಸಿದೆ. ಸರಿಪಡಿಸುವಂತೆ ಸಾಕಷ್ಟು ಬಾರಿ ಹೇಳಿದರೂ ಏನೂ ಮಾಡಿಲ್ಲವೆಂದು ಅಧಿಕಾರಿಗಳಿಗೆ ತೀವ್ರ ತರಾಟೆಗೆ ತೆಗೆದುಕೊಂಡರು. ಅಂತಹ ಸಮಸ್ಯೆಗಳನ್ನು ಸರಿಪಡಿಸಿರುವುದಾಗಿ ಬಿಇಓ ಮಾಹಿತಿ ನೀಡಿದರು.**

ಸುಮ್ಮನೆ ಬಿಡುವುದಿಲ್ಲ. ಅಗತ್ಯವೆನಿಸಿದರೆ ರಸ್ತೆಗಿಳಿದು ಪ್ರತಿಭಟನೆ ಮಾಡುವುದಕ್ಕೂ ಸಿದ್ದ. ಶಿಕ್ಷಣಕ್ಕಾಗಿ ಯಾವ ಮಟ್ಟಕ್ಕಾದರೂ ಇಳಿಯುತ್ತೇನೆ ಎಂದರು.

ಬಹುತೇಕ ಖಾಸಗಿ ಶಾಲೆಗಳಲ್ಲಿ ನುರಿತ ಶಿಕ್ಷಕರು ಇರುವುದಿಲ್ಲ. ಆದರೂ ಉತ್ತಮ ಫಲಿತಾಂಶ ಬರುತ್ತದೆ. ಸರ್ಕಾರಿ ಶಾಲೆಗಳಲ್ಲಿ ಎಲ್ಲರೂ ಅರ್ಹತೆ ಹೊಂದಿರುವ ಶಿಕ್ಷಕರೇ ಇದ್ದರೂ ಫಲಿತಾಂಶ ಬಾರದಿರುವುದು ಬೇಸರ ಮೂಡಿಸುತ್ತಿದೆ. ಎಲ್ಲಾ ಶಿಕ್ಷಕರು ಸಮಯಕ್ಕೆ ಸರಿಯಾಗಿ ಶಾಲೆಗೆ ಬರಬೇಕು. ವೇಳಾಪಟ್ಟಿಯಂತೆ ಪಾಠ ಮಾಡಬೇಕು.

**ಕಟ್ಟುನಿಟ್ಟಿನ ಸೂಚನೆ**

**ಶಾಲೆಗಳಿಗೆ ಕಟ್ಟಡ, ಕುಡಿಯುವ ನೀರು, ಶೌಚಾಲಯ, ಕಂಪೌಂಡ್‌ನಂತಹ ಸೌಕರ್ಯಗಳನ್ನು ಒದಗಿಸುವುದು ನನ್ನ ಜವಾಬ್ದಾರಿ. ಇಂತಹ ಬೇಡಿಕೆಗಳಿದ್ದರೆ ನನ್ನ ಬಳಿಗೆ ಬನ್ನಿ ಕಲ್ಪಿಸುತ್ತೇನೆ. ಗುಣಮಟ್ಟದ ಶಿಕ್ಷಣ, ಉತ್ತಮ ಫಲಿತಾಂಶ ಕೊಡುವುದು ನಿಮ್ಮ ಜವಾಬ್ದಾರಿ. ಯಾವುದೇ ರೀತಿಯ ಸಮಸ್ಯೆಯಿರಲಿ ನಾನು ನಿಮ್ಮ ಜೊತೆಗಿದ್ದೇನೆ. ಆದರೆ ನೀವು ಕರ್ತವ್ಯದಲ್ಲಿ ಯಾವುದೇ ರೀತಿಯ ಲೋಪವಾಗದಂತೆ ಕೆಲಸ ಮಾಡಬೇಕೆಂದು ಮುಖ್ಯ ಶಿಕ್ಷಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.**

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಬೇಕು ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಂತವಾಗಿದ್ದರೆ ನಡೆಯುವುದಿಲ್ಲ. ಪದೇ ಪದೇ ಗೈರಾಗುವವರು, ಸರಿಯಾಗಿ ಬೋಧನೆ ಮಾಡದ ಶಿಕ್ಷಕರ ವಿರುದ್ಧ ಯಾವುದೇ ಮುಲಾಜಿಲ್ಲದೇ ಶಿಸ್ತು ಕ್ರಮ ಜರುಗಿಸಬೇಕು. ಇಂಥವುಗಳು ನಡೆದರೆ ಎಲ್ಲರೂ ಎಚ್ಚರಿಕೆಯಿಂದ ಕೆಲಸ ಮಾಡುತ್ತಾರೆ. ತಾವು ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ತಮ್ಮ ಅಧಿನದಲ್ಲಿರುವ ಎಲ್ಲಾ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು.

ಕೆಲವು ಶಾಲೆಗಳಲ್ಲಿ 7, 8ನೇ ತರಗತಿಯ ಮಕ್ಕಳಿಗೆ ಸರಿಯಾಗಿ ಕನ್ನಡ ಓದಲು ಬರೆಯಲು ಬರುತ್ತಿಲ್ಲ. ಹೀಗಾದರೆ ಫಲಿತಾಂಶ ಸುಧಾರಣೆ ಹೇಗೆ ಸಾಧ್ಯ , ಕಲಿಕೆಯಲ್ಲಿ ತೀವ್ರ ಹಿಂದುಳಿದಿರುವ ಮಕ್ಕಳನ್ನು ಗುರುತಿಸಿ ಅವರಿಗೆ ವಿಶೇಷ ತರಗತಿ ನಡೆಸಿ ಕನಿಷ್ಠ ತೇರ್ಗಡೆಯಾಗುವಂತೆ ನೋಡಿಕೊಳ್ಳಬೇಕೆಂದು ತಿಳಿಸಿದರು.

**ಅಧಿಕಾರಿಗಳಿಗೆ ತೀವ್ರ ತರಾಟೆಗೆ**

ಇದೇ ವೇಳೆ ಶಾಸಕರು ಶಾಲಾವಾರು ಪ್ರಗತಿ ಪರಿಶೀಲನೆ ನಡೆಸಿ, ಶಾಲೆಯಲ್ಲಿರುವ ಸಮಸ್ಯೆಗಳನ್ನು ಆಲಿಸಿದರು. ಶೌಚಾಲಯ, ಕುಡಿಯುವ ನೀರು, ಆಟದ ಮೈದಾನ ಗ್ರಾಮ ಪಂಚಾಯಿತಿಯಿಂದ ಮಾಡಿಸಿಕೊಡುವಂತೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಜೆ ರಂಗೇಶ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಾಶ ಸೂರ್ಯವಂಶಿ, ಬಿಆರ್‌ಸಿ ಪ್ರಕಾಶ ರಾಠೋಡ್, ಬಿಸಿಯೂಟ ಅಧಿಕಾರಿ ಧೂಳಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪಂಢರಿ ಆಡೆ, ಕಸಾಪ ಅಧ್ಯಕ್ಷ ಬಾಲಾಜಿ ಅಮರವಾಡಿ, ಇತರರು ಉಪಸ್ಥಿತರಿದ್ದರು.

### ಆಕಾಶದಲ್ಲಿ ಇರಾನ್ – ಇಸ್ರೇಲ್ ಕ್ಷಿಪಣಿಗಳನ್ನು ನೋಡುತ್ತಾ ಎಂಜಾಯ್ ಮಾಡುವ ಆಫರ್ ನೀಡಿದ ಜೋರ್ಡಾನ್ ಕೆಫೆ ಮಾಲೀಕ


# ಜೋರ್ಡನ್ನರಿಗೆ ದಿನ ರಾತ್ರಿ ಆಕಾಶದಲ್ಲಿ ಕ್ಷಿಪಣಿಗಳ ದೀಪಾವಳಿ

**ಜೋರ್ಡನ್:** ಅತ್ತ ಇರಾನ್ ಹಾಗೂ ಇಸ್ರೇಲ್ ಪರಸ್ಪರರ ಮೇಲೆ ದಾಳಿ ಮಾಡಿಕೊಂಡು ತಮ್ಮ ದೇಶದ ನಾಗರಿಕರು ಪರದಾಡುವಂತೆ ಮಾಡಿವೆ. ಇಸ್ರೇಲ್ ಹಾಗೂ ಇರಾನ್ ನಾಗರಿಕರು ಇವತ್ತು ಇದ್ದೇವೆ? ನಾಳೆ ಇರ್ತೀವೋ ಇಲ್ಲವೋ ಎಂಬಂಥ ಭೀತಿಯಲ್ಲಿ ಜೀವನ ನಡೆಸುತ್ತಿದ್ದಾರೆ. ಹಗಲು ರಾತ್ರಿಯೆನ್ನದೆ ಕ್ಷಿಪಣಿಗಳು ಇತ್ತಿಂದತ್ತ, ಅತ್ತಿಂದಿತ್ತ ಮೇಲೆ ಆಕಾಶದಲ್ಲಿ ರೊಯ್ಯೆಂದು ಬೋರ್ಘರೆಯುತ್ತಿವೆ.

ಈ ಎರಡೂ ದೇಶಗಳ ನಡುವೆ ಇರುವ ಜೋರ್ಡಾನ್ ದೇಶದಲ್ಲಿರುವ ಜನರಿಗೆ ಆಕಾಶದಲ್ಲಿ ರಾಕೆಟ್ ಹಾರಿಸುತ್ತಿದ್ದಾರೇನೋ ಎಂಬಂಥ ಅನುಭವ ನೀಡುತ್ತಿದೆ. ಅಲ್ಲಿನ ಜನರು ರಾತ್ರಿಯಾಗುತ್ತಲೇ ಮನೆಗಳ ಮೇಲೇರಿ ಇರಾನ್ ನಿಂದ ಇಸ್ರೇಲ್ ನತ್ತ ಹಾಗೂ ಇಸ್ರೇಲ್ ನಿಂದ ಇರಾನ್ ನತ್ತ ಧೂಮಕೇತುಗಳಂತೆ ಹೋಗುವ ಕ್ಷಿಪಣಿಗಳನ್ನು ನೋಡುತ್ತಾ ಎಂಜಾಯ್ ಮಾಡುತ್ತಿದ್ದಾರೆ.

ಇದರ ನಡುವೆಯೇ, ಜೋರ್ಡಾನ್ ನ ಕೆಫೆ ಮಾಲೀಕನೊಬ್ಬ ಒಂದು ಐಡಿಯಾ ಓಡಿಸಿದ್ದಾನೆ. ಆತನ ಕೆಫೆ ಗಗನಚುಂಬಿ ಕಟ್ಟಡವೊಂದರ ಮೇಲೆ ಟೆರೆಸ್ ನಲ್ಲಿದೆ. ಆ ಟೆರೆಸ್ ನಲ್ಲಿ ಕುಳಿತು ಕಾಫಿ ಹಾಗೂ ಸ್ನ್ಯಾಕ್ಸ್ ಸವಿಯುತ್ತಾ ಇಸ್ರೇಲ್ – ಇರಾನ್ ನಡುವಿನ ಕ್ಷಿಪಣಿಗಳನ್ನು ನೋಡಿ ಆನಂದಿಸಿ ಎಂದು ತನ್ನ ಕೆಫೆಗೆ ಬರುವ ಗ್ರಾಹಕರಿಗೆ ಆಫರ್ ಕೊಟ್ಟಿದ್ದಾನೆ. ಅದರಿಂದ ಪುಳಕಿತರಾಗಿರುವ ಅನೇಕ ಜನರು ಈತನ ಕೆಫೆಯಲ್ಲಿ ರಾತ್ರಿ ವೇಳೆ ಡಿನ್ನರ್ ಕಂ ಕಾಫಿ ಹೀರಲು ದಾಂಗುಡಿಯಿಡುತ್ತಿದ್ದಾರೆ. ಅವರೆಲ್ಲರೂ ರಾತ್ರಿ ಆಕಾಶ ನೋಡುತ್ತಾ ಕ್ಷಿಪಣಿಗಳನ್ನು ಎಂಜಾಯ್ ಮಾಡುತ್ತಿರುವ ವೀಡಿಯೋವನ್ನು ಈ ಕೆಫೆಯ ಸಾಮಾಜಿಕ ಜಾಲತಾಣದಲ್ಲೇ ಹಂಚಿಕೊಳ್ಳಲಾಗಿದೆ.

ಈತನ ಇಂಥ ಕ್ರೇಜಿ ಐಡಿಯಾಕ್ಕೆ ಜನರು ಮಾರು ಹೋಗಿ, ವ್ಹಾವ್ ಎಂಥಾ ಬ್ಯುಸಿನೆಸ್ ಐಡಿಯಾ ರೀ ಇವನದ್ದು ಅಂತ ತಾರೀಫ್ ಮಾಡುತ್ತಿದ್ದರೆ, ಕೆಲವು ಪ್ರಜ್ಞಾವಂತರು, ತಮ್ಮದೇ ನೆರೆಯ 2 ದೇಶಗಳು ಹೊತ್ತಿ ಉರಿಯುತ್ತಿರುವಂಥ ಸಂದರ್ಭವನ್ನು ಕಮರ್ಷಿಯಲ್ ಆಗಿ ಆಲೋಚಿಸುತ್ತಿರುವುದು ಸರಿಯಲ್ಲ ಎಂಬ ಟೀಕೆಗಳೂ ಕೇಳಿಬಂದಿವೆ.



- ಜೋರ್ಡನ್‌ನ ಸಾಲ್ಟ್ ಸಿಟಿಯಲ್ಲಿರುವ ಕೆಫೆಯೊಂದರ ಮಾಲೀಕನ ಆಫರ್.
- ತನ್ನ ಟೆರೆಸ್ ಮೇಲೆ ಕುಳಿತು ಇಸ್ರೇಲ್, ಇರಾನ್ ಕ್ಷಿಪಣಿಗಳ ದಾಳಿ ನೋಡಿ ಎಂದು ಆಫರ್.
- ಇಸ್ರೇಲ್ – ಇರಾನ್ ನಡುವೆ ಇರುವ ಜೋರ್ಡನ್ನರಿಗೆ ದಿನ ರಾತ್ರಿ, ಆಕಾಶದಲ್ಲಿ ಕ್ಷಿಪಣಿಗಳ ದೀಪಾವಳಿ.

#### ಕದನ ವಿರಾಮದ ನಂತರದ ಸ್ಥಿತಿ ಹೇಗಿದೆ?

ಕದನ ವಿರಾಮದ ನಂತರ ಇಸ್ರೇಲ್ ಹಾಗೂ ಇರಾನ್ ನಲ್ಲಿ ಕೊಂಚ ಶಾಂತಿ ಮೂಡಿದೆ. ಇದು ಜೂ. 25ರ ಚಿತ್ರಣ. ಕ್ಷಿಪಣಿಗಳು ಬಿದ್ದಿದ್ದ ಜಾಗದಲ್ಲಿ ಕಟ್ಟಡಗಳ ಅವಶೇಷಗಳು ಕಾಣುತ್ತಿವೆ. ಎಲ್ಲೆಡೆ ಸ್ಮಶಾನ ಮೌನ. ಆದರೆ, ಇದೆಲ್ಲದರ ನಡುವೆ, ಜನರು ನೀರು, ಆಹಾರ, ವಿದ್ಯುತ್ ಇಲ್ಲದೆ ಪರಿತಪಿಸುತ್ತಿದ್ದಾರೆ. ಆಶ್ರಯಕ್ಕಾಗಿ ಅಲೆದಾಡುತ್ತಿದ್ದಾರೆ.

#### ಟ್ರಂಪ್ ಹೇಳಿಕೆಗೆ ಉಲ್ಟಾ ಹೊಡೆದ ಇರಾನ್

ಜೂ. 23–24ರಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇಸ್ರೇಲ್ – ಇರಾನ್ ನಡುವೆ ಕದನ ವಿರಾಮ ಏರ್ಪಟ್ಟಿದೆ ಎಂದು ಪದೇ ಪದೇ ಹೇಳುತ್ತಿದ್ದರೆ, ಅತ್ತ ಇರಾನ್ ಮಾತ್ರ ಇಲ್ಲ.. ಕದನ ವಿರಾಮ ಘೋಷಿಸಿಲ್ಲ ಎಂದು ಹೇಳುವ ಮೂಲಕ ಜೂ. 25ರಂದು ಬೆಳಗ್ಗೆ ಅಚ್ಚರಿ ಮೂಡಿಸಿತ್ತು. ಆದರೆ, ಸಂಜೆ ಹೊತ್ತಿಗೆ ಕದನ ವಿರಾಮ ಅಂತಿಮವಾಯಿತು.

#### ಇರಾನ್‌ನ 6 ವಾಯುನೆಲೆ ಮೇಲೆ ಇಸ್ರೇಲ್ ದಾಳಿ

ಇಸ್ರೇಲ್ – ಇರಾನ್ ನಡುವೆ ಕದನ ವಿರಾಮ ಏರ್ಪಟ್ಟಿದ್ದು ಇನ್ನೇನು ಮಧ್ಯಪ್ರಾಚ್ಯ ದೇಶಗಳಲ್ಲಿ ಶಾಂತಿಯ ವಾತಾವರಣ ಮೂಡುತ್ತದೆ ಎಂಬ ಭರವಸೆ ಮೂಡಿದ ಬೆನ್ನಲ್ಲೇ ಇಸ್ರೇಲ್ ಮತ್ತೆ ಇರಾನ್ ಮೇಲೆ ದಾಳಿ ನಡೆಸಿದೆ. ಅತ್ತ, ಇರಾನ್ ಸರ್ಕಾರ, ಇಸ್ರೇಲ್ ಮತ್ತೆ ಯುದ್ಧ ಆರಂಭಿಸಿದೆ ಎಂದು ಪ್ರಕಟಣೆ ನೀಡಿದ್ದಾರೆ. ಇದು ಮತ್ತೆ ಅಲ್ಲಿ ಉದ್ವಿಗ್ನತೆಗೆ ಕಾರಣವಾಗಿದೆ.

## ''ನನ್ನನ್ನ ಮುಟ್ಟಿದ್ರೆ ತುಂಡುತುಂಡಾಗಿ ಕತ್ತರಿಸ್ತೀನಿ'' ಫಸ್ಟ್ ನೈಟ್ ಮೂಡಲ್ಲಿದ್ದ ವರನಿಗೆ ಶಾಕ್ ಕೊಟ್ಟ ವಧು

**ಲಖ್ನೋ:** ನನ್ನನ್ನು ಮುಟ್ಟಿದರೆ ನೀನು 35 ತುಂಡುಗಳಾಗಿ ಕಾಣುವೆ. ನಾನು ಅಮನ್‌ಗೆ ಮಾತ್ರ ಸೇರಿದವಳು ಮದುವೆಯಾಗಿ ಮೊದಲ ದಿನ ತನ್ನ ಹೆಂಡತಿಯ ಜೊತೆ ಸುಖದ ಸುಪ್ಪತ್ತಿಗೆಯಲ್ಲಿ ತೇಲಬೇಕು ಎಂದು ಕೊಂಡಿದ್ದ ವರನಿಗೆ ವಧು ಹಾಕಿದ್ದ ಬೆದರಿಕೆ ಇದು. ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಕ್ಯಾಪ್ಟನ್ ನಿಶಾದ್ ಎಂಬುವವರು ಸಿತಾರ ಎಂಬ ವಧುವನ್ನು ವಿವಾಹವಾಗಿದ್ದರು.

ಮೊದಲ ರಾತ್ರಿಯ ಕನಸು ಕಂಡಿದ್ದ ಪತಿರಾಯನಿಗೆ ತನ್ನ ಪತ್ನಿಯಿಂದ ಇಂಥ ಸಿಡಿಲಿನ ಸುದ್ದಿ ಬರುತ್ತದೆ ಎಂದು ಕನಸುಮನಸಿನಲ್ಲೂ ಊಹೆ ಮಾಡಿರಲಿಲ್ಲ.ನನ್ನನ್ನು ಮುಟ್ಟಿದರೆ ನೀನು 35 ತುಂಡುಗಳಾಗಿ ಕಾಣುವೆ ಎಂದು ಎಚ್ಚರಿಸುತ್ತಾ ಕೋಣೆಯ ಒಂದು ಮೂಲೆಯಲ್ಲಿ ಮೌನವಾಗಿ ಕುಳಿತು, ಮುಸುಕಿನ ಕೆಳಗೆ ಹರಿತವಾದ ಚಾಕು ಹಿಡಿದಿದ್ದಳು. ಮದುವೆಯಾದ ಮೊದಲ ರಾತ್ರಿಯೇ ಹೀಗಾಯಿತಲ್ಲ ಎಂದು ತನ್ನ ವಿಧಿಯನ್ನು ಹಳಿಸುತ್ತ ತಲೆ ಮೇಲೆ ಕೈ ಹೊತ್ತು ಕುಳಿತಿದ್ದಾನೆ ನವವಿವಾಹಿತ.

ಪ್ರಯಾಗ್‌ರಾಜ್‌ನ ಎಡಿಎ ಕಾಲೋನಿ ಪ್ರದೇಶದ 26 ವರ್ಷದ ಯುವಕನನ್ನು ಸಿತಾರಳನ್ನು ಕೇವಲ ಒಂದು ದಿನ ಹಿಂದೆ ಮದುವೆಯಾಗಿದ್ದು, 35 ತುಂಡುಗಳಾಗಿ ಕತ್ತರಿಸುವುದಾಗಿ ಬೆದರಿಕೆ ಹಾಕಿದಾಗ ಅವನು ಆಘಾತಕ್ಕೊಳಗಾಗಿದ್ದನು. ನಂತರ ನಡೆದದ್ದು ಬೆದರಿಕೆಗಳು, ಭಯ ಮತ್ತು ಅವಮಾನಗಳಿಂದ ತುಂಬಿದ ಮೂರು ಭಯಾನಕ ರಾತ್ರಿಗಳು. ಮಧ್ಯ ರಾತ್ರಿಯಲ್ಲಿ ತನ್ನ ಜೀವ ಉಳಿದರೆ ಸಾಕು ಎಂದು ಕೋಣೆಯಿಂದ ತಪ್ಪಿಸಿಕೊಂಡು ಹೊರಬಂದಿದ್ದಾನೆ. ಕ್ಯಾಪ್ಟನ್ ನಿಶಾದ್ ಏಪ್ರಿಲ್ 29ರಂದು ಕರಾಚನಾ ದೀಹಾ ಗ್ರಾಮದ ಲಕ್ಷ್ಮಿ ನಾರಾಯಣ್ ನಿಶಾದ್ ಅವರ ಪುತ್ರಿ ಸಿತಾರಾ ಅವರನ್ನು ವಿವಾಹವಾದರು. ವಧು ಏಪ್ರಿಲ್ 30ರಂದು ತನ್ನ ಅತ್ತೆಯ ಮನೆಗೆ ಬಂದರು. ಮೇ 2ರಂದು ಅದ್ದೂರಿ ಆರತಕ್ಷತೆ ನಡೆಯಿತು.

ಆಚರಣೆಗಳನ್ನು ಆನಂದಿಸುತ್ತಿದ್ದ ಅತಿಥಿಗಳು ಮತ್ತು ಸಂಬಂಧಿಕರಿಗೆ ತಿಳಿಯದೆ, ದಂಪತಿಗಳು ಕೋಣೆಯೊಳಗೆ ಪ್ರವೇಶ ಮಾಡುತ್ತಿದ್ದಂತೆ ಅಲ್ಲಿ ನಡೆದಿದೇ ಬೇರೆ. ನಾನು ಕೋಣೆಗೆ ಪ್ರವೇಶಿಸಿದಾಗ, ಅವಳು ಸಂಪೂರ್ಣವಾಗಿ ಮುಸುಕು ಧರಿಸಿ, ಚಾಕು ಹಿಡಿದು ಸದ್ದಿಲ್ಲದೆ ಕುಳಿತಿದ್ದಳು. ಅವಳು ನನಗೆ ಸ್ಪಷ್ಟವಾಗಿ ಹೇಳಿದಳು. ನನ್ನನ್ನು ಮುಟ್ಟಬೇಡಿ. ನಾನು ಅಮನ್‌ನ ಆಸ್ತಿ. ನೀನು ಪ್ರಯತ್ನಿಸಿದರೆ, ನಾನು ನಿನ್ನನ್ನು 35 ತುಂಡುಗಳಾಗಿ ಕತ್ತರಿಸುತ್ತೇನೆ. ಆ ಇಡೀ ರಾತ್ರಿ, ಅವಳು ಚಾಕುವಿನಿಂದ ಹಾಸಿಗೆಯ ಮೇಲೆ ಇದ್ದಾಗ ನಾನು ಸೋಫಾದ ಮೇಲೆ ಕುಳಿತಿದ್ದೆ. ನನಗೆ ನಿದ್ದೆ ಮಾಡುವ ಧೈರ್ಯ ಬರಲಿಲ್ಲ ಎಂದು ಕ್ಯಾಪ್ಟನ್ ನಿಶಾದ್ ತನ್ನ ಮೊದಲ ರಾತ್ರಿಯ ಕಹಿ ಅನುಭವವನ್ನು ನೊಂದು ಹೇಳಿಕೊಂಡಿದ್ದಾರೆ.

ಮೇ 3ರಂದು, ಮಾನಸಿಕ ಒತ್ತಡವನ್ನು ಸಹಿಸಲಾಗದೆ ನಿಶಾದ್ ತನ್ನ ತಾಯಿಯೊಂದಿಗೆ ಎಲ್ಲವನ್ನೂ ಹಂಚಿಕೊಂಡಿದ್ದಾರೆ. ಸಿತಾರ ಮುಖಾಮುಖಿಯಾದಾಗ ಮನೆಯಲ್ಲಿ ಅವ್ಯವಸ್ಥೆ ಸಭುಗಿಲೆದ್ದಿತು. ಎಲ್ಲರಿಗೂ ಆಘಾತವಾಗುವಂತೆ, ಅವಳು ಹಿಂಜರಿಕೆಯಿಲ್ಲದೆ ಒಪ್ಪಿಕೊಂಡಳು. ನಾನು ಅಮನ್‌ನನ್ನು ಪ್ರೀತಿಸುತ್ತೇನೆ. ನಾನು ಬಲವಂತದಿಂದ ಮಾತ್ರ ಮದುವೆಯಾಗಿದ್ದೆ. ನಾನು ಅವನೊಂದಿಗೆ ವಾಸಿಸಲು ಬಯಸುತ್ತೇನೆ ಅವನಿಗೆ ಮಾತ್ರ ನನ್ನೊಂದಿಗೆ ಮದುವೆಯ ರಾತ್ರಿ ಕಳೆಯುವ ಹಕ್ಕಿದೆ ಎಂದು ಅಳುಕಿಲ್ಲದೆ ಹೇಳಿದ್ದಾಳೆ.



> ಅವಳು ಮಧ್ಯರಾತ್ರಿಯ ನಂತರವೇ ಮಲಗುತ್ತಿದ್ದಳು. ಅವಳು ನನ್ನ ನಿದ್ರೆಯಲ್ಲಿ ನನ್ನನ್ನು ಇರಿದು ಹಾಕಬಹುದೆಂಬ ಭಯದಿಂದ ನಾನು ಎಚ್ಚರವಾಗಿದ್ದೆ. ಅಂತಹ ಪ್ರಕರಣಗಳ ಬಗ್ಗೆ ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ನಾನು ಮತ್ತೊಂದು ಸುದ್ದಿಯಾಗಬಹುದೆಂದು ಭಾವಿಸಿದ್ದೆ. –ವರ

## ತುರ್ತು ಪರಿಸ್ಥಿತಿ ಕಾಂಗ್ರೆಸ್ ಪಕ್ಷದ ಪ್ರಜಾಪ್ರಭುತ್ವ ವಿರೋಧಿ ಮನಸ್ಥಿತಿಗೆ ಸಾಕ್ಷಿ: ಅಮಿತ್ ಶಾ

**ನವದೆಹಲಿ:** ತುರ್ತು ಪರಿಸ್ಥಿತಿಯು ರಾಷ್ಟ್ರೀಯ ಅವಶ್ಯಕತೆಯಲ್ಲ, ಬದಲಾಗಿ ಕಾಂಗ್ರೆಸ್‌ನ ಪ್ರಜಾಪ್ರಭುತ್ವ ವಿರೋಧಿ ಮನಸ್ಥಿತಿಯ ಪ್ರತಿಬಿಂಬ ಮತ್ತು ಕೇವಲ ಒಬ್ಬ ವ್ಯಕ್ತಿ (ಇದು ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ಉಲ್ಲೇಖವಾಗಿದೆ) ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.


ಜೂನ್ 25, 1975 ರಂದು ಇಂದಿರಾ ಗಾಂಧಿ ಸರ್ಕಾರ ತುರ್ತು ಪರಿಸ್ಥಿತಿ ಹೇರಿದ ನಂತರ ಅದರಿಂದ ತೊಂದರೆಗೀಡಾದವರಿಗೆ ಗೌರವ ಸಲ್ಲಿಸಿದ ಶಾ, ಅಧಿಕಾರದಲ್ಲಿರುವವರು ಸರ್ವಾಧಿಕಾರಿಯಾದಾಗ, ಜನರು ಅವರನ್ನು ಉರುಳಿಸುವ ಅಧಿಕಾರವನ್ನು ಹೊಂದಿದ್ದಾರೆ ಎಂಬುದನ್ನು ಈ ದಿನ ಎಲ್ಲರಿಗೂ ನೆನಪಿಸುತ್ತದೆ ಎಂದು ಹೇಳಿದರು.

ತುರ್ತು ಪರಿಸ್ಥಿತಿಯು ಕಾಂಗ್ರೆಸ್‌ನ ಅಧಿಕಾರದ ಹಸಿವಿನ ಅನ್ಯಾಯದ ಯುಗ ಎಂದು ಗೃಹ ಸಚಿವರು ಹೇಳಿದರು. ಮೋದಿ ಸರ್ಕಾರ ಈ ದಿನವನ್ನು ಸಂವಿಧಾನ ಹತ್ಯಾ ದಿವಸ್ ಎಂದು ಆಚರಿಸುತ್ತದೆ, ಇದರಿಂದಾಗಿ ಹೊಸ ಪೀಳಿಗೆಗೆ ತುರ್ತು ಪರಿಸ್ಥಿತಿಯ ಸಮಯದಲ್ಲಿ ದೇಶವಾಸಿಗಳು ಎದುರಿಸಿದ ನೋವು ಮತ್ತು ಹಿಂಸೆಯ ಬಗ್ಗೆ ಅರಿವು ಮೂಡಿಸಲಾಗುತ್ತದೆ ಎಂದು ಅವರು ಹೇಳಿದರು.

ಅಧಿಕಾರ ಸರ್ವಾಧಿಕಾರಿಯಾದಾಗ, ಜನರು ಅದನ್ನು ಉರುಳಿಸುವ ಅಧಿಕಾರವನ್ನು ಹೊಂದಿದ್ದಾರೆ ಎಂದು ಈ ದಿನ ನಮಗೆ ಹೇಳುತ್ತದೆ ಎಂದು ಅವರು ಎಕ್ಸ್‌ನಲ್ಲಿ ಹಿಂದಿಯಲ್ಲಿ ಬರೆದಿದ್ದಾರೆ. ತುರ್ತು ಪರಿಸ್ಥಿತಿಯು ರಾಷ್ಟ್ರೀಯ ಅಗತ್ಯವಲ್ಲ, ಆದರೆ ಕಾಂಗ್ರೆಸ್ ಮತ್ತು ಒಬ್ಬ ವ್ಯಕ್ತಿಯ ಪ್ರಜಾಪ್ರಭುತ್ವ ವಿರೋಧಿ ಮನಸ್ಥಿತಿಯ ಪ್ರತಿಬಿಂಬವಾಗಿತ್ತು ಎಂದು ಸಚಿವರು ಹೇಳಿದರು. ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಯಿತು. ನ್ಯಾಯಾಂಗದ ಕೈಗಳನ್ನು ಕಟ್ಟಲಾಯಿತು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಜೈಲಿಗೆ ಹಾಕಲಾಯಿತು ಎಂದು ಅವರು ಹೇಳಿದರು. ದೇಶವಾಸಿಗಳು ಸಿಂಹಸನ್ ಖಾಲಿ ಕರೋ ಎಂಬ ಘೋಷಣೆಯನ್ನು ಎತ್ತಿದರು ಮತ್ತು ಸರ್ವಾಧಿಕಾರಿ ಕಾಂಗ್ರೆಸ್ ಅನ್ನು ಬೇರುಸಹಿತ ಕಿತ್ತುಹಾಕಿದರು. ಈ ಹೋರಾಟದಲ್ಲಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ಎಲ್ಲಾ ವೀರರಿಗೆ ಹೃತ್ಪೂರ್ವಕ ಗೌರವ ಎಂದು ಅವರು ಹೇಳಿದರು.

ಈ ಅವಧಿಯಲ್ಲಿ ಅಮಾನವೀಯ ನೋವು ಅನುಭವಿಸಿದವರ ಬೃಹತ್ ಕೊಡುಗೆಗಳನ್ನು ಸ್ಮರಿಸಲು ಸಂವಿಧಾನ ಹತ್ಯಾ ದಿವಸ್ ಆಚರಣೆಯು ಪ್ರತಿಯೊಬ್ಬ ಭಾರತೀಯನಲ್ಲೂ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ರಕ್ಷಣೆಯ ಶಾಶ್ವತ ಜ್ವಾಲೆಯನ್ನು ಜೀವಂತವಾಗಿಡಲು ಸಹಾಯ ಮಾಡುತ್ತದೆ ಮತ್ತು ಹೀಗಾಗಿ ಕಾಂಗ್ರೆಸ್‌ನಂತಹ ಸರ್ವಾಧಿಕಾರಿ ಶಕ್ತಿಗಳು ಆ ಭಯಾನಕತೆಗಳನ್ನು ಪುನರಾವರ್ತಿಸುವುದನ್ನು ತಡೆಯುತ್ತದೆ ಎಂದು ಅವರು ಹೇಳಿದರು.

**ಹಸಿವಿನ ಅನ್ಯಾಯದ ಯುಗ**



## ಜೂ.25ರಂದು ಕಾಂಗ್ರೆಸ್ಸಿಗರು ಪಶ್ಚಾತಾಪ ಪಡಬೇಕು

**ಗ್ವಾಲಿಯರ್:** ಐವತ್ತು ವರ್ಷಗಳ ಹಿಂದೆ ಇದೇ ದಿನದಂದು ಪಕ್ಷದ ಆಳ್ವಿಕೆಯಲ್ಲಿ ತುರ್ತು ಪರಿಸ್ಥಿತಿ ಹೇರಿದ್ದನ್ನು ನೆನಪಿಸಿಕೊಂಡ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು. ಪ್ರತಿ ವರ್ಷ ಜೂನ್ 25 ರಂದು ಕಾಂಗ್ರೆಸ್ ನಾಯಕರು ಪಶ್ಚಾತ್ತಾಪ ಪಡಬೇಕು ಎಂದು ಹೇಳಿದ್ದಾರೆ. ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರನ್ನು ಟೀಕಿಸಿದ ಸಿಂಧಿಯಾ. ಸಂವಿಧಾನದ ಪ್ರತಿಯೊಂದಿಗೆ ಸುತ್ತಲೂ ತಿರುಗಾಡುವುದರಿಂದ ಏನನ್ನೂ ಸಾಧಿಸಲಾಗುವುದಿಲ್ಲ ಎಂದು ಕಾಲೆಳೆದಿದ್ದಾರೆ.



ಮಧ್ಯಪ್ರದೇಶ ಹೈಕೋರ್ಟ್‌ನ ಗ್ವಾಲಿಯರ್ ಪೀಠದ ಆವರಣದಲ್ಲಿ ಸಂವಿಧಾನದ ಮುಖ್ಯ ಶಿಲ್ಪಿ ಅಂಬೇಡ್ಕರ್ ಅವರ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ಕೋರಿ ಪಕ್ಷದ ನಾಯಕರು ಪ್ರತಿಭಟನೆ ನಡೆಸಿದ ಒಂದು ದಿನದ ನಂತರ, ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೇಲೆ ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ ಎಂದು ಅವರು ಆರೋಪಿಸಿದರು.

ಗ್ರ್ಯಾಂಡ್ ಓಲ್ಡ್ ಪಾರ್ಟಿ ಅಂಬೇಡ್ಕರ್ ವಿರುದ್ಧ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ಚುನಾವಣೆಯಲ್ಲಿ ಅವರನ್ನು ಸೋಲಿಸಿದೆ ಎಂದು ಸಚಿವರು ಹೇಳಿದರು.ಜೂನ್ 25, 1975 ರಂದು ಬಾಬಾಸಾಹೇಬರ ಸಂವಿಧಾನವನ್ನು ಕರಾಳ ಅಧ್ಯಾಯವನ್ನಾಗಿ ತುಳಿದ ರಾಜಕೀಯ ಪಕ್ಷವು ಈಗ ಸಂವಿಧಾನದ ಬಗ್ಗೆ ಮಾತನಾಡುತ್ತಿದೆ. ಸಂವಿಧಾನದ ಪ್ರತಿಯನ್ನು ಕೈಯಲ್ಲಿ ಹಿಡಿದುಕೊಂಡು ಓಡಾಡುವುದರಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಸಂವಿಧಾನವನ್ನು ಆತ್ಮದಲ್ಲಿ ಜೀವಂತವಾಗಿಡಬೇಕು ಎಂದು ಸಿಂಧಿಯಾ ಸುದ್ದಿಗಾರರಿಗೆ ತಿಳಿಸಿದರು.

ಪ್ರತಿ ವರ್ಷ ಜೂನ್ 25 ರಂದು ಕಾಂಗ್ರೆಸ್ ಮತ್ತು ಅದರ ನಾಯಕರು ಪಶ್ಚಾತ್ತಾಪ ಪಡಬೇಕು ಎಂದು ಬಿಜೆಪಿ ಸಂಸದರು ಹೇಳಿದರು.

## ಕರಾಳ ತುರ್ತು ಪರಿಸ್ಥಿತಿಯನ್ನು ಭಾರತೀಯ ಎಂದಿಗೂ ಮರೆಯುವುದಿಲ್ಲ: ಮೋದಿ

**ನವದೆಹಲಿ:** ತುರ್ತು ಪರಿಸ್ಥಿತಿಯ ಸಮಯದಲ್ಲಿ ಸಂವಿಧಾನದ ಚೈತನ್ಯವನ್ನು ಉಲ್ಲಂಘಿಸಿದ ರೀತಿಯನ್ನು ಯಾವುದೇ ಭಾರತೀಯ ಎಂದಿಗೂ ಮರೆಯುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಸಾಂವಿಧಾನಿಕ ತತ್ವಗಳನ್ನು ಬಲಪಡಿಸುವ ತಮ್ಮ ಸರ್ಕಾರದ ಬದ್ಧತೆಯನ್ನು ಅವರು ದೃಢಪಡಿಸಿ ದರು. ತುರ್ತು ಪರಿಸ್ಥಿತಿಯ 50 ನೇ ವರ್ಷಾಚರಣೆಕುರಿತು ಎಕ್ಸ್‌ನಲ್ಲಿ ಸರಣಿ ಪೋಸ್ಟ್‌ಗಳಲ್ಲಿ,ಇದು ಭಾರತದ ಪ್ರಜಾಪ್ರಭುತ್ವ ಇತಿಹಾಸದ ಅತ್ಯಂತ ಕರಾಳ ಅಧ್ಯಾಯಗಳಲ್ಲಿ ಒಂದಾಗಿದೆ ಎಂದು ಮೋದಿ ಹೇಳಿದರು.

ಸಂವಿಧಾನದಲ್ಲಿ ಪ್ರತಿಪಾದಿಸಲಾದ ಮೌಲ್ಯಗಳನ್ನು ಬದಿಗಿಡಲಾಯಿತು, ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿ ಸಲಾಯಿತು, ಪತ್ರಿಕಾ ಸ್ವಾತಂತ್ರ್ಯವನ್ನು ಅಳಿಸಿಹಾಕಲಾಯಿತು ಮತ್ತು ಹೆಚ್ಚಿನ ಸಂಖ್ಯೆಯ ರಾಜಕೀಯ ನಾಯಕರು, ಸಾಮಾಜಿಕ ಕಾರ್ಯಕರ್ತರು, ವಿದ್ಯಾರ್ಥಿಗಳು ಮತ್ತು ಸಾಮಾನ್ಯ ನಾಗರಿಕರನ್ನು ಜೈಲಿಗೆ ಹಾಕಲಾಯಿತು ಎಂದು ಅವರು ಗಮನಿಸಿದರು.ಆ ಸಮಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರವು ಪ್ರಜಾಪ್ರಭುತ್ವವನ್ನು ಬಂಧನದಲ್ಲಿಟ್ಟಂತೆ ಇತ್ತು ಎಂದು ಪ್ರಧಾನಿ ಹೇಳಿದರು.ಕಳೆದ ವರ್ಷ ತುರ್ತು ಪರಿಸ್ಥಿತಿ ವಾರ್ಷಿಕೋತ್ಸವವನ್ನು ಸಂವಿಧಾನ ಹತ್ಯೆ ದಿವಸ್ ಎಂದು ಆಚರಿಸಲಾಗುವುದು ಎಂದು ಮೋದಿ ಸರ್ಕಾರ ಘೋಷಿಸಿತ್ತು.

ಸಂವಿಧಾನದಲ್ಲಿ ವ್ಯಾಪಕ ಬದಲಾವಣೆಗಳನ್ನು ಮಾಡಿದ ಮತ್ತು ಜನತಾ ಪಕ್ಷದ ಸರ್ಕಾರವು ಅದನ್ನು ರದ್ದುಗೊಳಿಸಿದ 42 ನೇ ತಿದ್ದುಪಡಿಯು ತುರ್ತು ಪರಿಸ್ಥಿತಿಯನ್ನು ವಿಧಿಸಿದ ಕಾಂಗ್ರೆಸ್ ಸರ್ಕಾರದ ಕುತಂತ್ರಗಳಿಗೆ ಒಂದು ಪ್ರಮುಖ ಉದಾಹರಣೆಯಾಗಿದೆ ಎಂದು ಅವರು ಹೇಳಿದರು.



> ಬಡವರು, ಅಂಚಿನಲ್ಲಿರುವವರು ಮತ್ತು ತುಳಿತಕ್ಕೊಳಗಾದವರನ್ನು ವಿಶೇಷವಾಗಿ ಗುರಿಯಾಗಿಸಲಾಗಿದೆ, ಅವರ ಘನತೆಗೆ ಅವಮಾನ ಸೇರಿದಂತೆ.ನಮ್ಮ ಸಂವಿಧಾನದಲ್ಲಿನ ತತ್ವಗಳನ್ನು ಬಲಪಡಿಸುವ ಮತ್ತು ವಿಕಸಿತ್ ಭಾರತದ ನಮ್ಮ ದೃಷ್ಟಿಕೋನವನ್ನು ಸಾಕಾರಗೊಳಿಸಲು ಒಟ್ಟಾಗಿ ಕೆಲಸ ಮಾಡುವ ನಮ್ಮ ಬದ್ಧತೆಯನ್ನು ನಾವು ಪುನರುಚ್ಚರಿಸುತ್ತೇವೆ. ನಾವು ಪ್ರಗತಿಯ ಹೊಸ ಎತ್ತರವನ್ನು ಏರೋಣ ಮತ್ತು ಬಡವರು ಮತ್ತು ದೀನದಲಿತರ ಕನಸುಗಳನ್ನು ನನಸಾಗಿಸೋಣ
> –ಪ್ರಧಾನಿ ಮೋದಿ

## ಇ-ಕಾಮರ್ಸ್ ವ್ಯವಸ್ಥೆ ಸಾಮಾಜಿಕ ಬಂಧಗಳನ್ನು ದುರ್ಬಲಗೊಳಿಸುತ್ತಿದೆ

**ಮುಂಬೈ:** ಇ-ಕಾಮರ್ಸ್ ಮತ್ತು ಮಾರುಕಟ್ಟೆ ಆಧಾರಿತ ಜೀವನಶೈಲಿಯು ಸಾಮಾಜಿಕ ಬಂಧಗಳನ್ನು ದುರ್ಬಲಗೊಳಿಸುತ್ತಿದೆ ಮತ್ತು ಮಾನವ ಸಂಬಂಧಗಳ ಮೂಲಭೂತ. ಅಂಶಗಳನ್ನು ಬದಲಾಯಿಸುತ್ತಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.

ಭಾರತವು ಎಂದಿಗೂ ಸ್ವತಂತ್ರ ಚಿಂತನೆಗೆ ಅಡ್ಡಿಯಾಗುವ ಕಠಿಣ ಸಿದ್ಧಾಂತಗಳ ಭೂಮಿಯಾಗಿರಲಿಲ್ಲ. ಭಾರತ ಎಂದಿಗೂ ತನಗಾಗಿ ಮಾತ್ರ ಬದುಕಿಲ್ಲ. ಅದು ಯಾವಾಗಲೂ ಪ್ರಪಂಚದ ಯೋಗಕ್ಷೇಮಕ್ಕಾಗಿ ಅಸ್ತಿತ್ವದಲ್ಲಿದೆ ಎಂದು ಹೊಸಬಾಳೆ ಹೇಳಿದರು.

**ಐಸಿಎಸ್‌ಐ ಪ್ರಕಟಿಸಿದ ಅಶೋಕ್ ಮೋಡಕ್ ಅವರ ಇಂಟಿಗ್ರಲ್ ಹೂಮನಿಸಂ:** ಎ ಡಿಸ್ಟಿಂಕ್ಟ್ ಪ್ಯಾರಡೈಮ್ ಆಫ್ ಡೆವಲಪ್‌ಮೆಂಟ್ ಪುಸ್ತಕದ ಕುರಿತು ನಡೆದ ಚರ್ಚೆಯಲ್ಲಿ ಅವರು ಮಾತನಾಡುತ್ತಿದ್ದರು. ಮಾರುಕಟ್ಟೆ ಆಧಾರಿತ, ಸರ್ಕಾರಿ–ಆಧಾರಿತ ಜೀವನವು ಸಮಾಜಕ್ಕೆ ಹಾನಿಕಾರಕವಾಗಿದೆ. ಇ-ಕಾಮರ್ಸ್ ಒಂದು ಸ್ಪಷ್ಟ ಉದಾಹರಣೆಯಾಗಿದೆ. ಇದು ಸಂಬಂಧಗಳನ್ನು ಕೇವಲ ವಹಿವಾಟುಗಳಿಗೆ ಇಳಿಸಿದೆ ಎಂದು ಆರ್‌ಎಸ್‌ಎಸ್ ನಾಯಕ ಹೇಳಿದರು. ಮೋಡಕ್ ಅವರ ಪುಸ್ತಕವನ್ನು ತಮಿಳುನಾಡಿನ ಹಳ್ಳಿಯಲ್ಲಿ ಪಡೆಯಲು ಬಯಸಿದರೆ, ನಾನು ಅದನ್ನು ಆನ್‌ಲೈನ್‌ನಲ್ಲಿ ಸುಲಭವಾಗಿ ಆರ್ಡರ್ ಮಾಡಬಹುದು. ಇದು ಅನುಕೂಲಕರವೆಂದು ತೋರುತ್ತದೆ. ನಾನು ಪಾವತಿಸುತ್ತೇನೆ ಮತ್ತು ಅವರು ತಲುಪಿಸುತ್ತಾರೆ. ಆದರೆ ಅದು ನಿಜವಾಗಿಯೂ ಸರಳವೇ ಸಾಂಪ್ರದಾಯಿಕ ಮಾರುಕಟ್ಟೆಗಳು ದೀರ್ಘಕಾಲದ ಸಂಬಂಧಗಳಲ್ಲಿ ಬೇರೂರಿದ್ದವು. ಒಬ್ಬ ರೈತ ತನ್ನನ್ನು ಮತ್ತು ಅವನ ಕುಟುಂಬವನ್ನು ವರ್ಷಗಳಿಂದ ತಿಳಿದಿರುವ ವ್ಯಾಪಾರಿಯಿಂದ ಸಾಲ ಪಡೆಯುತ್ತಾನೆ.

ಅಮೆಜಾನ್ ಆ ರೀತಿಯ ನಂಬಿಕೆಯನ್ನು ಅರ್ಥಮಾಡಿಕೊಳ್ಳುತ್ತದೆಯೇ ಅಥವಾ ಪುನರಾವರ್ತಿಸುತ್ತದೆಯೇ ಅದು ಮುಖರಹಿತವಾಗಿದೆ. ಅಂತಹ ಮಾನವ ಸಂಪರ್ಕಗಳ ಸಾರವನ್ನು ನಾವು ನಿಧಾನವಾಗಿ ಕಳೆದುಕೊಳ್ಳುತ್ತಿದ್ದೇವೆ ಎಂದು ಅವರು ಹೇಳಿದರು.

ಯುನೈಟೆಡ್ ಸ್ಟೇಟ್ಸ್ ನಲ್ಲಿ ಸಮಾಜವು ಪ್ರಾಯೋಗಿಕವಾಗಿ ಕಣ್ಮರೆಯಾಗಿದೆ ಎಂದು ಹೊಸಬಾಳೆ ಹೇಳಿಕೊಂಡರು, ಆ ದೇಶದಲ್ಲಿ ವ್ಯಕ್ತಿಗಳು ಮತ್ತು ರಾಜ್ಯ ಮಾತ್ರ ಉಳಿದಿದೆ ಎಂದು ಹೇಳಿದರು. ಕಲ್ಯಾಣ ಸರ್ಕಾರ ಮತ್ತು ಮಾರುಕಟ್ಟೆ ಕೇಂದ್ರಿತ ಜೀವನದ ಈ ಮಾದರಿ ಆರೋಗ್ಯಕರ ಸಮಾಜಕ್ಕೆ ಸಮರ್ಥನೀಯವಲ್ಲ ಎಂದು ಆರ್‌ಎಸ್‌ಎಸ್ ನಾಯಕ ಹೇಳಿದರು. ಅವರು ಆಧುನಿಕ ಜಗತ್ತಿನ ಪ್ರಕೃತಿ ಮತ್ತು ಜೀವನಶೈಲಿಯ ವಿಧಾನದ ಬಗ್ಗೆಯೂ ಕಳವಳ ವ್ಯಕ್ತಪಡಿಸಿದರು.

**ಜೀವನ ಶೈಲಿಯ ವಿಧಾನದ ಬಗ್ಗೆ ಕಳವಳ**



> ನಾವು ವಿದ್ಯುತ್ ಇಲ್ಲದೆ ಬದುಕಲು ಸಾಧ್ಯವಿಲ್ಲ, ಆದರೆ ಅದನ್ನು ಪರಿಣಾಮಕಾರಿಯಾಗಿ ಉತ್ಪಾದಿಸುವುದು ಮತ್ತು ಪರಿಸರವನ್ನು ಗೌರವಿಸುವ ರೀತಿಯಲ್ಲಿ ಅದನ್ನು ನಮ್ಮ ಜೀವನದಲ್ಲಿ ಸಂಯೋಜಿಸುವುದು ಹೇಗೆ ಎಂಬುದರ ಕುರಿತು ನಾವು ಯೋಚಿಸಬೇಕು –ಹೊಸಬಾಳೆ

### • ಅಮೆರಿಕಾದ ಬಿ2 ಬಾಂಬರ್ ಮೂಲಕ ಪರಮಾಣು ಕಾರ್ಯಕ್ರಮಗಳ ಮೇಲೆ ದಾಳಿ

# ಇರಾನ್ ಮೇಲೆ ದಾಳಿ: ಟ್ರಂಪ್‌ಗೆ ತೀವ್ರ ಮುಜುಗರ ತಂದ ಗುಪ್ತಚರ ವರದಿ

**ವಾಷಿಂಗ್ಟನ್ :** ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದ ವೇಳೆ ಮಧ್ಯ ಪ್ರವೇಶಿಸಬೇಕೋ ಬೇಡವೋ ಎನ್ನುವುದನ್ನು ಎರಡು ವಾರದೊಳಗೆ ನಿರ್ಧರಿಸುತ್ತೇವೆ ಎಂದು ಹೇಳಿದ್ದ ಅಮೆರಿಕಾ, ರಾತ್ರೋರಾತ್ರಿ, ಇರಾನ್ ದೇಶದ ಮೂರು ಪರಮಾಣು ಕೇಂದ್ರಗಳ ಮೇಲೆ ದಾಳಿಯನ್ನು ಮಾಡಿದ್ದವು. ಇದು, ಬಿಕ್ಕಟ್ಟು ಇನ್ನಷ್ಟು ಉಲ್ಬಣವಾಗಲು ಕಾರಣವಾಗಿತ್ತು.

ಅಮೆರಿಕಾ ಬಿಟ್ಟರೆ ವಿಶ್ವದ ಯಾವುದೇ ರಾಷ್ಟ್ರವು ಈ ಸಾಮರ್ಥ್ಯವನ್ನು ಪ್ರದರ್ಶಿಸಲು ಸಾಧ್ಯವಿಲ್ಲ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದರು. ಜೊತೆಗೆ, ಇರಾನ್ ಪರಮಾಣು ಕಾರ್ಯಕ್ರಮಕ್ಕೆ ಇದು ದೊಡ್ಡ ಹಿನ್ನಡೆ ಎಂದು ಹೇಳಿದ್ದರು. ಆದರೆ, ಗುಪ್ತಚರ ವರದಿಯೊಂದನ್ನು ಬಿಬಿಸಿ, ಸಿಎನ್‌ಎನ್ ಸುದ್ದಿಸಂಸ್ಥೆ ಬಹಿರಂಗಗೊಳಿಸಿದೆ. ಗುಪ್ತಚರ ವರದಿಯ ಪ್ರಕಾರ, ಇರಾನ್ ದೇಶದ ಪರಮಾಣು ಕಾರ್ಯಕ್ರಮಗಳ ಮೇಲೆ ಅಮೆರಿಕಾದ ದಾಳಿ ಸಂಪೂರ್ಣ ಯಶಸ್ವಿಯಾಗಿಲ್ಲ. ಆದರೆ, ಈ ವರದಿಯನ್ನು ಬುಲ್‌ಶಿಟ್ ಎಂದು ಡೊನಾಲ್ಡ್ ಟ್ರಂಪ್ ಟೀಕಿಸಿದ್ದಾರೆ. ಬಿ2 ಬಾಂಬರ್ ದಾಳಿ ನಡೆಸಿದ್ದರೂ, ಅದರ ತೀವ್ರತೆ ಇರಾನ್ ದೇಶಕ್ಕೆ ನಷ್ಟವಾಗುವಂತದಲ್ಲ ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಕದನ ವಿರಾಮಕ್ಕೆ ಒಪ್ಪಿಕೊಂಡ ಇರಾನ್ ದೇಶಕ್ಕೆ ಟ್ರಂಪ್ ಧನ್ಯವಾದ ತಿಳಿಸಿದ್ದರು. ಗುಪ್ತಚರ ವರದಿಯ ಪ್ರಕಾರ, ದಾಳಿ ನಡೆದಿದ್ದೇನೋ ಹೌದು, ಆದರೆ ಯಾವ ಉದ್ದೇಶಕ್ಕಾಗಿ ಅಮೆರಿಕಾ ದಾಳಿಯನ್ನು ನಡೆಸಿತ್ತೋ ಅದು ಕೈಗೂಡಿಲ್ಲ ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಇದು ಇರಾನ್ ದೇಶದ ಪರಮಾಣು ಕಾರ್ಯಕ್ರಮಕ್ಕೆ ತಕ್ಕಮಟ್ಟಿನ ಹಿನ್ನಡೆ ಮಾತ್ರ ಎಂದು ವರದಿಯಲ್ಲಿ ಹೇಳಲಾಗಿದೆ.


ಟ್ರಂಪ್ ಅವರ ಹೇಳಿಕೆಯನ್ನು ಗುಪ್ತಚರ ವರದಿ ಪ್ರಶ್ನಿಸುವಂತಾಗಿದೆ. ಅಮೆರಿಕಾದ ಪೆಂಟಗನ್ ಒಂದು ಗುಪ್ತಚರ ವರದಿಯನ್ನು ಸಿದ್ದಪಡಿಸಿದೆ. ಅದರ ಪ್ರಕಾರ, ಅಮೆರಿಕಾದ ಬಾಂಬ್ ದಾಳಿಯು ಇರಾನ್ ಪರಮಾಣು ಕಾರ್ಯಕ್ರಮವನ್ನು ಸಂಪೂರ್ಣವಾಗಿ ನಾಶ ಪಡಿಸಲಿಲ್ಲ. ಬದಲಿಗೆ, ಕೆಲವು ತಿಂಗಳು ಅದನ್ನು ವಿಳಂಬಗೊಳಿಸಲಾಗಿದೆ. ಇರಾನ್ ನಲ್ಲಿದ್ದ ಯುರೇನಿಯಂ ಸಂಗ್ರಹವನ್ನು ನಾಶ ಮಾಡವಲ್ಲೂ ಅಮೆರಿಕಾ ವೈಫಲ್ಯ ಕಂಡಿದೆ ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಇದೊಂದು ಸತ್ಯಕ್ಕೆ ದೂರವಾದ ಮಾಹಿತಿ ಎಂದು ಶ್ವೇತಭವನ ಈ ವರದಿಯನ್ನು ತಳ್ಳಿಹಾಕಿದೆ. ಇರಾನ್ ದೇಶದ ಪರಮಾಣು ಕೇಂದ್ರಗಳನ್ನು ಸಂಪೂರ್ಣವಾಗಿ ನಾಶ ಮಾಡಲಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊಚ್ಚಿಕೊಂಡಿದ್ದರು.

ಜಾಗತಿಕ ಇತಿಹಾಸದಲ್ಲೇ ಇದೊಂದು ಅತ್ಯಂತ ಯಶಸ್ವಿ ಕಾರ್ಯಾಚರಣೆ, ನಮ್ಮ ಸೇನೆ ಬಿಟ್ಟರೆ ಬೇರೆ ಯಾರೂ ಇಂತಹ ಸಾಹಸವನ್ನು ಮಾಡಲು ಸಾಧ್ಯವಿಲ್ಲ ಎಂದು ಟ್ರಂಪ್ ಹೇಳಿದ್ದರು. ಇದೊಂದು, ಡೆಡ್ಲಿ ಅಟ್ಯಾಕ್ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಗು ಕೂಡಾ ಹೇಳಿದ್ದರು.

ಅಮೆರಿಕಾದಲ್ಲಿ ಸುಮಾರು 18 ಗುಪ್ತಚರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಒಂದೊಂದು ಸಂಸ್ಥೆಗಳು ವರದಿಯನ್ನು ತಯಾರಿಸುವ ರೀತಿ ವಿಭಿನ್ನವಾಗಿರುತ್ತದೆ. ಹಾಗಾಗಿ, ಇದೊಂದು ಆಂಗಲ್ ನಲ್ಲಿ ಸಿದ್ದವಾದ ಗುಪ್ತಚರ ವರದಿಯಾಗಿರಬಹುದು ಎಂದು ರಕ್ಷಣಾ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಇರಾನ್ ದೇಶದ ಪೋರ್ಡೋ, ನಟಾನ್ಜ್ ಮತ್ತು ಇಸ್ಫಹಾನ್ ನಲ್ಲಿರುವ ಮೂರು ಅಣುಸ್ಥಾವರಗಳ ಮೇಲೆ ದಾಳಿಯನ್ನು ಅಮೆರಿಕ ಸೇನೆ ಮಾಡಿತು. ಇದಕ್ಕಾಗಿ, ಬಂಕರ್ ಬಸ್ಟರ್ ಬಾಂಬ್‌ಗಳನ್ನು ಬಳಸಲಾಗಿತ್ತು. ಇದು, ಸುಮಾರು 200 ಅಡಿ ಭೂಮಿಯನ್ನು ಭೇದಿಸುವ ಸಾಮರ್ಥ್ಯವನ್ನು ಹೊಂದಿದೆ.

- ಅಮೆರಿಕಾದ ಬಿ2 ಬಾಂಬರ್ ಮೂಲಕ ಪರಮಾಣು ಕಾರ್ಯಕ್ರಮಗಳ ಮೇಲೆ ದಾಳಿ
- ದಾಳಿ ಸಂಪೂರ್ಣ ಸಕ್ಸಸ್ ಎಂದಿದ್ದ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್
- ಗುಪ್ತಚರ ವರದಿಯ ಪ್ರಕಾರ, ದಾಳಿ ಸಂಪೂರ್ಣ ಯಶಸ್ವಿಯಾಗಲಿಲ್ಲ



**ಅಮೆರಿಕಾದ ದಾಳಿ ಕೈಗೂಡಿಲ್ಲ**

## ಮಿನಿ ನ್ಯೂಸ್

### ಜ್ವಾಲಮುಖಿ ನೋಡಲು ಹೋಗಿದ್ದ ಮಹಿಳಾ ಟ್ರೆಕ್ಕರ್ ಶವವಾಗಿ ಪತ್ತೆ

**ಜಕಾರ್ತ:** ಇಂಡೋನೇಷ್ಯಾದ ಸಕ್ರಿಯ ಜ್ವಾಲಾಮುಖಿಯ ಮೇಲೆ ಚಾರಣ ಮಾಡಲು ಹೋಗಿದ್ದ ಬ್ರೆಜಿಲಿಯನ್ ಮಹಿಳಾ ಟ್ರೆಕ್ಕರ್ ದುರಂತ ಸಾವಿಗೀಡಾಗಿದ್ದಾರೆ ಎಂದು ತಿಳಿದುಬಂದಿದೆ. ಇಂಡೋನೇಷ್ಯಾದ ಮೌಂಟ್ ರಿಂಜಾನಿಯಲ್ಲಿ ಚಾರಣ ಮಾಡುವಾಗ ಬ್ರೆಜಿಲ್ ಮೂಲದ ಮಹಿಳಾ ಟ್ರೆಕ್ಕರ್ ಜೂಲಿಯಾನ ಮರಿನ್ಸ್ ದುರಂತ ಸಾವಿಗೀಡಾಗಿದ್ದಾರೆ. ಟ್ರೆಕ್ಕಿಂಗ್ ವೇಳೆ ಜೂಲಿಯಾನ ಮರಿನ್ಸ್ ಎತ್ತರದ ಬಂಡೆಗಲ್ಲಿನಿಂದ ಕಾಲು ಜಾರಿ ಬಿದ್ದಿದ್ದರು.4 ದಿನಗಳಾದರೂ ಜೂಲಿಯಾನ ಮರಿನ್ಸ್ ಪತ್ತೆಯಾಗಿರಲಿಲ್ಲ. ಇದೀಗ ಅಧಿಕಾರಿಗಳು ಶೋಧ ನಡೆಸಿ ಜೂಲಿಯಾನ ಮರಿನ್ಸ್ ಮೃತದೇಹವನ್ನು ಪತ್ತೆ ಮಾಡಿದ್ದಾರೆ.

ಇಂಡೋನೇಷ್ಯಾದ ಅಧಿಕಾರಿಗಳ ಪ್ರಕಾರ, 26 ವರ್ಷದ ಟ್ರಾವೆಲ್ ವ್ಲಾಗರ್ ಜೂಲಿಯಾನ ಮರಿನ್ಸ್ ಸ್ನೇಹಿತರ ಗುಂಪಿನೊಂದಿಗೆ ಮೌಂಟ್ ರಿಂಜಾನಿಯಲ್ಲಿ ಚಾರಣ ಮಾಡುತ್ತಿದ್ದರು. ಈ ವೇಳೆ ಎತ್ತರದ ಬಂಡೆಯ ತುದಿಯಲ್ಲಿ ಕಾಲು ಜಾರಿ ಬಿದ್ದಿದ್ದರು.

### ಇಸ್ರೇಲ್‌ಗಾಗಿ ಬೇಹುಗಾರಿಕೆ: ಇರಾನ್‌ನಲ್ಲಿ 3 ಕೈದಿಗಳಿಗೆ ಗಲ್ಲು ಶಿಕ್ಷೆ

**ಯುನೈಟೆಡ್ ಎಮರೈಟ್ಸ್:** ಇಸ್ರೇಲ್ ಪರವಾಗಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದ ಮೇಲೆ ಇರಾನ್ ಇನ್ನೂ ಮೂವರು ಕೈದಿಗಳನ್ನು ಗಲ್ಲಿಗೇರಿಸಿದೆ ಎಂದು ಅದರ ಸರ್ಕಾರಿ ಸ್ವಾಮ್ಯದ ಐಆರ್‌ಎನ್‌ಎ ಸುದ್ದಿ ಸಂಸ್ಥೆ ವರದಿ ಮಾಡಿದೆ. ದೇಶದ ವಾಯುವ್ಯ ಪ್ರಾಂತ್ಯವಾದ ಇರಾನ್‌ನ ಪಶ್ಚಿಮ ಅಜೆರ್ಬೈಜಾನ್ ಪ್ರಾಂತ್ಯದ ಉರ್ಮಿಯಾ ಜೈಲಿನಲ್ಲಿ ಬೇಹುಗಾರರನ್ನು ಗಲ್ಲಿಗೇರಿಸಲಾಗಿದೆ. ಇರಾನ್‌ನ ನ್ಯಾಯಾಂಗವನ್ನು ಉಲ್ಲೇಖಿಸಿ ಐಆರ್‌ಎನ್‌ಎ, ಈ ಪುರುಷರು ದೇಶಕ್ಕೆ ಹತ್ಯಾ ಸಾಧನಗಳನ್ನು ತಂದ ಆರೋಪ ಹೊರಿಸಲಾಗಿದೆ ಎಂದು ಹೇಳಿದೆ.

ಇರಾನ್ ಇಸ್ರೇಲ್‌ನೊಂದಿಗಿನ ತನ್ನ ಯುದ್ಧದ ಸಮಯದಲ್ಲಿ ಹಲವರನ್ನು ಬೇಹುಗಾರಿಕೆ ಆರೋಪದಲ್ಲಿ ಗಲ್ಲಿಗೇರಿಸಿದೆ. ಸಂಘರ್ಷ ಮುಗಿದ ನಂತರ ಅದು ಮರಣದಂಡನೆಗಳ ಸಂಖ್ಯೆ ಇನ್ನಷ್ಟು ಹೆಚ್ಚಬಹುದೆಂಬ ಭಯ ಕಾರ್ಯಕರ್ತರಲ್ಲಿ ಮೂಡಿದೆ.

### ಫ್ರೆಂಚ್ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಕಾಸ್ಟಿಂಗ್ ಕಂಪನಿ ಮಾಲೀಕನ ಬಂಧನ

**ಉದಯಪುರ:** ಜಾಹೀರಾತು ಚಿತ್ರೀಕರಣಕ್ಕಾಗಿ ಉದಯಪುರಕ್ಕೆ ಬಂದಿದ್ದ ಫ್ರೆಂಚ್ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಚಿತ್ತೋರ್‌ಗಢದ 29 ವರ್ಷದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ. ಬಂಧಿತ ವ್ಯಕ್ತಿಯನ್ನು ಚಿತ್ತೋರ್‌ಗಢದ ಗ್ಯಾಂಗ್ರಾರ್ ನಿವಾಸಿ ಪುಷ್ಪರಾಜ್ ಅಲಿಯಾಸ್ ಸಿದ್ಧಾರ್ಥ್ ಓಜಾ ಎಂದು ಗುರುತಿಸಲಾಗಿದ್ದು, ಆರೋಪಿಯು ಕಾಸ್ಟಿಂಗ್ ಕಂಪನಿಯ ಮಾಲೀಕನಾಗಿದ್ದು, ಸಿನಿಮಾ, ಮ್ಯೂಸಿಕ್ ಆಲ್ಬಂ ಮತ್ತು ದೂರದರ್ಶನ ಧಾರಾವಾಹಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪುಷ್ಪರಾಜ್ ಅವರ ಕಂಪನಿಯು ಜೂನ್ 22 ರಂದು ಉದಯಪುರದ ವಿವಿಧ ಸ್ಥಳಗಳಲ್ಲಿ, ಲೇಕ್ ಪಿಚೋಲಾ, ಸಜ್ಜನ್‌ಗಢ ಕೋಟೆ ಮತ್ತು ಸ್ಥಳೀಯ ರೆಸ್ಟೋರೆಂಟ್‌ಗಳಲ್ಲಿ ನಡೆದ ಮೊಬೈಲ್ ಜಾಹೀರಾತು ಚಿತ್ರೀಕರಣಕ್ಕಾಗಿ ಮಹಿಳೆಯನ್ನು ನೇಮಿಸಿಕೊಂಡಿದೆ ಎಂದು ಉದಯಪುರ ಎಸ್‌ಪಿ ಯೋಗೇಶ್ ಗೋಯಲ್ ತಿಳಿಸಿದ್ದಾರೆ.

### ಅಭಿನಂದನ್ ವರ್ಧಮಾನ್ ಸೆರೆಹಿಡಿದಿದ್ದವ ಎನ್‌ಕೌಂಟರ್‌ನಲ್ಲಿ ಹತ್ಯೆ

**ನವದೆಹಲಿ:** ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ್ ಅವರನ್ನು ಸೆರೆಹಿಡಿದಿರುವುದಾಗಿ ಹೇಳಿಕೊಂಡಿದ್ದ ಪಾಕಿಸ್ತಾನ ಸೇನಾ ಮೇಜರ್‌ನನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ. 2019 ರ ಬಾಲಕೋಟ್ ವೈಮಾನಿಕ ದಾಳಿಯ ನಂತರ ದಕ್ಷಿಣ ವಾಜಿರಿಸ್ತಾನ್ ಪ್ರದೇಶದಲ್ಲಿ ತೆಹ್ರೀಕ್–ಇ–ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಜೊತೆಗಿನ ಎನ್ಕೌಂಟರ್‌ನಲ್ಲಿ ಪಾಕ್ ಸೇನೆಯ ಮೇಜರ್ ಮೊಯಿಜ್ ಅಬ್ಬಾಸ್ ಶಾ (37) ಹತ್ಯೆಯಾಗಿದೆ.

ಚಕ್ವಾಲ್ ಮೂಲದ ಮತ್ತು ಸೇನೆಯ ಗಣ್ಯ ವಿಶೇಷ ಸೇವಾ ಗುಂಪಿನ ಸದಸ್ಯನಾಗಿದ್ದ ಅಬ್ಬಾಸ್, ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಯ ನೇತೃತ್ವ ವಹಿಸುವಾಗ ಸಾವನ್ನಪ್ಪಿದ್ದಾನೆ. ಗುಂಡಿನ ಚಕಮಕಿಯಲ್ಲಿ ಮತ್ತೊಬ್ಬ ಸೈನಿಕ ಲ್ಯಾನ್ಸ್ ನಾಯಕ್ ಜಿಬ್ರಾನುಲ್ಲಾ ಕೂಡ ಸಾವನ್ನಪ್ಪಿದ್ದಾರೆ ಎಂದು ಪಾಕಿಸ್ತಾನ ಸೇನೆ ದೃಢಪಡಿಸಿದೆ.

ಪಾಕ್ ಗಡಿಯೊಳಗೆ ಉಗ್ರಗಾಮಿ ಗುಂಪುಗಳು ಒಳನುಸುಳುತ್ತಿವೆ. ನಾಗರಿಕರು ಮತ್ತು ಮಿಲಿಟರಿ ಸಿಬ್ಬಂದಿಯನ್ನು ಗುರಿಯಾಗಿಸಿ ಆಗಾಗ ಉಗ್ರಗಾಮಿಗಳು ದಾಳಿ ನಡೆಸುತ್ತಿದ್ದಾರೆ. ಅವರನ್ನು ನಿಗ್ರಹಿಸಲು ಪಾಕ್ ಸೇನೆ ಕಾರ್ಯಾಚರಣೆ ಕೈಗೊಂಡಿತ್ತು.

### ಕುಲುವಿನಲ್ಲಿ ಮೇಘಸ್ಫೋಟದಿಂದ ಭಾರೀ ಪ್ರವಾಹ ಉಕ್ಕಿ ಹರಿದ ಪಾರ್ವತಿ ನದಿ

**ಶಿಮ್ಲಾ:** ಹಿಮಾಚಲ ಪ್ರದೇಶದ ಕುಲುವಿನ ಸೈನ್ಜ್ ಕಣಿವೆಯಲ್ಲಿ ಮೇಘಸ್ಫೋಟ ಸಂಭವಿಸಿದ್ದು ಭಾರೀ ಪ್ರವಾಹ ಉಂಟಾಗಿದೆ. ಈ ಬೆನ್ನಲ್ಲೇ ಸುತ್ತಮುತ್ತಲಿನ ಪ್ರದೇಶಗಳಲ್ಲೂ ಹೈಅಲರ್ಟ್ ಘೋಷಿಸಲಾಗಿದೆ. ವರದಿಗಳ ಪ್ರಕಾರ, ಭಾರೀ ಪ್ರವಾಹದಿಂದಾಗಿ ಪಾರ್ವತಿ ನದಿಯೂ ಉಕ್ಕಿ ಹರಿಯುತ್ತಿದೆ. ಈ ಕುರಿತ ವಿಡಿಯೋಗಳು ಸೋಷಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿವೆ. ಸದ್ಯಕ್ಕೆ ಯಾವುದೇ ಜೀವಹಾನಿ ಅಥವಾ ಆಸ್ತಿ ಪಾಸ್ತಿ ನಷ್ಟ ಸಂಭವಿಸಿಲ್ಲ. ಪ್ರವಾಹ ಸೃಷ್ಟಿಯಾಗುತ್ತಿದ್ದಂತೆ ರಕ್ಷಣಾ ತಂಡಗಳನ್ನು ಕಾರ್ಯಾಚರಣೆಗೆ ಸಿದ್ಧವಾಗಿವೆ.

ಅಲ್ಲದೇ, ಮುಂದಿನ 24 ಗಂಟೆಗಳ ಕಾಲ ಹಗುರಿಂದ ಮಳೆಯಾಗುವ ಸಾಧ್ಯತೆಯಿದ್ದು, ಸ್ಥಳೀಯರು ಗುಡ್ಡ ಪ್ರದೇಶಗಳತ್ತ ಸುಳಿಯದಂತೆ ಸ್ಥಳೀಯ ಆಡಳಿತ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಉತ್ತರ ಭಾರತದಲ್ಲೂ ಭಾರೀ ಮಳೆ ಆಗ್ತಿದೆ. ಜಮ್ಮುವಿನ ರಾತ್ರಿ ಸುರಿದ ಭಾರೀ ಮಳೆಗೆ ತಾವಿ ನದಿ ಭೋರ್ಗರೆದಿದೆ. ಏಕಾಏಕಿ ನದಿ ನೀರಿನ ಮಟ್ಟ ಏರಿಕೆ ಆಗಿತ್ತು. ಪ್ರವಾಹದಲ್ಲಿ ಸಿಲುಕಿದ್ದ 9 ಜನರನ್ನ ಪೊಲೀಸರು–ಎಸ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಿಸಿದ್ದಾರೆ. ಇಡೀ ರಾತ್ರಿ ತಾವಿ ನದಿ ಸೇತುವೆ ಕೆಳಗೆ ನಿಂತಿದ್ದ ವ್ಯಕ್ತಿಯನ್ನು ರಕ್ಷಣೆ ಮಾಡಲಾಗಿದೆ.



# ಅಲ್ಲು ಅರ್ಜುನ್ ಜೊತೆ ಪ್ರಶಾಂತ್ ನೀಲ್ ರಾವಣಂ

ಟಾಲಿವುಡ್‌ನಿಂದ ಧಮಾಕೇದಾರ್ ಸುದ್ದಿಯೊಂದು ಬಂದಿದೆ. ಅದುವೇ ಅಲ್ಲು ಅರ್ಜುನ್ ಹಾಗೂ ಪ್ರಶಾಂತ್ ನೀಲ್ ಸೂಪರ್ ಕಾಂಬೋ ಸುದ್ದಿ. ಹೌದು. ಅಲ್ಲು ಅರ್ಜುನ್ ಮುಂದಿನ ಚಿತ್ರಕ್ಕೆ ಪ್ರಶಾಂತ್ ನೀಲ್ ನಿರ್ದೇಶನ ಮಾಡುತ್ತಾರೆ ಎನ್ನಲಾದ ಸುದ್ದಿ ವೈರಲ್ ಆಗಿದೆ. ಪ್ರಸ್ತುತ ಪ್ರಶಾಂತ್ ನೀಲ್ ಜೂ.ಎನ್‌ಟಿಆರ್ ಚಿತ್ರವನ್ನ ನಿರ್ದೇಶನ ಮಾಡುತ್ತಿದ್ದಾರೆ. ಇನ್ನು ಅಲ್ಲು ಅರ್ಜುನ್ ಅಟ್ಲಿ ಚಿತ್ರಕ್ಕೆ ಡೇಟ್ಸ್ ಕೊಟ್ಟಿದ್ದಾರೆ. ಇಬ್ಬರ ವಿಭಿನ್ನ ಚಿತ್ರಗಳು ಮುಗಿದ ಬಳಿಕ ಪ್ರಶಾಂತ್ ನೀಲ್ ಜೊತೆಗೆ ಕೈಜೋಡಿಸಲಿದ್ದಾರೆ ಎನ್ನಲಾಗುತ್ತಿದ್ದು ಈ ಚಿತ್ರಕ್ಕೆ 'ರಾವಣಂ' ಎಂಬ ಶೀರ್ಷಿಕೆ ಇಡಲಾಗುತ್ತೆ ಅನ್ನೋದು ಇಂಟ್ರೆಸ್ಟಿಂಗ್ ವಿಚಾರ. ಕೆಜಿಎಫ್ ಚಿತ್ರದ ಮೂಲಕ ಸ್ಟಾರ್ ಡೈರೆಕ್ಟರ್ ಆಗಿರುವ ಪ್ರಶಾಂತ್ ನೀಲ್ ಹಾಗೂ ಪುಷ್ಪ-2 ಮೂಲಕ ಇಂಟರ್‌ನ್ಯಾಶನಲ್ ಸ್ಟಾರ್ ಆಗಿರುವ ಅಲ್ಲು ಅರ್ಜುನ್ ಬಿಗ್ ಬಜೆಟ್ ಸಿನಿಮಾ ಮೇಕರ್ಸ್ ಎಂದು ಹೆಸರು ಮಾಡಿದವರು.



ಇಬ್ಬರು ಒಂದೇ ಚಿತ್ರಕ್ಕಾಗಿ ಕೈಜೋಡಿಸದ್ರೆ ಆ ಸಿನಿಮಾ ಇನ್ನಿಲ್ಲದ ನಿರೀಕ್ಷೆ ಹುಟ್ಟಿಸೋದ್ರಲ್ಲಿ ಅನುಮಾನವೇ ಇಲ್ಲ. ಅಂದಹಾಗೆ ಈ ಸಿನಿಮಾವನ್ನ ಬಿಗ್ ಬಜೆಟ್‌ನಲ್ಲಿ ಟಾಲಿವುಡ್ ಖ್ಯಾತ ನಿರ್ಮಾಪಕ ದಿಲ್‌ರಾಜು ನಿರ್ಮಿಸಲಿದ್ದಾರೆ. ಸಿನಿಮಾ ಶುರುವಾಗೋದು ಇನ್ನೂ ಎರಡು ವರ್ಷದ ಬಳಿಕ ಎನ್ನಲಾಗುತ್ತಿದೆ. ಸಿನಿಮಾ ಆರಂಭಕ್ಕೂ ಮುನ್ನವೇ ಅಲ್ಲು ನೀಲ್ ಕಾಂಬಿನೇಶನ್ ಚಿತ್ರದ ಶೀರ್ಷಿಕೆ ರಿವೀಲ್ ಆಗಿರುವುದು ವಿಶೇಷ. ಸಾಮಾನ್ಯವಾಗಿ ಬಿಗ್‌ಸ್ಟಾರ್‌ಗಳ ಚಿತ್ರಕ್ಕೆ ಆರಂಭದಲ್ಲೇ ಟೈಟಲ್ ರಿವೀಲ್ ಮಾಡೋದಿಲ್ಲ. ಕಾನ್ಸೆಪ್ಟ್ ಪ್ರಕಾರ ಮಾಡಲಾಗುತ್ತೆ. ಹೀಗಾಗಿ ಶೀರ್ಷಿಕೆ ವಿಚಾರಕ್ಕೆ ಗೊಂದಲ ಇದೆ. ಹಿಂದೆ ಸಂದರ್ಶನವೊಂದರಲ್ಲಿ ಪ್ರಶಾಂತ್ ನೀಲ್ ತಾವು ಚಿತ್ರ ಮಾಡಬೇಕೆನ್ನುವ ಹೀರೋ ಜೊತೆ ಲವ್ ಆದ್ರೆ, ಮಾತ್ರ ಅವರ ಜೊತೆ ಸಿನಿಮಾ ಮಾಡ್ತೀನಿ ಎಂದಿದ್ರು.



# ವಿಜಯ್ ಜೊತೆ ಲವ್ ವದಂತಿಗೆ ತ್ರಿಷಾ ಕೆಂಡ

ದಳಪತಿ ವಿಜಯ್ ಜೊತೆಗಿನ ತ್ರಿಷಾ ಪ್ರೇಮ ವದಂತಿ ನಿನ್ನೆ ಮೊನ್ನೆಯದ್ದಲ್ಲ. ತ್ರಿಷಾ ಕಾರಣಕ್ಕೆ ವಿಜಯ್ ಪತ್ನಿ ಸಂಗೀತಾಗೆ ವಿಚ್ಛೇದನ ಕೊಡುತ್ತಿದ್ದಾರೆ ಎಂದು ವರ್ಷಗಳ ಹಿಂದೆಯೇ ವದಂತಿ ಹಬ್ಬಿತ್ತು. ಆದರೆ ಜೂ.22ರಂದು ವಿಜಯ್ ಹುಟ್ಟುಹಬ್ಬದ ದಿನ ನಟಿ ತ್ರಿಷಾ ಅವರು ವಿಜಯ್ ನಿವಾಸ ಎನ್ನಲಾಗುವ ಜಾಗದಲ್ಲಿ ಕುಳಿತು ಆತ್ಮೀಯವಾಗಿರುವ ಫೋಟೋವೊಂದನ್ನು ಪೋಸ್ಟ್ ಮಾಡಿ ವಿಶ್ ಮಾಡಿದ್ದರು.



**ಹೊಲಸು ಮನಸ್ಥಿತಿಯ ಜನ ಎಂದ ನಟಿ**

ಹಂಚಿಕೊಂಡಿರುವ ಫೋಟೋ ಹಾಗೂ ತ್ರಿಷಾ ವಿಜಯ್‌ಗೆ ವಿಶ್ ಮಾಡಿರುವ ರೀತಿ ಇಬ್ಬರ ನಡುವೆ ಇದ್ದ ಪ್ರೀತಿ ವದಂತಿಗೆ ಪುಷ್ಟಿ ಕೊಡುವಂತಿದೆ. ತ್ರಿಷಾ ಪೋಸ್ಟ್‌ಗೆ ಇವರಿಬ್ಬರ ಮಧ್ಯೆ ಪ್ರೀತಿಯಿರುವುದು ಕನ್ಫರ್ಮ್ ಎಂಬಂತೆ ಕಾಮೆಂಟ್‌ಗಳ ಸುರಿಮಳೆ ಬಂದಿತ್ತು. ಇದೀಗ ಗಾಸಿಪ್ ಹೆಚ್ಚಾಗುತ್ತಿದ್ದಂತೆ ತ್ರಿಷಾ ಅನುಮಾನಿತ ಜನರಿಗೆ ಖಾರವಾಗಿ ಪ್ರತಿಕ್ರಿಯೆ ಕೊಟ್ಟಿದ್ದಾರೆ. ತ್ರಿಷಾ ಹಾಗೂ ವಿಜಯ್ ನಡುವಿನ ಲವ್ ಮ್ಯಾಟರ್ ಅನುಮಾನ ಹೆಚ್ಚಾಗುತ್ತಿದ್ದಂತೆ ಈ ಕುರಿತು ನಟಿ ಗರಂ ಆದಂತಿದೆ. ಹೀಗಾಗಿ ಇನಸ್ಟಾಗ್ರಾಂ ಸ್ಟೋರಿಯಲ್ಲಿ ಕೆಂಡಕಾರಿದ್ದಾರೆ.


ಅನುಮಾನಿತರಿಗೆ ಪರೋಕ್ಷವಾಗಿ ಟಕ್ಕರ್ ಕೊಟ್ಟಿದ್ದಾರೆ. ಇನ್ಸ್ಟಾಗ್ರಾಂ ಸ್ಟೋರಿಯಲ್ಲಿ ನೀವು ಪ್ರೀತಿಯಲ್ಲಿರುವಾಗ ನಿಮ್ಮನ್ನು ನೋಡಿದ ಹೊಲಸು ಮನಸ್ಥಿತಿಯ ಜನರಲ್ಲಿ ಗೊಂದಲ ಸೃಷ್ಟಿಯಾಗುತ್ತೆ ಎಂದು ಬರೆದುಕೊಂಡಿದ್ದಾರೆ. ಕನ್‌ಫ್ಯೂಸ್ ಆಗಿರೋವ್ರಿಗೆಲ್ಲ ಹೊಲಸು ಎಂದು ಕರೆದಿದ್ದಾರೆ ತ್ರಿಷಾ. ಅಂದಹಾಗೆ ತ್ರಿಷಾ ವಿಜಯ್‌ಗೆ ವಿಶ್ ಮಾಡಿರುವ ಪೋಸ್ಟ್‌ಗಂತೂ ಸಿಕ್ಕಾಪಟ್ಟೆ ಲೈಕ್ಸ್ ಬಂದಿದೆ. ಆದರೆ ನಟಿ ಗರಂ ಆಗೋಕೆ, ವಿಜಯ್ ಹಾಗೂ ಪತ್ನಿ ಸಂಗೀತಾ ಜೊತೆ ವಿಚ್ಛೇದನ ವದಂತಿಗೆ ತ್ರಿಷಾ ಕಾರಣ ಎಂದು ಹೇಳುತ್ತಿರುವುದೇ ಕಾರಣ. ವಿಜಯ್ ಹಾಗೂ ತ್ರಿಷಾ ಈವರೆಗೂ ಐದು ಸಿನಿಮಾಗಳಲ್ಲಿ ಒಟ್ಟಿಗೆ ಅಭಿನಯಿಸಿದ್ದಾರೆ. ಗಿಲ್ಲಿ, ತಿರುಪಚ್ಚಿ, ಆತಿ, ಕುರುವಿ ಚಿತ್ರಗಳ ಬಳಿಕ 15 ವರ್ಷಗಳ ಗ್ಯಾಪ್ ತೆಗೆದುಕೊಂಡು ಲಿಯೋ ಚಿತ್ರದಲ್ಲಿ ಜಂಟಿಯಾಗಿದ್ದರು. ಆಗಲೂ ವಿಜಯ್ ಹಾಗೂ ತ್ರಿಷಾ ಆನ್‌ಸ್ಕ್ರೀನ್ ಕೆಮೆಸ್ಟ್ರೀ ಭರ್ಜರಿಯಾಗಿ ವರ್ಕೌಟ್ ಆಗಿತ್ತು. ಪ್ರೀತಿಸಿ ದೂರವಾದ್ರು ಎಂಬ ವದಂತಿ ಹಬ್ಬಿತ್ತು. ಇದೀಗ ಲಿಯೋ ಚಿತ್ರದಲ್ಲಿ ಒಟ್ಟಿಗೆ ಕೆಲಸ ಮಾಡುವಾಗ ಇಬ್ಬರ ನಡುವೆ ಮತ್ತೆ ಪ್ರೇಮಾಂಕುರವಾಗಿದೆ. ಈ ಕಾರಣಕ್ಕೆ ಪತ್ನಿಯಿಂದ ವಿಜಯ್ ದೂರವಿದ್ದಾರೆ ಎಂಬ ಮಾತು ಕೇಳಿಬಂತು. ಇಷ್ಟೆಲ್ಲದರ ನಡುವೆ ವಿಜಯ್ ಹುಟ್ಟುಹಬ್ಬದ ದಿನ ತ್ರಿಷಾ ಬಹಳ ಸಮಯ ತೆಗೆದುಕೊಂಡು ಶುಭಾಶಯದ ಪೋಸ್ಟ್ ಹಾಕಿದ್ದರು. ಹೀಗಾಗಿ ಅನುಮಾನಕ್ಕೆ ರೆಕ್ಕೆ ಪುಕ್ಕ ಬಂತು. ಇದೀಗ ತ್ರಿಷಾ ಲವ್ ಗಾಸಿಪ್ ಕುರಿತು ಕನ್‌ಫ್ಯೂಸ್ ಆದವರನ್ನ ಹೊಲಸು ಎಂದಿದ್ದಾರೆ



# ಫ್ಯಾಮಿಲಿ ಮ್ಯಾನ್-3 ಫಸ್ಟ್ ಲುಕ್ ರಿವೀಲ್

ಫ್ಯಾಮಿಲಿ ಮ್ಯಾನ್ ಸೀಸನ್-1 ಹಾಗೂ ಸೀಸನ್-2 ಸೂಪರ್ ಹಿಟ್ ಆಗಿವೆ. ಇದೀಗ ಫ್ಯಾಮಿಲಿ ಮ್ಯಾನ್ ಸೀಸನ್-3 ಬರೋಕೆ ರೆಡಿಯಾಗಿದೆ. ಈ ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ರಿವೀಲ್ ಆಗಿದ್ದು, ಸಾಕಷ್ಟು ನಿರೀಕ್ಷೆಗಳ ಜೊತೆಗೆ ಮೆಚ್ಚುಗೆ ವ್ಯಕ್ತವಾಗ್ತಿದೆ. ಫಸ್ಟ್ ಲುಕ್ ನೋಡಿದವ್ರೆಲ್ಲ ತೆರೆ ಮೇಲೆ ನೋಡಿ ಕಣ್ತುಂಬಿಕೊಳ್ಳುವ ತವಕದಲ್ಲಿದ್ದಾರೆ. ಮನೋಜ್ ಬಾಜ್ಪೆ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿರುವ ಫ್ಯಾಮಿಲಿ ಮ್ಯಾನ್ ಸೀರಿಸ್ ಸಖತ್ ಸೆನ್ಸೇಷನ್ ಕ್ರಿಯೇಟ್ ಮಾಡಿದೆ. ಸೀಸನ್-3 ಹೇಗಿರುತ್ತೆ ಅನ್ನೋ ಕುತೂಹಲವನ್ನ ಹೆಚ್ಚು ಮಾಡಿದೆ. ರಾಜ್ ಡಿಕೆ ನಿರ್ದೇಶನದಲ್ಲಿ ತಯಾರಾಗ್ತಿರುವ ಫ್ಯಾಮಿಲಿ ಮ್ಯಾನ್-3 ಯಾವೆಲ್ಲ ಎಲಿಮೆಂಟ್ ಹೊತ್ತುಕೊಂಡು ಬರಲಿದೆ ಅನ್ನೋ ಕೌತುಕ ಮತ್ತೊಂದು ಕಡೆ. ಮನೋಜ್ ಬಾಜ್ಪೆ ಮುಖ್ಯ ಪಾತ್ರಧಾರಿಯಾಗಿರುವ ಈ ಸಿರೀಸ್‌ನ ಪೋಸ್ಟರ್ ಸಾಕಷ್ಟು ಸ್ಟೋರಿಗಳನ್ನ ಹೇಳುತ್ತಿದೆ. ಫ್ಯಾಮಿಲಿ ಮ್ಯಾನ್ ಅತಿ ದೊಡ್ಡ ತಾರಾಬಳಗವನ್ನ ಹೊಂದಿರುವ ವೆಬ್ ಸಿರೀಸ್. ಬಾಲಿವುಡ್ ಅಷ್ಟೇ ಅಲ್ಲದೇ ಜಗತ್ತಿನಾದ್ಯಂತ ಈ ಫ್ಯಾಮಿಲಿ ಮ್ಯಾನ್ ಸೀರಿಸ್ ಪ್ರೇಕ್ಷಕರ ಮನಗೆದ್ದಿದೆ. ಅಮೇಜಾನ್ ಪ್ರೈಮ್ ತಮ್ಮ ಅಫೀಶಿಯಲ್ ಪೇಜ್‌ನಲ್ಲಿ ಪೋಸ್ಟರ್ ಪೋಸ್ಟ್ ಮಾಡಿದೆ. ಈ ಪೋಸ್ಟರ್ ನೋಡಿ ಅಭಿಮಾನಿಗಳು ಕಮೆಂಟ್ ಮೇಲೆ ಕಮೆಂಟ್ ಹಾಕುತ್ತಿದ್ದಾರೆ.

# ಬ್ಯಾಂಗಲ್ ಬಂಗಾರಿ ಹಾಡಿಗೂ ರಾಜ್‌ಕುಮಾರ್ ಡ್ಯಾನ್ಸ್‌ಗೂ ಪರ್ಫೆಕ್ಟ್ ಮ್ಯಾಚ್



ಇತ್ತೀಚೆಗೆ ಬ್ಯಾಂಗಲ್ ಬಂಗಾರಿ' ಹಾಡು ಎಲ್ಲಾ ಕಡೆಗಳಲ್ಲಿ ವೈರಲ್ ಆಗಿದೆ. ಅನೇಕ ಸೆಲೆಬ್ರಿಟಿಗಳು ಈ ಹಾಡಿಗೆ ಡ್ಯಾನ್ಸ್ ಮಾಡಿದ್ದಾರೆ. ಈ ರೀತಿಯ ಹಾಡುಗಳು ವೈರಲ್ ಆದಾಗ ಅಭಿಮಾನಿಗಳು ನಾನಾ ಪ್ರಯೋಗಗಳನ್ನು ಮಾಡುತ್ತಾರೆ. ಈಗ 'ಬ್ಯಾಂಗಲ್ ಬಂಗಾರಿ..' ಹಾಡಿಗೂ ಒಂದು ಭಿನ್ನ ಪ್ರಯೋಗ ನಡೆದಿದೆ. ವರನಟ ರಾಜ್‌ಕುಮಾರ್ ಡ್ಯಾನ್ಸ್ ಮಾಡಿದ್ದ ವಿಡಿಯೋ ಒಂದಕ್ಕೆ ಈ ಹಾಡನ್ನು ಹಾಕಲಾಗಿದ್ದು, ಅದು ಸರಿಯಾಗಿ ಮ್ಯಾಚ್ ಆಗಿದೆ. ಸೋಶಿಯಲ್ ಮೀಡಿಯಾದಲ್ಲಿ ವಿಡಿಯೋ ವೈರಲ್ ಮಾಡಲಾಗುತ್ತಿದೆ. 'ಬ್ಯಾಂಗಲ್ ಬಂಗಾರಿ' ಹಾಡು 'ಎಕ್ಕ' ಚಿತ್ರದ್ದು. ಈ ಸಿನಿಮಾಗೆ ಯುವ ರಾಜ್‌ಕುಮಾರ್ ಹಾಗೂ ಸಂಜನಾ ಆನಂದ್ ನಟಿಸಿದ್ದಾರೆ. ರೋಹಿತ್ ಪದಕಿ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಚರಣ್ ರಾಜ್ ಸಂಗೀತ ಈ ಚಿತ್ರಕ್ಕೆ ಇದೆ. ಈ ಸಿನಿಮಾ ಹಾಡಿನ ಮೂಲಕವೇ ಸದ್ದು ಮಾಡುತ್ತಿದೆ. ಈ ಹಾಡನ್ನು ವಿವಿಧ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತಿದೆ. ರಾಜ್‌ಕುಮಾರ್ ಅವರು ಹಾಡೊಂದಕ್ಕೆ ಡ್ಯಾನ್ಸ್ ಮಾಡಿದ್ದರು. ಈ ಹಾಡಿನಲ್ಲಿ ಮಾಧವಿ ಹಾಗೂ ರಾಜ್‌ಕುಮಾರ್ ಒಟ್ಟಾಗಿ ಹೆಜ್ಜೆ ಹಾಕಿದ್ದರು. ಈ ಹಾಡಿಗೆ 'ಬ್ಯಾಂಗಲ್ ಬಂಗಾರಿ..' ಹಾಡನ್ನು ಸೇರಿಸಲಾಗಿದ್ದು, ಸರಿಯಾಗಿ ಹೊಂದಿಕೆ ಆಗಿದೆ. ಅನೇಕರು ಈ ಡ್ಯಾನ್ಸ್ ಮೆಚ್ಚಿಕೊಂಡಿದ್ದಾರೆ. ರಾಜ್ ಕುಮಾರ್ ಅವರ ಅನೇಕ ಹಾಡುಗಳಿಗೆ ಹಿಟ್ ಹಾಡುಗಳನ್ನು ಸೇರಿಸಿ ವಿಡಿಯೋ ವೈರಲ್ ಮಾಡಲಾಗಿತ್ತು. ಈ ಮೊದಲು ಹಿಟ್ ಆಗಿದ್ದು, 'ದ್ವಾಪರ..' ಹಾಡನ್ನು ಇದೇ ರೀತಿಯಲ್ಲಿ ವೈರಲ್ ಮಾಡಲಾಗಿತ್ತು.



# ತಮನ್ನಾ ಯುವ ನಟಿ ಜೊತೆ ವಿಜಯ್ ವರ್ಮಾ ಸುತ್ತಾಟ?

ಬಾಲಿವುಡ್ ಹಿರಿಯ ನಟ ವಿಜಯ್ ವರ್ಮಾ ಮತ್ತು ಲಕ್ಷಾಂತರ ಅಭಿಮಾನಿಗಳನ್ನು ಹೊಂದಿರುವ ತಮನ್ನಾ ಭಾಟಿಯಾ ಹಲವು ದಿನಗಳಿಂದ ಸಂಬಂಧದಲ್ಲಿದ್ದರು. ಆದರೆ ಈಗ ಅವರು ಬೇರ್ಪಟ್ಟಿದ್ದಾರೆ. ಇದಕ್ಕೆ ಕಾರಣ ರಿವೀಲ್ ಆಗಿಲ್ಲ. ಈ ಮಧ್ಯೆ ವಿಜಯ್ ಅವರ ಹೆಸರು ನಟಿಯೊಂದಿಗೆ ತಳುಕು ಹಾಕಿಕೊಂಡಿದೆ.

ಅವರು ಹಿಂದಿ ಹೀರೋಯಿನ್ ಜೊತೆ ಡೇಟಿಂಗ್ ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ತಮನ್ನಾ ಅವರಿಂದ ಬೇರ್ಪಟ್ಟ ನಂತರ ವಿಜಯ್ ವರ್ಮಾ ಮತ್ತು ಈ ನಟಿ ಪರಸ್ಪರ ಹತ್ತಿರವಾಗಿದ್ದಾರೆ ಎಂದು ಹೇಳಲಾಗುತ್ತಿದೆ. ವರದಿಗಳ ಪ್ರಕಾರ, ತಮನ್ನಾ ಭಾಟಿಯಾ ಅವರಿಂದ ಬೇರ್ಪಟ್ಟ ನಂತರ, ವಿಜಯ್ ವರ್ಮಾ ಈಗ ಹೊಸ ಸುಂದರ ಹುಡುಗಿಯನ್ನು ಪ್ರೀತಿಸುತ್ತಿದ್ದಾರೆ ಎನ್ನಲಾಗಿದೆ.

ವಿಶೇಷವೆಂದರೆ ಈ ಹುಡುಗಿ ಬಾಲಿವುಡ್‌ನಲ್ಲೂ ದೊಡ್ಡ ನಟಿ. ಈ ನಟಿ ಮತ್ತು ವಿಜಯ್ ವರ್ಮಾ ಇಬ್ಬರೂ ರಹಸ್ಯವಾಗಿ ಡೇಟಿಂಗ್ ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತದೆ.

ಈ ನಟಿ ಬೇರೆ ಯಾರೂ ಅಲ್ಲ, ದಂಗಲ್' ಚಿತ್ರದ ಫಾತಿಮಾ ಸನಾ ಶೇಖ್. ಫಾತಿಮಾ ಮತ್ತು ವಿಜಯ್ ವರ್ಮಾ ಅವರ ಪ್ರೇಮ ಸಂಬಂಧದ ಬಗ್ಗೆ ವದಂತಿಗಳು ಹಬ್ಬಿವೆ. ಆದರೆ ವಿಜಯ್ ಮತ್ತು ಫಾತಿಮಾ ಈ ವದಂತಿಗಳಿಗೆ ಇನ್ನೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ವಿಜಯ್ ವರ್ಮಾ ಮತ್ತು ಫಾತಿಮಾ ಇಬ್ಬರೂ 'ಗುಸ್ತಖ್ ಇಷ್ಕ್' ಚಿತ್ರದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದಾರೆ.

ಈ ಚಿತ್ರದ ಪೋಸ್ಟರ್ ಕೂಡ ಬಹಿರಂಗವಾಗಿದೆ. ಫಾತಿಮಾ ಅವರನ್ನು ವಿಜಯ್ ವರ್ಮಾ ಬಗ್ಗೆ ಕೇಳಲಾಯಿತು. ಇದರ ಬಗ್ಗೆ ಮಾತನಾಡುತ್ತಾ, ವಿಜಯ್ ಓರ್ವ ಒಳ್ಳೆಯ ನಟ. ನೀವು ಒಳ್ಳೆಯ ನಟರಾಗಿದ್ದರೆ, ನಿಮ್ಮ ಸ್ವಂತ ಹಾದಿಯನ್ನು ನೀವು ಸುಗಮಗೊಳಿಸಿಕೊಳ್ಳಿ.

ನೀವು ಯಶಸ್ಸನ್ನು ಸಾಧಿಸಲು ಹೆಚ್ಚು ಅಥವಾ ಕಡಿಮೆ ಸಮಯ ತೆಗೆದುಕೊಳ್ಳಬಹುದು. ಆದರೆ ಒಳ್ಳೆಯ ನಟನಾಗಿರುವ ವ್ಯಕ್ತಿ ಯಶಸ್ಸನ್ನು ಸಾಧಿಸುತ್ತಾನೆ. ವಿಜಯ್ ಒಬ್ಬ ಒಳ್ಳೆಯ ನಟ. ಬಾಲಿವುಡ್ ಉದ್ಯಮದಲ್ಲಿ ಅವರಿಗೆ ವಿಭಿನ್ನವಾದ ಮನ್ನಣೆ ಸಿಗುತ್ತಿದೆ. ಇದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ' ಎಂದು ಫಾತಿಮಾ ಪ್ರತಿಕ್ರಿಯಿಸಿದ್ದರು.



# ಶುದ್ಧ ಬ್ಯಾಟ್ಸ್‌ಮನ್‌ಗಳು ಕೆಲವೊಮ್ಮೆ ವಿಫಲರಾಗುತ್ತಾರೆ

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್, ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತದ ಸೋಲಿಗೆ ತಂಡದ ಕೆಳ ಕ್ರಮಾಂಕದ ಬ್ಯಾಟಿಂಗ್ ವೈಫಲ್ಯವೇ ಕಾರಣ ಎಂದು ಹೇಳಲು ನಿರಾಕರಿಸಿದರು. ಲೀಡ್ಸ್‌ನಲ್ಲಿ ಶುಭ್‌ಮನ್ ಗಿಲ್ ಪಡೆಗಳಿಸಿದ ಹೆಚ್ಚಿನ ರನ್‌ಗಳು ಅಗ್ರ ಐದು ಆಟಗಾರರಿಂದ ಬಂದವು. ಆದರೆ, ಮಧ್ಯಮ ಮತ್ತು ಕೆಳ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಉತ್ತಮ ಪ್ರದರ್ಶನ ನೀಡುವಲ್ಲಿ ವಿಫಲರಾದರು.

ಇಂಗ್ಲೆಂಡ್ 5 ವಿಕೆಟ್‌ಗಳ ಜಯ ಸಾಧಿಸಿ ಸರಣಿಯಲ್ಲಿ 1-0 ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾಯಿತು. ಪಂದ್ಯದ ನಂತರದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಗಂಭೀರ್, ಕೆಲವೊಮ್ಮೆ ಆಟಗಾರರು ವಿಫಲರಾಗುತ್ತಾರೆ. ಹಾಗಂತ ಅವರು ತಮ್ಮನ್ನು ತಾವು ಚೆನ್ನಾಗಿ ಬಳಸಿಕೊಳ್ಳುತ್ತಿಲ್ಲ ಎಂದು ಅರ್ಥವಲ್ಲ. ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 550ಕ್ಕೂ ಹೆಚ್ಚು ರನ್ ಗಳಿಸುವಲ್ಲಿ ಯಶಸ್ವಿಯಾಗಿದ್ದರೆ, ಪಂದ್ಯದ ಮೇಲೆ ಪ್ರಾಬಲ್ಯ ಸಾಧಿಸಬಹುದಿತ್ತು.

ರನ್‌ಗಳಿಸದ ಆಟಗಾರರು ಈ ಫಲಿತಾಂಶದಿಂದ ಬೇರೆಯವರಿಗಿಂತ ಹೆಚ್ಚು ನಿರಾಶೆಗೊಳ್ಳುತ್ತಾರೆ ಎಂದು ಹೇಳಿದರು. ಮೊದಲನೆಯದಾಗಿ, ಅವರು ತಮ್ಮನ್ನು ತಾವು ಬಳಸಿಕೊಳ್ಳುತ್ತಿರಲಿಲ್ಲ ಎಂದು ಅರ್ಥವಲ್ಲ ಎಂದು ನಾನು ನಿಮಗೆ ಹೇಳುತ್ತೇನೆ. ಕೆಲವೊಮ್ಮೆ ಜನರು ವಿಫಲರಾಗುತ್ತಾರೆ ಮತ್ತು ಅದು ಸರಿ. ಇದು ನಿರಾಶಾದಾಯಕ ಎಂದು ನನಗೆ ತಿಳಿದಿದೆ ಮತ್ತು ಹೆಚ್ಚು ಮುಖ್ಯವಾಗಿ, ಅವರು ಎಲ್ಲರಿಗಿಂತ ಹೆಚ್ಚು ನಿರಾಶೆಗೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ.

# ಐದು ಶತಕ ಗಳಿಸಿಯೂ ಭಾರತಕ್ಕೆ ಸೋಲು

ಲೀಡ್ಸ್ ನಲ್ಲಿ ನಡೆದ ಭಾರತ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಐದು ವಿಕೆಟ್ ಗಳ ಅಂತರದಿಂದ ಇಂಗ್ಲೆಂಡ್ ಗೆಲುವು ಸಾಧಿಸಿದ್ದು, ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 1-0 ಅಂತರದಿಂದ ಮುನ್ನಡೆ ಕಾಯ್ದುಕೊಂಡಿದೆ. ಐದನೇ ದಿನ 371 ರನ್ ಗಳ ಗುರಿ ಬೆನ್ನಟ್ಟಿದ್ದ ಇಂಗ್ಲೆಂಡ್ ಬೆನ್ ಡಕೆಟ್ ಅವರ ಭರ್ಜರಿ 149 ರನ್ ಗಳ ನೆರವಿನಿಂದ ಐದು ವಿಕೆಟ್ ಗಳಿಂದ ರೋಚಕ ಗೆಲುವಿನ ನಗೆ ಬೀರಿತು. **148 ವರ್ಷಗಳಲ್ಲಿ ಇದೇ ಮೊದಲು:** 148 ವರ್ಷಗಳ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಒಂದೇ ಟೆಸ್ಟ್ ಪಂದ್ಯದಲ್ಲಿ ಭಾರತ ಐದು ಶತಕಗಳನ್ನು ಗಳಿಸಿಯೂ ಸೋಲಿಗೆ ಒಳಗಾದ ತಂಡವೆನಿಸಿತು. ಮೊದಲ ಇನ್ನಿಂಗ್ಸ್ ನಲ್ಲಿ ಯಶಸ್ವಿ ಜೈಸ್ವಾಲ್ (101) ಶುಭಮನ್ ಗಿಲ್ (147) ರಿಷಭ್ ಪಂತ್ (134) ರನ್‌ಗಳಿಸಿದ್ದರೆ ಎರಡನೇ ಇನ್ನಿಂಗ್‌ನಲ್ಲಿ ಪಂತ್ (118) ಕೆಎಲ್ ರಾಹುಲ್ (137) ಶತಕ ದಾಖಲಿಸಿದ್ದರು. ಆದರೆ ಅದು ವ್ಯರ್ಥವಾಯಿತು. ಮೊದಲ ಇನ್ನಿಂಗ್ಸ್‌ನಲ್ಲಿ ಕೊನೆಯ ಏಳು ವಿಕೆಟ್‌ಗಳಲ್ಲಿ ಕೇವಲ 41 ರನ್ ಅಂತರದಲ್ಲಿ ಕಳೆದುಕೊಂಡಿದ್ದ ಭಾರತ ಎರಡನೇ ಇನ್ನಿಂಗ್ಸ್‌ನಲ್ಲಿ 31 ರನ್ ಅಂತರದಲ್ಲಿ ಅಂತಿಮದ ಆರು ವಿಕೆಟ್ ಕಳೆದುಕೊಂಡಿತು. ಇದು ಸೋಲಿಗೆ ಪ್ರಮುಖ ಕಾರಣವಾಯಿತು. ಕೈಚೆಲ್ಲಿದ ಹಲವು ಕ್ಯಾಚ್ ಗಳಿಂದಲೂ ಹಿನ್ನಡೆ ಆಯಿತು.'ಜಸ್ಪ್ರೀತ್ ಬುಮ್ರಾ ವಿಶ್ವದ ನಂಬರ್ 1 ಬೌಲರ್ ಆಗಿರಬಹುದು, ಆದರೆ ನಾನು ನಂಬರ್ 2 ಬ್ಯಾಟರ್' ಒಟ್ಟಾರೇ ಭಾರತದ ಟೆಸ್ಟ್ ತಂಡದ ನಾಯಕ ಶುಭಮನ್ ಗಿಲ್‌ಗೆ ಅದೃಷ್ಟ ಕೈಕೊಟ್ಟಿದ್ದು, ಸೋಲಿನೊಂದಿಗೆ ತಮ್ಮ ಅಭಿಯಾನ ಆರಂಭಿಸಿದರು.



# ಮೊದಲ ಟೆಸ್ಟ್ ಗೆಲುವಿನ ಶುಭ್‌ಮನ್ ಗಿಲ್ ನೇತೃತ್ವದ ತಂಡವನ್ನು ಶ್ಲಾಘಿಸಿದ ಬೆನ್ ಡಕೆಟ್

ಇಂಗ್ಲೆಂಡ್ ಪಂದ್ಯದ ಕೊನೆಯ ದಿನ ಬ್ಯಾಟಿಂಗ್ ಆರಂಭಿಸಿದಾಗ ಗೆಲ್ಲಲು ಇನ್ನೂ 350 ರನ್‌ಗಳ ಅಗತ್ಯವಿತ್ತು. ಕೈಯಲ್ಲಿ 10 ವಿಕೆಟ್‌ಗಳು ಉಳಿದಿದ್ದವು. ಬೆನ್ ಡಕೆಟ್ ಅವರ ತಂತ್ರವು ಸರಳವಾಗಿತ್ತು. ಹೆಡಿಂಗ್ಲಿಯಲ್ಲಿ ಭಾರತ ವಿರುದ್ಧ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ 371 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಇಂಗ್ಲೆಂಡ್ ತಂಡ ಐದು ವಿಕೆಟ್‌ಗಳ ಜಯ ಸಾಧಿಸಿದ್ದು, ಸರಣಿಯಲ್ಲಿ 1-0 ಅಂತರದ ಮುನ್ನಡೆ ಕಾಯ್ದುಕೊಂಡಿದೆ. ಇಂಗ್ಲೆಂಡ್ ಪರವಾಗಿ ಬ್ಯಾಟಿಂಗ್ ಮಾಡಿದ ಬೆನ್ ಡಕೆಟ್ ಅದ್ಭುತ 149 ರನ್‌ಗಳ ನೆರವಿನಿಂದ ತಂಡವು ಸುಲಭವಾಗಿ ಜಯ ಸಾಧಿಸಿತು. ಇದಕ್ಕಾಗಿ ಬೆನ್ ಡಕೆಟ್ ಅವರಿಗೆ ಪಂದ್ಯಶ್ರೇಷ್ಠ' ಪ್ರಶಸ್ತಿ ನೀಡಲಾಯಿತು. ಬೆನ್ ಡಕೆಟ್ ಭಾರತದ ಪ್ರಯತ್ನವನ್ನು ಶ್ಲಾಘಿಸಿದರು. ಪಂದ್ಯವು ರೋಮಾಂಚಕಾರಿ ಮತ್ತು ಸ್ಮರಣೀಯ ಸ್ಪರ್ಧೆಯಾಗಿತ್ತು. ಇದು ಕೇವಲ ಅದ್ಭುತ ಆಟವಾಗಿರಲಿಲ್ಲ, ಭಾರತ ಕೂಡ ಅದ್ಭುತವಾಗಿತ್ತು. 5 ನೇ ದಿನ ನಾವು ಅಂದುಕೊಂಡಂತೆ ಪಂದ್ಯದಲ್ಲಿ ಗೆಲುವು ಸಾಧಿಸಿದ್ದು ಅದ್ಭುತವಾಗಿತ್ತು ಎಂದರು. ಇಂಗ್ಲೆಂಡ್ ಪಂದ್ಯದ ಕೊನೆಯ ದಿನ ಬ್ಯಾಟಿಂಗ್ ಆರಂಭಿಸಿದಾಗ ಗೆಲ್ಲಲು ಇನ್ನೂ 350 ರನ್‌ಗಳ ಅಗತ್ಯವಿತ್ತು. ಕೈಯಲ್ಲಿ 10 ವಿಕೆಟ್‌ಗಳು ಉಳಿದಿದ್ದವು. ಬೆನ್ ಡಕೆಟ್ ಅವರ ತಂತ್ರವು ಸರಳವಾಗಿತ್ತು. ಅವರು ಇಡೀ ದಿನ ಆಲ್ ಔಟ್ ಆಗದೆ ಬ್ಯಾಟಿಂಗ್ ಮಾಡಲು ಸಾಧ್ಯವಾದರೆ, ಅವರು ಗುರಿಯನ್ನು ಯಶಸ್ವಿಯಾಗಿ ಬೆನ್ನಟ್ಟಿ ಗೆಲ್ಲಬಹುದು ಎಂಬ ವಿಶ್ವಾಸ ಹೊಂದಿದ್ದರು. ಡಕೆಟ್ ಅವರ ಇನಿಂಗ್ಸ್ ತಾಳ್ಮೆ ಮತ್ತು ಲೆಕ್ಕಾಚಾರದ ಆಕ್ರಮಣಶೀಲತೆಯಿಂದ ಕೂಡಿತ್ತು. ಅವರು ಇನಿಂಗ್ಸ್‌ನಾದ್ಯಂತ ನಿರ್ಣಾಯಕ ಜೊತೆಯಾಟವಾಡಿದರು. ವಿಶೇಷವಾಗಿ ಜ್ಯಾಕ್ ಕ್ರಾಲಿ ಮತ್ತು ನಂತರ ಜೋ ರೂಟ್ ಜೊತೆಗೆ ಉತ್ತಮವಾಗಿ ಆಡಿದರು. ಡಕೆಟ್ ಮತ್ತು ಕ್ರಾಲಿ ಆರಂಭಿಕರಾಗಿ 188 ರನ್ ಗಳು ಮತ್ತು ರೂಟ್ ಜೊತೆ 47 ರನ್ ಗಳ ಜೊತೆಯಾವಾಡಿದರು.

'ನಾವು ದಿನವಿಡೀ ಪ್ರಬುದ್ಧತೆಯನ್ನು ತೋರಿಸಿದ್ದೇವೆ ಮತ್ತು ಗೆಲ್ಲುವುದು ಎಷ್ಟು ಮುಖ್ಯ ಎಂಬುದು ನಮಗೆ ಗೊತ್ತಿತ್ತು. ಕೆಲವು ಸಲ, ಈ ಪಂದ್ಯದಲ್ಲಿ ನಾವು ಹಿಂದೆ ಇದ್ದೆವು' ಎಂದು ಅವರು ಹೇಳಿದರು. ಭಾರತದ ಎರಡನೇ ಇನಿಂಗ್ಸ್‌ನ ರನ್ ಮೊತ್ತವನ್ನು ಮಿತಿಗೊಳಿಸುವಲ್ಲಿ ಇಂಗ್ಲಿಷ್ ಬೌಲರ್‌ಗಳು ನಿರ್ಣಾಯಕ ಪಾತ್ರ ವಹಿಸಿದರು. '

ನಮ್ಮ ಬೌಲರ್‌ಗಳಿಗೆ ಇದರ ದೊಡ್ಡ ಶ್ರೇಯಸ್ಸು ಸಲ್ಲುತ್ತದೆ. ಇಲ್ಲದಿದ್ದರೆ ಟಾರ್ಗೆಟ್ 50-60 ರನ್ ಹೆಚ್ಚಿರುತ್ತಿತ್ತು. ಆಗ ಅದು ಬೇರೆಯದೇ ಆಟವಾಗಿರುತ್ತಿತ್ತು ಎಂದರು.



# ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತಕ್ಕೆ ಸೋಲು



**ಸಂಪೂರ್ಣ ಕ್ರೆಡಿಟ್ ಸಲ್ಲಬೇಕು**

ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಸರಣಿಯ ಮೊದಲ ಟೆಸ್ಟ್‌ನಲ್ಲಿ ಭಾರತ 5 ವಿಕೆಟ್ ಗಳಿಂದ ಸೋಲು ಕಂಡಿದ್ದು, ಇಂಗ್ಲೆಂಡ್ ಸರಣಿಯಲ್ಲಿ 1-0 ಮುನ್ನಡೆ ಕಾಯ್ದುಕೊಂಡಿದೆ. ಐದು ಆಟಗಾರರು ಶತಕಗಳನ್ನು ಬಾರಿಸಿದರೂ, ಕೊನೆಯ ದಿನದಂದು ಭಾರತವು ಗೆಲುವು ಕಾಣಲು ಸಾಧ್ಯವಾಗಲಿಲ್ಲ. ಕೆಳ ಕ್ರಮಾಂಕ ವಿಫಲವಾಯಿತು, ಹಲವು ಕ್ಯಾಚ್‌ಗಳನ್ನು ಕೈಬಿಡಲಾಯಿತು, ಬೌಲರ್‌ಗಳು ನಿಯಮಿತವಾಗಿ ವಿಕೆಟ್‌ಗಳನ್ನು ಪಡೆಯಲು ಸಾಧ್ಯವಾಗಲಿಲ್ಲ. ಇಂಗ್ಲೆಂಡ್ ತಂಡದ ಆರಂಭಿಕ ಆಟಗಾರ ಬೆನ್ ಡಕೆಟ್ ತಮ್ಮ ವೃತ್ತಿಜೀವನದ ಅತ್ಯಂತ ನಿರ್ಣಾಯಕ ಶತಕವನ್ನು ಬಾರಿಸಿದರು. ಮೊದಲ ಟೆಸ್ಟ್‌ನಲ್ಲಿ ಗೆಲ್ಲಲು 371 ರನ್‌ಗಳ ಕಠಿಣ ಗುರಿಯನ್ನು ಇಂಗ್ಲೆಂಡ್ ಸುಲಭವಾಗಿ ಬೆನ್ನಟ್ಟಿತು. ಡಕೆಟ್ 170 ಎಸೆತಗಳಲ್ಲಿ 21 ಬೌಂಡರಿಗಳು, ಸಿಕ್ಸರ್ ಸೇರಿದಂತೆ 149 ರನ್‌ಗಳಿಸಿದರು. ಜಾಕ್ ಕ್ರಾಲಿ 65 ರನ್, ಜೋ ರೂಟ್ 53ಜೇಮೀ ಸ್ಮಿತ್ ಅವರ 44 ರನ್‌ಗಳು ಚೇಸಿಂಗ್ ಅನ್ನು ಸುಲಭವಾಗಿಸಿತು. ಈ ಸೋಲಿನ ಹಿಂದಿನ ಕಾರಣಗಳನ್ನು ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ ಸುನೀಲ್ ಗವಾಸ್ಕರ್ ವಿಶ್ಲೇಷಿಸಿದ್ದಾರೆ. ಇಂಗ್ಲೆಂಡ್‌ಗೆ ಸಂಪೂರ್ಣ ಕ್ರೆಡಿಟ್ ಸಲ್ಲಬೇಕು. ಭಾರತ ಐದು ಶತಕಗಳನ್ನು ಹೊಂದಿದ್ದರೂ, ಅವರು ಆ ಆತ್ಮವಿಶ್ವಾಸವನ್ನು ಹೊಂದಿದ್ದರು. ಅದುವೇ ಅವರನ್ನು ಅಂತಿಮವಾಗಿ ವಿಕೆಟ್‌ಗಳನ್ನು ಪಡೆಯಲು ಕಾರಣವಾಯಿತು. ಆದ್ದರಿಂದ ಭಾರತ ಈ ಅವಕಾಶವನ್ನು ಕೈಚೆಲ್ಲಿತು. ಏಕೆಂದರೆ, ಆ ಹೆಚ್ಚುವರಿ ರನ್‌ಗಳು ವ್ಯತ್ಯಾಸವನ್ನುಂಟು ಮಾಡಬಹುದಿತ್ತು. ಸಮಸ್ಯೆಗಳು ಕೈಬಿಟ್ಟ ಕ್ಯಾಚ್‌ಗಳಿಗೆ ಸೀಮಿತವಾಗಿಲ್ಲ. ಔಟ್‌ಫೀಲ್ಡ್ ಕೂಡ ಸಾಮಾನ್ಯವಾಗಿತ್ತು. ಫೀಲ್ಡಿಂಗ್ ಸಹ ಗುಣಮಟ್ಟಕ್ಕಿಂತ ಕೆಳಗಿತ್ತು. ಫೀಲ್ಡಿಂಗ್ ಟೆಸ್ಟ್ (ಅಂತರರಾಷ್ಟ್ರೀಯ) ಮಟ್ಟದಲ್ಲಿ ನಿರೀಕ್ಷಿಸಿದ ಉನ್ನತ ಗುಣಮಟ್ಟವನ್ನು ಹೊಂದಿರಲಿಲ್ಲ' ಎಂದು ಅವರು ಸೋನಿ ಸ್ಪೋರ್ಟ್ಸ್‌ನಲ್ಲಿ ಹೇಳಿದರು. 'ಬ್ಯಾಟಿಂಗ್ ಮಾಡಲು ತುಂಬಾ ಉತ್ತಮವಾದ ಪಿಚ್ ಆಗಿತ್ತು. ಬೌಲರ್‌ಗಳನ್ನು ಟೀಕಿಸುವುದು ತುಂಬಾ ಕಷ್ಟ. ಬುಮ್ರಾ ತುಂಬಾ ಚೆನ್ನಾಗಿ ಬೌಲಿಂಗ್ ಮಾಡಿದರು. ಅವರಿಗೆ ಯಾರಾದರೂ ಸಾಥ್ ನೀಡಿದ್ದರೆ, ಸ್ವಲ್ಪ ಬಿಗಿಯಾಗಿ ಇರಿಸಿಕೊಂಡಿದ್ದರೆ, ಅದು ದೊಡ್ಡ ಸಹಾಯವಾಗುತ್ತಿತ್ತು. ಆದರೆ, ಇದು ಮೊದಲ ಟೆಸ್ಟ್, ಆಶಾದಾಯಕವಾಗಿರಬೇಕು ಮತ್ತು ಪಾಠಗಳನ್ನು ಕಲಿಯಬೇಕು. ಮುಂದಿನ ಪಂದ್ಯಕ್ಕೆ ಎಂಟು ದಿನಗಳಿವೆ' ಎಂದರು. ಮುಂದಿನ ಒಂದೆರಡು ದಿನಗಳಲ್ಲಿ ನೀವು ಸ್ವಲ್ಪ ವಿಶ್ರಾಂತಿ ಪಡೆಯಬಹುದು, ಆದರೆ ಈಗ ಗಂಭೀರವಾಗಿ ಅಭ್ಯಾಸ ಮಾಡಿ. ಈ ಐಚ್ಛಿಕ ಅಭ್ಯಾಸವನ್ನು ಬದಿಗಿಡಿ. ನೀವು ಭಾರತಕ್ಕಾಗಿ ಆಡಲು ಇಲ್ಲಿಗೆ ಬಂದಿದ್ದೀರಿ. ಆದ್ದರಿಂದ, ನೀವು ಅತ್ಯುತ್ತಮವಾದದ್ದನ್ನು ನೀಡುವ ರೀತಿಯಲ್ಲಿ ಅಭ್ಯಾಸ ಮಾಡಿ' ಎಂದು ಅವರು ಹೇಳಿದರು.

# 7ನೇ ಸ್ಥಾನಕ್ಕೇರಿದ ರಿಷಭ್ ಪಂತ್



**ಲೀಡ್ಸ್ ಟೆಸ್ಟ್‌ನಲ್ಲಿ ಸಾಧನೆ**

ಭಾರತದ ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ ಲೀಡ್ಸ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಸರಣಿಯ ಮೊದಲ ಟೆಸ್ಟ್ ಪಂದ್ಯದಲ್ಲಿ ಅವಳಿ ಶತಕಗಳನ್ನು ಗಳಿಸಿ ದಾಖಲೆ ಮಾಡಿದ್ದು, ಇದೀಗ ಐಸಿಸಿ ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಏಳನೇ ಸ್ಥಾನಕ್ಕೇರಿದ್ದಾರೆ. ಟೀಂ ಇಂಡಿಯಾದ ಹೊಸ ಟೆಸ್ಟ್ ನಾಯಕ ಶುಭ್‌ಮನ್ ಗಿಲ್ ಐದು ಸ್ಥಾನ ಜಿಗಿದು 20ನೇ ಸ್ಥಾನಕ್ಕೆ ತಲುಪಿದ್ದಾರೆ. ಶುಭಮನ್ ಗಿಲ್ ಮೊದಲ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದರು. ಇಂಗ್ಲೆಂಡ್‌ಗೆ 371 ರನ್‌ಗಳ ಕಠಿಣ ಗುರಿಯನ್ನು ನೀಡಿದ ಹೊರತಾಗಿಯೂ, ಭಾರತ ತಂಡ ಸೋಲು ಕಂಡಿತು. ಐದು ವಿಕೆಟ್ ಅಂತರದ ಗೆಲುವು ಕಂಡ ಇಗ್ಲೆಂಡ್ ಸರಣಿಯಲ್ಲಿ 1-0 ಮುನ್ನಡೆ ಕಾಯ್ದುಕೊಂಡಿದೆ. ಐದು ಪಂದ್ಯಗಳ ಸರಣಿಯ ಮೊದಲ ಟೆಸ್ಟ್ ಪಂದ್ಯದಲ್ಲಿ ಎರಡು ಶತಕ ಬಾರಿಸಿದ ಎರಡನೇ ವಿಕೆಟ್ ಕೀಪರ್ ಎಂಬ ಹೆಗ್ಗಳಿಕೆಗೆ ಪಾತ್ರರಾದ ಪಂತ್, ಐಸಿಸಿ ರ‍್ಯಾಂಕಿಂಗ್ ಪಟ್ಟಿಯಲ್ಲಿ ಒಂದು ಸ್ಥಾನ ಮೇಲೇರಿದ್ದಾರೆ. ಲೀಡ್ಸ್‌ನಲ್ಲಿ ನಡೆದ ರೋಮಾಂಚಕ ಟೆಸ್ಟ್ ಪಂದ್ಯದಲ್ಲಿ ಪಂತ್ 134 ಮತ್ತು 118 ರನ್‌ಗಳಿಸಿದ್ದರು. ಈ ಮೊದಲು ಜಿಂಬಾಬ್ವೆಯ ಆಯಂಡಿ ಫ್ಲವರ್ ಒಂದೇ ಟೆಸ್ಟ್ ಪಂದ್ಯದಲ್ಲಿ ಎರಡು ಶತಕಗಳನ್ನು ಬಾರಿಸಿದ ಏಕೈಕ ವಿಕೆಟ್ ಕೀಪರ್ ಆಗಿದ್ದರು. ಇದೀಗ 27 ವರ್ಷದ ಪಂತ್ ಕೂಡ ಅವರೊಂದಿಗೆ ಸೇರಿಕೊಂಡಿದ್ದಾರೆ. ಕೆಎಲ್ ರಾಹುಲ್ ಸದ್ಯ 38ನೇ ಸ್ಥಾನದಲ್ಲಿದ್ದಾರೆ. ಹೆಡಿಂಗ್ಲಿಯಲ್ಲಿ ನಡೆದ ಟೆಸ್ಟ್‌ನಲ್ಲಿ ಮತ್ತೊಂದು ಐದು ವಿಕೆಟ್ ಗೊಂಚಲು ಪಡೆದ ನಂತರ ಭಾರತದ ವೇಗಿ ಜಸ್ಪ್ರೀತ್ ಬುಮ್ರಾ ಟೆಸ್ಟ್ ಬೌಲರ್‌ಗಳ ಶ್ರೇಯಾಂಕದಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. ಈಮಧ್ಯೆ, ಇಂಗ್ಲೆಂಡ್ ತಂಡದ ಗೆಲುವಿನಲ್ಲಿ 62 ಮತ್ತು 149 ರನ್ ಗಳಿಸಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದ ಬೆನ್ ಡಕೆಟ್, ಶ್ರೇಯಾಂಕದಲ್ಲಿ ಐದು ಸ್ಥಾನಗಳ ಏರಿಕೆ ಕಂಡು ಎಂಟನೇ ಸ್ಥಾನಕ್ಕೆ ತಲುಪಿದ್ದಾರೆ. ಡಕೆಟ್ ಅವರ ತಂಡದ ಸಹ ಆಟಗಾರರಾದ ಓಲಿ ಪೋಪ್ (ಮೂರು ಸ್ಥಾನಗಳ ಏರಿಕೆ ಕಂಡು 19ನೇ ಸ್ಥಾನ) ಮತ್ತು ಜೇಮೀ ಸ್ಮಿತ್ (ಎಂಟು ಸ್ಥಾನಗಳ ಏರಿಕೆ ಕಂಡು 27ನೇ ಸ್ಥಾನ) ಕೂಡ ಪಟ್ಟಿಯಲ್ಲಿ ಮೇಲೇರಿದ್ದಾರೆ. ಇಂಗ್ಲೆಂಡ್‌ನ ಅನುಭವಿ ಆಟಗಾರ ಜೋ ರೂಟ್ ಟೆಸ್ಟ್ ಶ್ರೇಯಾಂಕದಲ್ಲಿ ನಂ.1 ಸ್ಥಾನದಲ್ಲಿ ಮುಂದುವರಿದಿದ್ದಾರೆ. ತಂಡದ ಸಹ ಆಟಗಾರ ಹ್ಯಾರಿ ಬ್ರೂಕ್ ಅವರಿಗೆ ಹತ್ತಿರದ ಸವಾಲುಗಾರರಾಗಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966